ಸ್ಕಾಂದಪುರಾಣದೊಳಗಣ

ನಾಗ ವಿಜಯ

ಅಥವಾ

ನಾಗ ಸಿರಿ ಕನ್ಯೆ



★

ಲೇಖಕ ಮತ್ತು ಪ್ರಕಾಶಕ :

ಚಿ| ಬಲಿಪ ನಾರಾಯಣ ಭಾಗವತ,

ಪಡ್ರೆ ಗ್ರಾಮ, P. O. ಪಡ್ರೆ, ಕಾಸರಗೋಡು ತಾಲೂಕು.



ಸ್ಕಾಂದಪುರಾಣದೊಳಗಣ

ನಾಗ ವಿಜಯ

ಅಥವಾ

(ನಾಗ ಸಿರಿ ಕನ್ಯೆ)

★

ಲೇಖಕ ಮತ್ತು ಪ್ರಕಾಶಕ :

ಚಿ। ಬಲಿಪ ನಾರಾಯಣ ಭಾಗವತ,

ಪಡ್ರೆ ಗ್ರಾಮ, P. O. ಪಡ್ರೆ, ಕಾಸರಗೋಡು ತಾಲೂಕು.

★

1964

★

ಸಿರಿಗನ್ನಡ ಮುದ್ರಣಾಲಯ,

ಶ್ರೀರಾಮ ಪೇಟೆ, — ಕಾಸರಗೋಡು.

ರೂ. 0=75

ನಾಗವಿಜಯದೊಳಗಣ ಪಾತ್ರಗಳ ವಿವರ :

ದೇವೇಂದ್ರ	....	ನಾಗರಾಜ
ಜಯಂತ	....	ಪದ್ಮರಾಜ
ಅಗ್ನಿ	....	ವೀರಸೇನ
ವರುಣ	....	ಈಶ್ವರ
ಶಚಿ	....	ಸೂರ್ಯ
ನಾರದ	....	ಚಂದ್ರ
ಬ್ರಹ್ಮ	....	ಚಂಡಿ
ಸ್ವಯಂಪ್ರಭೆ	....	ಚಾಮುಂಡಿ
ವೀರಮಣಿ	....	ಶ್ರೀಕೃಷ್ಣ
ಶೂರಮಣಿ	....	ಅಗಸ
ಚಾರಕರು	....	ಬ್ರಾಹ್ಮಣ
ದಾರುಕ	....	ಕ್ಷೇತ್ರಪಾಲ

ಗೋವಾತೆ

★

ಮುನ್ನುಡಿ

ನಾಗಸಿರಿಕನ್ಯೆ ಅಥವಾ **"ನಾಗ ವಿಜಯ"**ವೆಂಬ ಕಥಾಭಾಗವನ್ನು ತುಳು ಪಾಡ್ದನಗಳಿಂದ ಸಂಗ್ರಹಿಸಿ ಕಳೆದ ೧೯೫೪ರಲ್ಲಿ ಈ ಕವಿತೆ ಬರೆದ ಭಾಗವತರಿಗೆ ಕೊಟ್ಟು ಇದನ್ನು ಪೊಳಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ಬಯಲಾಟ ಆಡಬೇಕೆಂದು ಹೇಳಿದೆ. ಅದಕ್ಕೆ ಅವರು ಒಪ್ಪಿ ನಾಗಸಿರಿಕನ್ಯೆಯೆಂಬ ಯಕ್ಷಗಾನ ಬಯಲಾಟವನ್ನು ಆಡಿಸಿದರು. ಆ ದಿನ ಆಟ ನೋಡಿದವರೆಲ್ಲರೂ ಬಹಳ ಸಂತೋಷ ಪಟ್ಟದ್ದು ಮಾತ್ರವಲ್ಲ, ಅದೇ ಪ್ರಸಂಗ ಹಲವು ಕಡೆಗಳಲ್ಲಿ ಆಡಿ ಪ್ರಸಿದ್ಧಿಗೆ ತಂದರು. ಎಲ್ಲಾ ಕಡೆಗಳಲ್ಲಿಯೂ ಜನರು ಕಿಕ್ಕಿರಿದು ನೆರೆಯುತ್ತಿದ್ದರು.

ಆದರೆ ಇದೇ ಕಳೆದ ಅಕ್ಟೋಬರ ತಾರೀಕು ೨೪ರಲ್ಲು ನನ್ನನ್ನು ಹುಡುಕಿ ಕೊಂಡು ಬಂದು ಸದ್ರಿ ಕಥೆಯ ಯಕ್ಷಗಾನ ಪ್ರಸಂಗ ಬರೆದು ಇದಕ್ಕೊಂದು ಮುನ್ನುಡಿ ಮತ್ತು ತಮ್ಮ ಅಭಿಪ್ರಾಯ ಕೊಡಬೇಕೆಂದು ಹೇಳಿದರು.

ಆದರೆ ಅದು ನನಗೆ ಹಲ್ಲು ಹೋದ ಅಜ್ಜಿಗೆ ಚಕ್ಕುಲಿ ತಿನ್ನಲಿಕ್ಕೆ ಕೊಟ್ಟಂತೆ ಆಯಿತು. ಯಾಕಂದರೆ ಯಕ್ಷಗಾನದ ಯಾವ ಅನುಭವವೂ ನನಗೆ ಇಲ್ಲದಿದ್ದರೂ ಅವರ ಮಾತಿಗೆ ಒಪ್ಪಿಕೊಂಡು ಈ ಮುನ್ನುಡಿಯನ್ನು ಬರೆದಿರುತ್ತೇನೆ.

ನಾಗಸಿರಿಕನ್ಯೆ ಯಾ "ನಾಗ ವಿಜಯ" ಎಂಬ ಕಥಾಭಾಗವು ಸ್ಕಾಂದ ಪುರಾಣದ ಮಹೇಶ್ವರ ಖಂಡದ ೧ನೇ ಕೇದಾರ ಖಂಡದ ೨೭ನೇ ಅಧ್ಯಾಯ ದಲ್ಲಿ ಈ ಕಥಾಭಾಗದ ಮೂಲವಾಗಿ ಹೀಗಿದೆ.

× × × × × ×

ಜಗದೇಕ ಬಂಧುವಾದ ಪರಶಿವನು ಕುಮಾರನಾದ ಷಣ್ಮುಖನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿ ಬಹಳ ಸಂತೋಷದಿಂದ ಆಡಿಸುತ್ತಿದ್ದನು. ಆಗ ಮಗುವು ಶಂಕರನ ಕೊರಳಿನಲ್ಲಿರುವ ಪದ್ಮಚೂಡನೆಂಬ ನಾಗನನ್ನು ಬಹಳ ವಾಗಿ ಹಿಂಸಿಸುತ್ತಾ ಆನಂದದಿಂದ ಆಟವಾಡುತ್ತಿದ್ದನು. ಈ ಸಂತೋಷದ ಆಟವನ್ನು ಗಿರಿಜೆಗೆ ತೋರಿಸಿದನು. ಗಿರಿಜೆಯು ಬಾಲಕನ ಆಟವನ್ನು ಬಾಲ ಲೀಲೆಯನ್ನು ಕಂಡು ಆನಂದಭರಿತಳಾದಳು.

× × × × × ×

ಆದರೆ ನಾಗರಾಜನು ಬಾಲಕನ ಹಿಂಸೆ ತಡೆಯಲಿಕ್ಕೆ ಸಾಧ್ಯವಿಲ್ಲದೆ ಬಹಳವಾಗಿ ಬಳಲಿದನು. ಅಂದಿನ ರಾತ್ರಿ ತನ್ನ ತಾಯಿಯ ಕೂಡೆ ಶಂಕರನಿಗೆ

ಪುತ್ರೋತ್ಸವವಾದ ಸುದ್ದಿಯನ್ನು ತಿಳಿಸಿ ಮಗುವಿನಿಂದ ತನಗಾದ ಗಾಯಗಳನ್ನು ತೋರಿಸಿದನು. ತಾಯಿಯು ಮಗನ ಮೇಲಿರುವ ಗಾಯಗಳನ್ನು ನೋಡಿ ಮರುಗಿ ಗಾಯಕ್ಕೆ ಗಿಡಮೂಲಿಕೆಗಳ ಮದ್ದು ಹಚ್ಚುವಾಗ, ಮಗನೇ, ನೀನು ದೇವತೆಗಳನ್ನು ನಂಬಬೇಡ! ಅವರಿಗೆ ಕೆಲಸವಿದ್ದರೆ ನಮ್ಮ ಬಳಿಗೆ ಓಡಿ ಬರುತ್ತಾರೆ. ನಮ್ಮನ್ನು ಬೇಕಾಗುವಷ್ಟು ಹೊಗಳುತ್ತಾರೆ. ನಮಗೆ ಆಪತ್ತುಗಳು ಬಂದರೆ ಕೇಳುವ ಗತಿಯಿಲ್ಲ. ಅಂದು ದೇವತೆಗಳು ತಮ್ಮ ಹಿತಕ್ಕಾಗಿ ದನುಜರನ್ನು ಕೂಡಿಕೊಂಡು ಸಮುದ್ರಮಥನ ಮಾಡಿದರು. ಅದರಲ್ಲಿ ಸಿಕ್ಕಿದ್ದನ್ನೆಲ್ಲಾ ಅವರೇ ಹಂಚಿಕೊಂಡರು. ವಿಷಕುಡಿದ ಶಂಕರನ ಜ್ವಾಲೆ ಪರಿಹಾರಕ್ಕೆ ನೀವು ಬೇಕಾಯಿತು. ಆದರೆ ನಿಮ್ಮಣ್ಣ ವಾಸುಕಿಯನ್ನು ಯಾರೂ ಕಣ್ಣೆತ್ತಿ ನೋಡಲಿಲ್ಲ. ನಾನು ಮತ್ತು ನಿನ್ನ ಸಹೋದರಿಯರು ಪಾಲನೆ ಮಾಡದಿದ್ದರೆ ಅವನ ಗತಿ ಏನಾಗುತ್ತಿತ್ತೋ?

× × × × × ×

ಈಗ ನೀನು ಶಂಕರನ ಕೂಡೆ ನಿನ್ನ ತಂಗಿ ಮತ್ತು ಅವಳ ಸಂತತಿಗೆ ನಿರ್ಭಯವಾಗಿರುವಂತೆ ಒಂದು ಯೋಗ್ಯ ಸ್ಥಳವನ್ನು ಅರಿಸು! ನನ್ನ ಹೆಣ್ಣು ಮಕ್ಕಳ ಸಂತತಿಯನ್ನು ನೀನೇ ಕಾಪಾಡಬೇಕೆಂದು ಹೇಳಿದಳು

× × × × × ×

ನಾಗರಾಜನು ಶಂಕರನ ಬಳಿಗೆ ಬಂದು ಆತನನ್ನು ಬಹಳವಾಗಿ ಸ್ತೋತ್ರ ಮಾಡಿ ನನ್ನ ತಾಯಿ ಮತ್ತು ಅವಳ ಹೆಣ್ಣುಮಕ್ಕಳು ನಿರ್ಭಯವಾಗಿ ವಾಸ ಮಾಡಿಕೊಂಡಿರಲಿಕ್ಕೆ ಒಂದು ಸ್ಥಳವನ್ನು ತೋರಿಸಬೇಕೆಂದು ಬೇಡಿಕೊಂಡನು.

× × × × × ×

ಎಲೈ ನಾಗರಾಜನೇ ನೀನು ಕೂಡಾ ನನ್ನಂತೆಯೇ ಐದು ತಲೆಗಳಿರುವವನಾದ್ದರಿಂದ ನೀನು ನಾಗರಿಗೆ ಚಿರ್ನನಾಗಿರುವಿ. ನಿನ್ನ ಜತೆಯಲ್ಲಿಯೇ ಕುಮಾರನೂ ಅವನ ಪತ್ನಿ ಕಾಲಕನ್ಯೆಯೂ ಮತ್ತು ನನ್ನ ಗಣಗಳೂ ವಾಸ ಮಾಡಿಕೊಂಡಿರಲಿಕ್ಕೆ ಒಂದು ಯೋಗ್ಯ ಸ್ಥಳವಿರುವುದು.

× × × × × ×

ಆ ಪುಣ್ಯಕ್ಷೇತ್ರವು ನವೀನ ಸೃಷ್ಟಿಯಾಗಿರುವುದು. ಒಮ್ಮೆ ನಿನ್ನ ಅಣ್ಣನಾದ ವಾಸುಕಿಗೂ, ವಾಯುವಿಗೂ, ತಾವು ಬಲಿಷ್ಠರೆಂಬ ವಿವಾದವಾಗಿ ಶಕ್ತಿ ಪರೀಕ್ಷೆಯ ಕಾಲದಲ್ಲಿ ವೃಷಭಾಚಲ ಪರ್ವತಕ್ಕೆ ಸುತ್ತುಹಾಕಿದ ವಾಸುಕಿಯನ್ನು ಸಮೇತ ಆಕಾಶದಲ್ಲಿ ಹಾರಿಸುವಾಗ ಅದರಿಂದ ಸಿಡಿದು ಬಿದ್ದ

ಸಮುದ್ರ ಕಿನಾರೆಯಲ್ಲಿ ೩೦೦ ಯೋಜನ ಉದ್ದ ಹಾಗೂ ೬೦ ಯೋಜನ ಅಗಲದ ಪ್ರದೇಶವು ಸಹ್ಯಾಚಲ ತಪ್ಪಲಿನಲ್ಲಿ ನಿನ್ನ ಅಣ್ಣ ವಾಸುಕಿಯ ಅಧೀನದಲ್ಲಿರುತ್ತದೆ. ಅದರಲ್ಲಿ ಆಕಾಶ ಭೂಮಿ-ಅಗ್ನಿ-ನೀರು ಆಹಾರ ಔಷಧಿ ಹಿರಣ್ಯಾದಿ ಧಾತುಗಳು, ನವರತ್ನಗಳು ಭರಿತವಾಗಿರುತ್ತವೆ. ಆ ಭೂಮಿಯ ರಕ್ಷಣೆಯನ್ನು ನನ್ನ ಗಣಗಳು ಮಾಡುತ್ತಿರುವರು. ಅಲ್ಲಿ ನಿನ್ನ ನಾಗಕನ್ನಿಕೆಯರಿಂದ ಮನುಷ್ಯರನ್ನು ಉಂಟುಮಾಡು. ಆಗ ಅದು ಅಜೇಯವಾದ ಸ್ತ್ರೀ ರಾಜ್ಯವೆಂದು ಪ್ರಸಿದ್ಧಿಯಾಗಿ ಸ್ವರ್ಗಲೋಕಕ್ಕಿಂತಲೂ ಮಿಗಿಲಾಗುವುದು.

ಅಲ್ಲಿ ನೀನು ನಾಗಬೆರ್ಮನಾಗಿ ಕುಮಾರನ ಕೂಡುವಿಕೆಯಿಂದ ನಿನ್ನ ಹೆಣ್ಣು ಸಂಸಾರವನ್ನು ರಕ್ಷಿಸಿಕೊಂಡಿರು ಎಂದು ಹೇಳಿದನು. ನಾಗ ಸಹೋದರರು ಜನರನ್ನು ಸೃಷ್ಟಿಮಾಡಿದ ದಿವಸವನ್ನು ತುಳುವರು "ಸುಬ್ರಾಯ ಷಷ್ಠಿ" ಎಂದು ಹೇಳುವರು. ಮಾತ್ರವಲ್ಲ ನಾಗಾರಾಧನೆ ಉತ್ಸವಗಳನ್ನು ಎಲ್ಲಾ ಕಡೆಯಲ್ಲಿಯೂ ಆಚರಿಸುವರು.

ನಾಗಸಿರಿಕನ್ಯೆಯೆಂಬ ಕಥಾ ಭಾಗವು ನಾಗ ಸಾಹಿತ್ಯ (ತುಳುಪಾಡ್ದನ) ದಿಂದ ಸಂಗ್ರಹಿಸಿದ್ದಾಗಿರುತ್ತದೆ.

ತುಳು ನಾಡಿನಲ್ಲಿ ಆಚರಿಸುವ ಹೆಣ್ಣು ಮೂಲವಾದ ಮಗಳ ಕಟ್ಟನ್ನು ನಾಗ ವಂಶಜರಾದ ತುಳುವರು ಆಚರಿಸಿಕೊಂಡು ಬರುತ್ತಾರೆ.

ತುಳು ನಾಡು ಪ್ರಾಂತ್ಯವೇ ನಾಗಲೋಕವೆಂದು ತುಳು ಸಾಹಿತ್ಯಗಳಿಂದ ತಿಳಿದುಬರುತ್ತದೆ.

× × × × × ×

ಅದು ಹೇಗೂ ಇರಲಿ. ನನಗೆ ಈ ಯಕ್ಷಗಾನದ ಅನುಭವವಿಲ್ಲ. ಆದರೂ ಇದರಲ್ಲಿ —

"ಚಿಂತಿಸದಿರು ಗುಣವಂತೆ, ಸ್ವಯಂಪ್ರಭೆ" ಎಂದು ಬ್ರಹ್ಮನು ಹೇಳುವ ಪದ್ಯ ಮತ್ತು "ಲಾಲಿಸೈ ವೀರಸೇನ ದೊರೆಯೇ" ಎಂದು ವೀರಸೇನನಿಗೆ ಚಾರಕನು ಹೇಳುವ ಪದ್ಯವು ಕಾವ್ಯಶಾಸ್ತ್ರದಲ್ಲಿ ಹೇಳುವಂತೆ ಕಾಂತಿಗುಣದಿಂದ ಕೂಡಿದ್ದಾಗಿರುತ್ತದೆ. ಮಾತ್ರವಲ್ಲ ಎಲ್ಲಾ ಪದ್ಯಗಳೂ ಆಯಾ ಪಾತ್ರದ ಪಾತ್ರ ಪೋಷಣೆಗೆ ಮತ್ತು ಅರ್ಥ ಪೋಷಣೆಗೆ ಯೋಗ್ಯವಾಗಿರುತ್ತವೆ ಎಂದು ಮಾತ್ರ ಹೇಳಬಲ್ಲೆ !

ಈ ಯಕ್ಷಗಾನ ಪ್ರಸಂಗವನ್ನು ರಚಿಸಿದ ಕವಿಯು ನನ್ನ ಮಿತ್ರರಾದ ಮಾನ್ಯ ಶ್ರೀ ಬಲಿಪ ನಾರಾಯಣ ಭಾಗವತರ ತಮ್ಮನ ಪುತ್ರ ಮಾಧವ ಭಟ್ಟರ

ಕುಮಾರ ಚಿರಂಜೀವಿ ನಾರಾಯಣ ಭಾಗವತರು. ಇವರು ಬರೇ ಎಳೆಯ ಪ್ರಾಯದಲ್ಲಿಯೇ ಯಕ್ಷಗಾನದ ಅನುಭವಿಗಳು. ಮಾತ್ರವಲ್ಲ ಇವರ ಹಿರಿಯ ಶ್ರೀ ಬಲಿಪ ನಾರಾಯಣ ಭಾಗವತರು ನವೀನ ಭಾಗವತರ ಪರಂಪರೆಯವರಾಗಿರುತ್ತಾರೆ. ಇವರಿಗೆ ಪೊಳಲಿ ಶ್ರೀ ರಾಜರಾಜೇಶ್ವರೀ ಅಮ್ಮನವರು ದೀರ್ಘಾಯುರಾರೋಗ್ಯ ಭಾಗ್ಯ ಸಂಪತ್ತನ್ನು ದಯಪಾಲಿಸಿ ತುಳು ನಾಡಿನ ಯಕ್ಷಗಾನ ಭಾಗವತರಲ್ಲಿ ಅಗ್ರಸ್ಥಾನ ಪಡೆಯಲೆಂದು ಆ ಮಹಾದೇವಿಯನ್ನು ಪ್ರಾರ್ಥಿಸುವ,

ಎನ್. ಎ. ಶೀನಪ್ಪ ಹೆಗಡೆ,
ಪೊಳಲಿ P. O,
ಅಮುಣುಂಜೆ ಗುತ್ತು "ಪ್ರಾಚೀನ ತುಳು ನಾಡಿನ ಗ್ರಂಥಕರ್ತ."
೧—೧೧—೧೯೬೧

ನಾಗಸಿರಿಕನ್ಯೆ ಅಥವಾ ನಾಗ ವಿಜಯ

ಟಿಪ್ಪಣಿ

ಹೆಣ್ಣು ಮೂಲವಾದ ಸ್ತ್ರೀರಾಜ್ಯದ ಪದ್ಧತಿಯೇ ಮಗಳಕಟ್ಟು. ಇದನ್ನು ತುಳುವರು "ಬೂತೋಲು ಪಂಡಿನ ಕಟ್ಟು" (ಅಲುವೆರೆನ ಕಟ್ಟಳೆ) ಎಂಬುದನ್ನು ಕನ್ನಡಿಗರು ರಚನೆಮಾಡಿ ಅದಕ್ಕೆ "ಭೂತಾಳಪಾಂಡ್ಯನ ಅಳಿಯಕಟ್ಟು" ಎಂಬ ಕನ್ನಡದ ಹೆಸರನ್ನು ಕೊಟ್ಟಿರುತ್ತಾರೆ. ಆದರೆ ತುಳುವರು ಅರಾಧಿಸುವ ದೈವಗಳು ಹೆಣ್ಣು. ದೇವರು ಶ್ರೀ ದುರ್ಗಾಪರಮೇಶ್ವರೀ ಅಮ್ಮನವರು. ಮತ್ತು ಅವರು ಆಡುವ ಭಾಷೆ ಹೆಣ್ಣು ಅದಕ್ಕೆ ಗಂಡು ಅಕ್ಷರಗಳ ಉಪಯೋಗವಿಲ್ಲ. ಅವರ ಆಸ್ತಿ, ಭೂಮಿ, ಸೊತ್ತುಗಳು ಹೆಂಗಸರ ಹಕ್ಕಿನದ್ದಾಗಿದ್ದ ಕಾರಣ – ಭೂಮಿ, ದೇವರು – ಭಾಷೆ, ಈ ಮೂರು ಹೆಣ್ಣಾದ್ದರಿಂದ ಪುರಾಣ ಬರೆದ ಕವಿಗಳು ನಾಗಲೋಕವನ್ನು ಸ್ತ್ರೀರಾಜ್ಯವೆಂದು ವರ್ಣಿಸಿರುತ್ತಾರೆ. ಯಾಕೆಂದರೆ ಇಲ್ಲಿ ನಾಗನಿಲ್ಲದ ಭೂಮಿಯೇ ಇಲ್ಲದ್ದರಿಂದ ಇದು ನಾಗಲೋಕವೆಂಬುದಕ್ಕೆ ಯಾವ ಅನುಮಾನವೂ ಇಲ್ಲ.

ಹೆಚ್ಚಿನ ವಿವರಗಳಿಗೆ

ಪ್ರಾಚೀನ ತುಳುನಾಡೆಂಬ ಗ್ರಂಥ ನೋಡಿರಿ !

ಲೇಖಕನ ಮಾತು

ಈ ನಾಗಶಿರಿಕನ್ನೆಯಾ ನಾಗವಿಜಯವೆಂಬ ಕಥಾಭಾಗವನ್ನು ಶ್ರೀವಾನ್ ಪೊಳಲಿ ಶೀನಪ್ಪ ಹೆಗ್ಡೆಯವರು ಸಂಗ್ರಹಿಸಿಕೊಟ್ಟರು. ಅವರು ಆಟ ಆಡಿಸ ಬೇಕೆಂದು ಹೇಳಿದುದರಿಂದ ನಾನು ಕೆಲವು ಕಡೆ ಆಟಗಳನ್ನು ಆಡಿಸಿ (ನಾಗ ಕನ್ನಿಕಾ) ನಾಗ ವಿಜಯ ಎಂಬ ಪ್ರಸಂಗವಾಗಿ ಪ್ರಚಾರಪಡಿಸಿದೆ. ಹಲವು ಮಹನೀಯರು ಇದನ್ನು ಮುದ್ರಿಸಬೇಕಾಗಿ ಹೇಳಿದುದರಿಂದ ಈ ಕಥೆಯನ್ನು ಯಕ್ಷಗಾನ ಪ್ರಸಂಗರೂಪದಲ್ಲಿ ಬರೆದು ಪ್ರಕಟಿಸಿರುತ್ತೇನೆ. ಅನೇಕ ತಪ್ಪು ಒಪ್ಪುಗಳು ಇದರಲ್ಲಿ ಇರಬಹುದು. ಅದನ್ನು ತಿಳಿದ ಕಲಾಭಿಮಾನಿಗಳು ಕ್ಷಮಿಸಿ ನನ್ನನ್ನು ಮತ್ತು ಕೃತಿಯನ್ನು ಪ್ರಚಾರಗೊಳಿಸಿ ಪ್ರೋತ್ಸಾಹಿಸಬೇಕಾಗಿ ಸಮಸ್ತರಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ.

— ಚಿ| ಬಲಿಪ ನಾರಾಯಣ ಭಾಗವತ.



ಚಿ. ಬಲಿಪ ನಾರಾಯಣ ಭಾಗವತ

ಸ್ಕಾಂದಪುರಾಣಾಂತರ್ಗತ

ನಾಗಸಿರಿಕನ್ಯೆ ಅಥವಾ ನಾಗವಿಜಯ

॥ ಶಾರ್ದೂಲ ವಿಕ್ರೀಡಿತಂ ॥

ಶ್ರೀಕಾಂತಂ ಸರಸೀರುಹಾಕ್ಷ ಸುಜನೋದ್ಧಾರಪ್ರಿಯಂ ಕೇಶವಂ ।
ನಾಕೇಶಾದ್ಯಮರೌಘ ಸೇವ್ಯ ನಿರತಂ ದುರ್ಜನಕುಲ ಘಾತಕಂ ॥
ಲೋಕಾನಂದ ಮುಕುಂದ ವೇದಧರಣಂ ಚಂದ್ರಾರ್ಕಕೋಟಿ ಪ್ರಭಂ ।
ಶ್ರೀಕಂತಪ್ರಿಯ ಚಿನುಮಯಂ ಸುರುಚಿರಂ ಧ್ಯಾಯಾಮಿ ಚಿತ್ತೇ ಸದಾ
॥ ೧ ॥

॥ ರಾಗ ನಾಟಿ ರೂಪಕತಾಳ ॥

ಜಯ ಜಯ ಮೂಷಿಕವಾಹನ । ಜಯ ಪಾಶಾಂಕುಶಧಾರಣ ॥ ಜಯ ಜಯ ಶಾಪವಿಮೋಚನ । ಜಯ ಸದ್ಗುಣ ಸದನಾ ॥ ೧ ॥ ಬೆಟ್ಟಕುಮಾರಿಯ ನಂದನ । ದುಷ್ಟರ ಕುಲ ಸಂಹಾರಣ ॥ ಶಿಷ್ಟ ನೆರವಿ ಪರಿಪಾಲನ । ಇಷ್ಟ ಪ್ರದಾಯಕನಾ ॥ ೨ ॥ ವಾರಣವಕ್ತ್ರ ಗುಣಾರ್ಣವ । ಪಾರಮಹಿಮ ಹರ ಸಂಭವ ॥ ಘೋರ ದುರಿತ ಭವ ಭಯ ಶೃಂ। ಗಾರ ವಿಚಾರಕರಾ ॥ ೩ ॥ ಕರುಣಾಕರ ಲಂಬೋದರ । ಸುರ ಸೇವ್ಯನೆ ಜಗದೀಶ್ವರ । ತರಣಿ ಪ್ರಕಾಶ ಶುಭಾನ್ವಿತ । ಪೊರೆಯೈ ಗಣನಾಥಾ ॥ ಜಯ ಜಯ ॥ ೪ ॥

॥ ವಾರ್ಧಿಕ್ಯ ॥

ಹರಿ ಹರ ಗಣಾಧೀಶನಂ ಕಮಲ ಸಂಭವನ । ಸುರಪಾದಿ ದಿಕ್ಪಾಲ ಸಪ್ತಋುಷಿಗಳ ಬುಧರ । ಸಿರಿ ಗೌರಿ ವಾಣಿ ಗುರುಹಿರಿಯು ವಾಲ್ಮೀಕಾದಿ ಪೂರ್ವಕವಿಗಳಿಗೆರಗುತಾ ॥ ಪರಮ ಸ್ಕಾಂದಪುರಾಣ ದೊಳಗೊಪ್ಪಿರುವ ನಾಗ । ಸಿರಿಕನ್ಯೆ ಯೆಂಬ ಕಥೆಯುಂ ಯಕ್ಷಗಾನ ದಿಂ । ದೊರವೆ ನಾ ತಿಳಿದಂತೆ ತಪ್ಪಿರಲು ತಿದ್ದಿ ಸುಜನರ್ಹರಸುವುದು ಸರ್ವದಾ ॥ ೧ ॥

॥ ರಾಗ ಮಧ್ಯಮಾವತಿ ತ್ರಿಪುಟತಾಳ ॥

ಅಮಿತ ಮಾಯಾತೇಜವನು ಸಂ । ಭ್ರಮದಿ ವಿಧಿ ನಳಿನಿಯಲಿ ಸೃಷ್ಟಿಸಿ ॥ ಸಮತೆಯಿಂ ಪಾಲಿಸುತ ಮೆರೆದಿರೆ । ಕಮಲ ಸಂಭವ ಹರು ಷದೀ ॥ ಪುರವರದಲೀ ॥ ೧ ॥ ವೇದ ಶಾಸ್ತ್ರ ಪುರಾಣ ಸಕಲವ । ನೋದಿ ತಿಳಿದಾ ಸತಿ ಶಿರೋಮಣಿ ॥ ಆದಿಕರ್ತನ ಮನಕೆ ಬೇಸರ । ಬಾಧಿಸದ ತೆರ ದೆಸೆದಳೂ ॥ ದಿನದಿನಕ್ಕೆ ॥ ೨ ॥ ರೂಪು ಕಲೆ ವರ್ಧಿ ಸುತ ಮದನನ । ತಾಪದಿಂ ಬೆಂಡಾಗಿ ಸುತೆ ಬಂ ॥ ದಾಪದಕೆ ಮಣಿ ವುತ್ತ ನಿಂದಿರೆ । ತಾ ಪರೀಕ್ಷಿಸಿ ನುಡಿದನೂ ॥ ಕಮಲಜಾತಾ ॥ ೩ ॥

॥ ರಾಗ ಕಲ್ಯಾಣಿ ತ್ರಿಪುಟತಾಳ ॥

ಪೊಸತಾಗಮನವಿದೇನೇ । ಮದಗಜಯಾನೆ । ಪೊಸತಾಗಮನ ವಿದೇನೇ ॥ ಶಶಿಮುಖಿಯೆ ಬಲು ವ್ಯಸನದಿಂ ನೀ । ಬಸವಳಿದು ಪದ ಬಿಸಜಕೆರಗಿಹೆ । ವಿಷಯವೇನದನುಸುರು ನಾ ಸಂ । ತಸವ ಗೊಳಿಸುವೆ ಕುಸುಮಗಂಧಿಸೀ ॥ ಪೊಸತಾಗಮನವಿದೇನೇ ॥ ೧ ॥ ಜರದರೇ ಸಖಿ ಯರ್ನಿನ್ನಾ । ಸೇವೆಯಲಿ ಹಿಂ । ಜರಿದರೆ ಪೇಳೆ ಚಿನ್ನಾ ॥ ಮೆರೆವ ರತ್ನಾಭರಣದೊಳಗತಿ । ಕೊರತೆಯಾದುದೆ ತರಳೆ ನಿನ್ನೊಳು । ಎರೆಯು ನಲಿ ಮನವೆರದು ಚಿಂತೆಯ । ನರುಹೆ ಬಂದೆಯ ಸರಸಿಜಾನನೇ ॥ ಪೊಸತಾಗಮನವಿದೇನೇ ॥ ೨ ॥

॥ ರಾಗ ಹನುಮತೋಡಿ ಅಟತಾಳ ॥

ಚಿತ್ತವಿಸೆನ್ನಯ ಮಾತಾ । ನಾನು । ಬಿತ್ತರಿಸುವದ ವಿಧಾತಾ ॥

ಉತ್ತಮ ನೀನಾದಿಕರ್ತ ಮಹಾತ್ಮ ಪ । ವಿತ್ರನೆ ಮರಕ್ತೆಯ ಪುತ್ರಿ ವಿಚಾರವ ॥ ೧ ॥ ಮೆರದಿರಲುದ್ಯಾನದೊಳಗೇ । ಜಲ । ವೆರದು ಪೋಷಿಸಿ ಲತೆಗಳಿಗೇ ॥ ಹೆರುಷದಿ ಫಲಗಳಂಕುರಿಸುವ ಕಾಲಕೆ । ಮುರತು ಕುಳ್ಳೀರ್ದರೆ ಬರಿದಪ್ಪುದಲ್ಲವೇ ॥ ೨ ॥ ನಾರಿ ಪಂಡಿತ ಲತೆಗೆಲ್ಲಾ । ಆ । ಧಾರವಿಲ್ಲದೆ ಪೋದಡೆಲ್ಲಾ ॥ ರಾರಾಜಿಸುವಡೆ ವಿಚಾರಿಸು ನೀ ನುಡಿ । ಸಾರವನೆಲ್ಲವ ಸಾರಸ ಸಂಭವ ॥ ೩ ॥

॥ ಆರ್ಯಾಸಪ್ತ ॥

ಚಿಂತಿಸದಿರು ಗುಣವಂತೆ ಸ್ವಯಂಪ್ರಭೆ । ಅಂತರ್ಯದ ನಿಜವಂ ತಿಳಿದೇ ॥ ಎಂತೊದಗಿಪೆ ನಾ ಕಂತು ಸಮಾನ ಪ್ರ । ಶಾಂತನೆನಿಪ ಕಾಂತನ ಮುಗುದೇ ॥ ೧ ॥ ನಿನಗೆಣೆಯಾಗಿಹ ಯಿನಯನ ತಿಳಿಯುದೆ । ಮನ ಕರಗುವೆ ನಾ ಹಗಲಿರುಳೂ ॥ ನೆನನೆನವುತ ನೀ ದಣಿಯುದಿರದಕೆನೆ । ಜನಕಗೆರಗಿ ಬಿನ್ನೈಸಿದಳೂ ॥ ೨ ॥

॥ ಭಾಮಿನಿ ॥

ಎನಗೆಣೆಯ ವಲ್ಲಭನ ಹುಡುಕಲು । ದಣಿಯಲೇತಕೆ ಪೇಳ್ವಿಯುಕ್ತಿಯ । ಘನಮಹಿಮ ನೀನೆನಗೆ ಸೊಗಸಾಗಿರುವ ಪುರವರವಾ ॥ ವಿನಯದಿಂ ಗೈದಿತ್ತು ಬಾಳಿರ । ಲೆನಗೆ ಕಾಲವನಿಟ್ಟುದಾದರೆ । ಅನಕನಾ ಸ್ತ್ರೀರಾಜ್ಯದಂದದಿ ಮೆರವೆ ನಿಶ್ಚಯವೂ ॥ ೧ ॥

॥ ಕಂದ ಪದ್ಯ ॥

ಯಾರಾದರು ವರಿಸುವದಕೆ । ಹಾರೈಸುತ ಬಂದು ಕೇಳ್ದುದಾದರವರ ಪುರ ॥ ಭೂರಿ ಸುಭಾಗ್ಯಾಧಿಪತನ । ಸೇರಿಸಿದಾತನನು ಸೇರ್ವೆ ನೆನಲವನೆಂದಂ ॥ ೧ ॥

॥ ರಾಗ ಭೈರವಿ ಝುಂಪೆತಾಳ ॥

ಸರಿಯಹುದು ಕುವರಿ ನೀ । ನೊರೆದ ನುಡಿಯಂತೆ ನಾ ॥ ಪುರವರವ ರಚಿಸಿ ನೆಲ । ಸಿರುವ ತೆರಗೈವೇ ॥ ೧ ॥ ಎನುತ ಸ್ತ್ರೀರಾಜ್ಯವನು ವನಜ ಸಂಭವ ಸೃಜಿಸಿ ॥ ಘನ ವೀರಮಣಿ ಶೂರ । ಮಣಿ

ಯೆಂಬ ವರನೂ ॥ ೨ ॥ ಪುರದ ರಕ್ಷಣೆಗಿರಿಸಿ । ಮೆರೆವ ರಾಜಾಜ್ಞೆಗಳ ॥ ಬರದ ಪಠ ಬಾಗಿಲಲಿ । ಯಿರಿಸಿ ವೈಭವದೀ ॥ ೩ ॥ ತರಳೆ ಪೇಳ್ದಂತೆ ಸರ । ಸಿರುಹ ಭವ ಸಿರೆ ಸುತೆಗೆ ॥ ವರನ್ಯಾವನೆಂದು ಮನ । ಕರಗುತ್ತಲೀರ್ದಾ ॥ ೪ ॥

॥ ಭಾಮಿನಿ ॥

ಮುನಿಪನಾರದನಿತ್ತ ಚಿತ್ತದೊ । ಳೆಣಿಸಿದನು ಶತಮುಖನ ಗರ್ವವ । ಘನತರೋಕ್ತಿಯೊಳಿಳಿಸುವೆನು ವಿಧಿ ಸುತೆಯ ಮುಖದಿಂದಾ ॥ ವಿಸಯದಿಂ ವಿಧವಿಧದಿ ಪೊಗಳುತ । ಮನಕೆ ಮೆಚ್ಚಿಸಿ ಮಾನಭಂಗವ । ನನುಗೊಳಿಪೆ ತಾನೆಂದು ಪೊರಟನು ಸ್ವರ್ಗಪುರವರಕೇ ॥ ೧ ॥

॥ ರಾಗ ಕಾಂಬೋಧಿ ಝಂಪೆತಾಳ ॥

ಇತ್ತ ನಿರ್ಜರರೊಡೆಯ ನರ್ತಿಯಿಂದೋಲಗವ । ನಿತ್ತ ಸುಮನಸರನೊಡಗೊಂಡೂ ॥ ಉತ್ತಮನು ತಾನೆ ಜಗಕತ್ಯಧಿಕನೆಂದು ಸುರ । ವೊತ್ತೊದೊಡನೆಂದ ಗರ್ವದಲೀ ॥ ೧ ॥ ಮೂಲೋಕದೊಳು ನಮಗೆ ಮೇಲೆನಿಸಿದವರುಂಟೆ । ಕಾಲಕಾಲದಿ ಧರೆಯ ಜನರೂ ॥ ಏಳಿಗೆಯ ಬಯಸಿ ಯಾಗಾರ್ಪಣ ಹವಿಸ್ಸು ಸುರ । ಜಾಲಕೀಯುತ್ತ ಬಾಳುವರೂ ॥ ೨ ॥ ವಾರಿಧಿಯ ಮಥನದಲಿ ಮೂರು ಮೂರ್ತಿಗಳಿತ್ತ । ಭೂರಿ ಸೌಭಾಗ್ಯದಲಿ ನಮಗೇ ॥ ಸೇರಿಹುದೆ ಕೊರತೆ ಶೃಂಗಾರ ಚೆಲುವಿಕೆಯೆಮ್ಮ । ನಾರಿಯರಿಗಲ್ಲದಿನ್ನಿಹುದೇ ॥ ೩ ॥ ದಾಯಾದ್ಯರೆಮ್ಮೊಡನಸೂಯೆಯಿಂ ಬರಲು ಘನ । ಪಾಯ ಶೋಧಿಸುತ ಹರಿಹರರೂ ॥ ಆಯುಷ್ಯ ಮುಗಿಸುತ ಸಹಾಯವಿತ್ತೆಮ್ಮವರ । ಧ್ಯೇಯವನ್ನೀಯುವರು ನಿರತಾ ॥ ೪ ॥ ಖೇದ ಹೊದ್ದದ ತೆರದಿ ಬೋಧಿಸುತ ಗುರುವು ಶುಭ । ಹಾದಿ ತೋರಿಸುವನಡಿಗಡಿಗೇ ॥ ಆದಿತೇಯರಿಗೆಣೆಗಳಾದವರು ಯಾರೆನಲು । ಮಾಧವನ ನುತಿಸಿ ಸುರಮುನಿಪಾ ॥ ೫ ॥

॥ ಕಂದ ಪದ್ಯ ॥

ಬರಲಾ ಶಕ್ರನ ಸಭೆಗಂ । ಪರಿಕಿಸಿ ಕರತರುತಲಾಸನವನೀ । ಯುತ್ತಂ ॥ ಪರಿಪರಿಯಿಂ ಪೂಜಿಸುತ್ತ । ಹೆರುಪದೊಳು ಸಕಲ

ವಿಚಾರವ ಗೈದನಾಗಂ ॥ ೧ ॥

॥ ರಾಗ ಬೇಗಡೆ ಅಟತಾಳ ॥

ಎತ್ತಣಿಂದಾಗಮನ ಮುನಿವರ್ಯ । ವಿಧಿ ಮಾನಸೋದ್ಭವ । ಚಿತ್ತರಿಸು ನೀ ಬಂದಿರುವ ಕಾರ್ಯ ॥ ಪೃಥ್ವಿಪಾಲರ ಮೊತ್ತ ಕುಶಲವೆ । ಕೃತ್ರಿಮದಿ ಮುಂದೊತ್ತಿ ದೈತ್ಯರು । ನಿತ್ಯ ಬಾಳ್ವರೆ ವಿಸ್ತರಿಸು ಪೊಸ । ವಾರ್ತೆಗಳನು ಮಹಾತ್ಮ ಬೇಗದಿ ॥ ಎತ್ತಣಿಂದಾಗಮನ ॥ ೧ ॥ ದುಷ್ಟರನು ಸಂಹರಿಪ ಯತ್ನದಲೀ । ನೀ ನಿರತ ಬಹು ಸಂ । ಕಷ್ಟ ಪಡುತಿಹೆ ಚರಿಸಿ ಲೋಕದಲೀ ॥ ಸೃಷ್ಟಿ ಸ್ಥಿತಿ ಲಯ ಕರ್ತರಿಗೆ ಕೈ । ಗೊಟ್ಟು ಜಗ ಸಂತುಷ್ಟಿ ಪಡಿಸುವ । ಕಟ್ಟಳೆಗೆ ಮನವಿಟ್ಟು ದಣಿಯುವ । ಶ್ರೇಷ್ಠನೆನೆ ಮುದವೆತ್ತು ನುಡಿದನು ॥ ಎತ್ತಣಿಂದಾಗಮನ ॥ ೨ ॥

॥ ರಾಗ ಸುರುಟಿ ಏಕತಾಳ ॥

ಕೇಳು ನಿರ್ಜರೇಂದ್ರ । ನಿನ್ನೊಳು । ಪೇಳ್ವದ ಗುಣಸಾಂದ್ರಾ ॥ ನೋಲೆನಿಸುವ ಸೌಭಾಗ್ಯದಿ ನಿನಗೆಣೆ । ಮೂಲೋಕದೊಳಿನ್ನಾರಿಹರರುಹೈ ॥ ೧ ॥ ಇರುವದೊಂದು ಕೊರತೇ । ಅದರಿಂ । ಬರಿದಾಗಿದೆ ಘನತೇ ॥ ಸುರಪುರದೊಳಗಿಹ ತರುಣಿಯರಿಂದಲಿ । ಸರಿಮಿಗಿಲೆನಿಸುವಳಿರುವಳು ಲೋಕದಿ ॥ ೨ ॥ ಸಿರಿ ಗೌರೀ ರತಿಗೇ । ರೂಪದೊ । ಳಿರುವಳಿಮ್ಮಡಿ ಸುತೆಗೇ । ಸರಸಿಜ ಭವನತಿ ಹರುಷದಿ ಸೃಜಿಸಿಹೆ । ತರಳೆಯು ನಿನಗಿಂದೆರಕಳು ನಿಶ್ಚಯ ॥ ೩ ॥

॥ ಭಾಮಿನಿ ॥

ಆದಕಾರಣ ಪೋಗಿ ನೀ ವೊದ । ಲಾದಿಕರ್ತನ ಕೇಳಿ ಯತ್ನದಿ । ಆದಿತೇಯರ ಭಾಗ್ಯದಾಯಿನಿಯುಳನು ಕರತರುತಾ ॥ ನೀ ದಿವದೊಳೋಲಗದಿ ಮೆರೆದರೆ । ಖೇದ ಕುಂದಕ ನಿನಗಿಹುದೆ ಶುಭ । ಹಾದಿಯನು ಬೋಧಿಸಿದೆ ತಪ್ಪಿರೆ ಪೇಳ್ವದೆನಲೆಂದಾ ॥ ೧ ॥

॥ ಕಂದ ಪದ್ಯ ॥

ತಪ್ಪಿದುದಂ ಸರಿಗೊಳಿಸಿದು । ದೊಪ್ಪಿಗೆಯಾಯಿತು ವಿಧಾತ

ನಣುಗೆಯ ತಹೆ ನಾಂ ॥ ಸ್ವಲ್ಪ ದಿನದಿ ನೀ ಬಹುದೆನೆ। ಬಪ್ಪೆನೆನುತ
ಸುರಮುನೀಂದ್ರ ತೆರಳಿದನಾಗಂ ॥ ೧ ॥

॥ ರಾಗ ಸೌರಾಷ್ಟ್ರ ತ್ರಿಪುಟತಾಳ ॥

ಸುರಮುನಿಯ ಬೀಳ್ಕೊಟ್ಟು ಸುಮನಸ । ರೆರೆಯ ಸಂತಸ
ವಾಂತು ಬ್ರಹ್ಮನ । ತರಳೆಯನು ತಹ ಯೋಚನೆಯ ನಿ । ರ್ಜರರೊ
ಳೆಂದಾ ॥ ೧ ॥ ಕೇಳಿದಿರೆ ನಾರದನ ನುಡಿಗಳ । ಮೇಲೆನಿಪ ನವಿಶ್ರಾ
ಸುಭಾಗ್ಯಕೆ । ಪೇಳಿಹೆನು ಮುಂದೇಳಿಗೆಯ ನೀ ।ವೇಳೆಯಲ್ಲೀ ॥ ೨ ॥
ತ್ರಿಜಗದಲಿ ಮಿಗಿಲೆನಿಪ ನಾರಿಯ । ನಜನು ಸೃಜಿಸಿಹನವಳ ತಂದರೆ ।
ವಿಜಯವೆನಗೆಂದೊರೆದ ಮುನಿ ನುಡಿ । ನಿಜವಿದೈಸೇ ॥ ೩ ॥ ತಡವ
ಮಾಡದೆ ಪೋಗಿ ನಾ ಪೊಡ । ಮಡುತ ತಹೆ ವಿಧಿನಂದನೆಯ ನೆನೆ ।
ನುಡಿದನಾಗ ಜಯಂತ ಸುಮನಸ । ರೊಡೆಯನೊಡನೇ ॥ ೪ ॥

॥ ರಾಗ ಬೇಹಾಗ್ ರೂಪಕತಾಳ ॥

ಮುನಿಪನೆಂದ ಮಾತು ಸಹಜ ಜನಕ ನಿನ್ನಲೀ । ವನಜ ಭವನ
ಮಗಳ ತರಲು ಘನತೆ ನಮ್ಮಲೀ ॥ ದಿನಪಗಿಮ್ಮಡಿಯೊಳು ಮೆರೆವ
ದಿನಿತು ನಿಶ್ಚಯಾ । ನಿನಗೆ ಸಹೆಯಕಾಗಿ ಬಪ್ಪೆನನಿಮಿಷರೊಡೆಯಾ
॥ ೧ ॥ ಸೃಷ್ಟಿಕರ್ತನೊಡನೆ ಕೇಳಿ ಪುಟ್ಟಿದವಳನೂ । ಶ್ರೇಷ್ಠ ನಿನಗೆ
ಕೊಡದಿರಲ್ಕೆ ಕಟ್ಟಿಕರವನೂ ॥ ಧಿಟ್ಟತನದಿ ತಂದು ನಾ ನಮ್ಮಿಷ್ಟ
ಭಾಗ್ಯಕೇ । ಒಟ್ಟುಗೂಡಿಸುವೆ ತೆರಳ್ವ ಸತ್ಯಲೋಕಕೇ ॥ ೨ ॥

॥ ರಾಗ ಕೇದಾರಗೌಳ ಝಂಪೆತಾಳ ॥

ಕೇಳಿ ಮಾರುತನೆಂದನೂ । ಕಮಲಜನ । ಬಾಲಕಿಯ ತರಲಿ
ಕಿನ್ನೊ ॥ ಆಲೋಚನೆಗಳೇತಕೇ । ಬಪ್ಪೆ ನೀ । ವೇಳೆಯಲಿ ತಡ
ವೇತಕೇ ॥ ೧ ॥ ಅನಲನೆಂದನು ವಿನಯದೀ । ಕೇಳಿ ಕಾ । ಮಿನಿಯು
ಕೊಡದಿರೆ ಗರ್ವದೀ ॥ ರಣದಿ ಸೆರೆಬಿಗಿದು ತಂದೂ । ನಿನ್ನ ಪದ । ವನಜ
ಕೊಪ್ಪಿಸುವೆನಿಂದೂ ॥ ೨ ॥ ಎಂಬ ಮಾತನು ಕೇಳುತಾ । ನಿರ್ಜರರ ।
ವೃಂದವನು ಕರಕೊಳ್ಳುತಾ ॥ ಬಂದು ಕಮಲಜಗೆರಗಲೂ । ತಳ್ಕಿಸುತ ।
ಲೆಂದ ಸುರಪನೊಳಾಗಲೂ ॥ ೩ ॥

॥ ಮತ್ತೇಭವಿಕ್ರೀಡಿತ ವೃತ್ತ ॥

ಸುರ ಲೋಕಾಧಿಪ ಬಂದ ಕಾರ್ಯಗಳ ನೀ ಪೇಳದರ ಸಂತೋಷದೀ । ಪರಿವಾರಂಗಳ ಕೂಡಿ ಪಾದಕೆರಗಿರ್ದೇನಿಸಿತು ನೀ । ಬೇಗದೀ ॥ ದುರುಳರ್ಧಾಳಿಯುನಿಟ್ಟು ಬಾಧಿಸುವರೇನೈ ಮುದುಕವನ್ನೀಗುತಾ । ಅರುಹೆಂದಾಡಲು ನಿರ್ಜರೇಂದ್ರನೊರೆದಂ ತನ್ನಿರವ ಮುಂದಾಗುತಾ ॥ ೧ ॥

॥ ರಾಗ ಜಂಜೂಟಿ ಆದಿತಾಳ ॥

ಸಾರಸಭವ ಕೇಳೂ । ದಯಾಳೂ । ಸಾರಸಭವ ಕೇಳೂ ॥ಪಲ್ಲ॥ ಸಾರಸಭವ ಕೇಳ್ಕಾರುಣ್ಯಾದಿ ಪೊಸ ॥ ವಾರತೆ ಲೋಕದಿ ಸಾರುವದರಿತಿಹೆ ॥ ಸಾರಸಭವ ಕೇಳೂ ॥ ೧ ॥ ತ್ರಿಜಗದೊಳಿರವ ತನುಜೆಯೋರುವಳನು ॥ ಸೃಜಿಸಿರುವೆಯು ಪೇಳಜನೆ ಹರುಷದಲಿ ॥ ಸಾರಸಭವ ಕೇಳೂ ॥ ೨ ॥ ಸ್ವರ್ಗಪುರದ ಸೌಭಾಗ್ಯಕೆಣೆಯು ಯೆಂ ॥ ಬಾಗ್ರಹದಿಂದತಿ ಶೀಘ್ರವೊಳ್ಪೈದಿಹೆ ॥ ಸಾರಸಭವ ಕೇಳೂ ॥ ೩ ॥ ನಂದನೆಯುಳನೆನಗಿಂದು ಕರುಣಿಸುತ ॥ ಮುಂದೆ ಸುಖದೊಳಿರಿಸೆಂದೆನಲೆಂದನು ॥ ಸಾರಸಭವ ಕೇಳೂ ॥ ೪ ॥

॥ ರಾಗ ಕೇದಾರಗೌಳ ಅಟತಾಳ ॥

ಸಲುಗೆಯೊಳೆನ್ನೊಳು ಗಳಹುವದೇನಿಂತು । ವಲವೈರಿ ಗರ್ವದಲೀ ॥ ತಿಳಿಯೆನೆ ನಾ ನಿನ್ನ ಬಲು ಶ್ರೀಪ್ಸತನಗಳ । ನಿಲದತ್ತ ತೊಲಗೆಂದನೂ ॥ ೧ ॥ ದಿಗಿಲುಗೊಳ್ಳಲದೇಕೆ ಮಗಳ ನಾ ಕೇಳ್ದರೆ । ಜಗತಿಮೂರರೊಳೆನ್ನನೂ ॥ ಮಿಗಿಲೆನಿಸುವರಾರು ಸುಗುಣೆಯುನೆನಗಿತ್ತು । ಸೊಗಸಿನೊಳಿರಿಸೆಂದನೂ ॥ ೨ ॥ ಬಲ್ಲೆನಾ ಮೊದಲಿಗಹಲ್ಯೆಯ ಬಯಸಿ ಪೈ । ಯಲ್ಲಿ ನಯನ ಹೊಂದಿದೇ ॥ ಎಲ್ಲವ ಮರತು ನೀನಿಲ್ಲಿಗೈದೆಯ ಬರಿ । ಖುಲ್ಲರಂದದಿ ಬಳಿಗೇ ॥ ೪ ॥ ಹರಿಹರ ವಿಧಿಯರ ಕರುಣದಿಂದಿರುವೆ ನಾ । ಕೊರತೆಯಿಂದೆನಗಿಲ್ಲವೂ ॥ ತರಳೆಯುನೆನಗಿತ್ತು ಸುರರ ರಕ್ಷಿಪುದೆನೆ । ಲೊರದ ವಾರಿಜ ಭವನೂ ॥ ೪ ॥

॥ ವಾರ್ಧಿಕ್ಯ ॥

ಪಾಲಿಸಿಹೆ ಸಕಲಾಧಿಕಾರವನು ಮಗಳಿಂಗೆ । ಕೇಳಿ ಫಲವೇ ನಿನ್ನೊಡನೆ ತೆರಳಿ ನೀನವಳ । ಏಳಿಗೆಯ ಬಯಸೆಂದು ವಿಧಿ ಕಳುಹಿದಡೆ ದಿವೌಕಸರೊಳಿಂತೆಂದ ಸುರಪಾ ॥ ಕಾಲಕಳೆಯದೆ ಸ್ವಯಂಪ್ರಭೆಯ ಮನವರಿತು ಮುನಿ । ಪಾಲನೆಂದಂತೆ ಕರತನ್ನಿರೆಂತಾದರೀ । ವೇಳೆಯೊಳಗೆಂದು ಬೀಳ್ಗೊಡಲು ನಡೆತರಲು ಬಾಗಿಲ ಸತಿಯರಿಂತೆಂದರೂ ॥ ೧ ॥

॥ ರಾಗ ಪಂತುವರಾಳಿ ಅಟತಾಳ ॥

ನಿಲ್ಲು ನಿಲ್ಲು ಸುಭಟ ಬಹಳ । ಮಲ್ಲತನದಿ ಮುಂದುವರಿವ ॥ ದೆಲ್ಲಿಗರುಹು ಬಂದ ಕಾರ್ಯ । ವೆಲ್ಲವೆನ್ನೊಳೂ ॥ ೧ ॥ ನಾರಿಯರ ಪಾರುಪತ್ಯ । ಸೇರಿರುವದಿಲ್ಲಿ ಬರಲು ॥ ಊರದ್ಯಾವದರುಹು ಪೆಸರ । ಪೂರ ವಾರ್ತೆಯಾ ॥ ೨ ॥ ದಂತಿಗಾಮಿನಿಯರೆ ಕೇಳ್ ಜ । ಯಂತನೆಂಬರೆನ್ನ ದಿವಿಜ ॥ ತಿಂಥಿಣೀಶ ತಾತನೆನ್ನೊಳ್ । ಪಂಥಸಲ್ಲದೂ ॥ ೩ ॥ ವಿಧಿ ಕುಮಾರಿಯಳನು ಬಯಸಿ । ತ್ರಿದಶರೊಡೆಯನೆನ್ನನಿಲ್ಲಿ ॥ ಸುದತಿಯಳನು ತರಲು ಕಳುಹಿ । ಸಿದರಿಂದ್ಯೈದೆವೂ ॥ ೪ ॥ ಇಂದ್ರನ ಸಂಜಾತನೇನೋ । ಬಂದುದು ಲೇಸಾಯ್ತು ಪಿತಗಿಂ ॥ ನ್ನೊಂದು ಲಗ್ನಗೈವ ಕಾರ್ಯ । ಸಂದ ಬಿರುದದೂ ॥ ೫ ॥ ಮಾನಿನಿಯರ ಬಿಟ್ಟು ಪುರುಷ । ಪ್ರಾಣಿಯು ಪ್ರವೇಶವಿಲ್ಲ ॥ ತತ್ರಾಣದಿಂದ ದುಡುಕೆ ನಿಮಗೆ । ಹಾನಿ ತಪ್ಪದೂ ॥ ೬ ॥

॥ ಕಂದ ಪದ್ಯ ॥

ರಾಣಿಯು ತಿಳಿದೈ ತಹುದೆನ । ಲಾ ನಾರಿಯರಿದರ ಪೇಳಿ ಬಹೆವೆಂದೆನುತಂ ॥ ಸಾನಂದದಿ ನಡೆತರಲ್ಕೆ । ಮಾನಿನಿಮಣಿ ವಿಭವದಿಂದ ಲೋಲಗವಿತ್ತಳ್ ॥ ೧ ॥

॥ ರಾಗ ಕಾಂಬೋಧಿ ಝಂಪೆತಾಳ ॥

ಮತ್ತಗಜಗಮನೆಯರೆ ಚಿತ್ತವಿಸಿರೆಲ್ಲ ನಾ । ಬಿತ್ತರಿಪೆ ಸ್ತ್ರೀಯ ರೀಳ್ಗೆಯನೂ ॥ ಪೃಥ್ವಿಯಲಿ ಪುರುಷರಿಗೆ ಹಸ್ತಗೊಂಬೆಗಳಾಗಿ । ನಿತ್ಯ ಜನುಮವ ಕಳೆವರೆಲ್ಲ ॥ ೧ ॥ ಸ್ತ್ರೀ ಜನ್ಮವೆನ್ನುವದೆ ಮೂಜಗಕೆ

ನೆಲೆಗೊಟ್ಟು । ಆ ಜಗನ್ಮಾತ್ರೆಯೇ ಸಾಕ್ಷೀ ॥ ರಾಜಿಸುವ ನದಿಗಳಿಂದೀ ಜಗದಿ ಮೆರೆಯುತಿದೆ । ರಾಜೀವಾಕ್ಷಿಯರ ಪೆಸರಿನಲೀ ॥ ೨ ॥ ವಾಣೀಶ ಗೌರಿ ಶಂಕರ ರಮಾಧವರೆಂಬು । ದೀ ನಾಮಗಳಲಿ ಸ್ತ್ರೀಯರಿಗೇ ॥ ಮಾನ್ಯತೆಯ ಮೊದಲಿಗರೆ ಮಾನಿನಿಯರ್ಮೊದಲಿಗರು । ಕನ್ಯೆಯೊಳಗನ್ಯರಿನ್ನಿಲ್ಲಾ ॥ ೩ ॥

॥ ಕಂದ ಪದ್ಯ ॥

ಈ ತೆರದಿಂ ಬೋಧಿಸುತಿರೆ । ಧಾತಿಕಳೆಡೆಗೈತರುತ್ತ ವಂದಿಸೆ ಸಖಿಯರ್ ॥ ಗೋತರ ಕಾರ್ಯವಿದೆನೆ ವಿಧಿ । ಜಾತೆಗೆ ವೃತ್ತಾಂತ ಪೇಳ್ದರತಿ ದೈನ್ಯದೊಳಂ ॥ ೧ ॥

॥ ರಾಗ ಕಾಂಬೋಧಿ ಅಟತಾಳ ॥

ಪ್ರೊಸಸುದ್ದಿಯೊಂದ ಬಿನ್ನಯಿಸ್ಪವೆ ಕಿವಿಗೊಟ್ಟು । ಅಮ್ಮ ಕೇಳೂ । ಸುಮ । ನಸರೊಡೆಯನ ಕಾರ್ಯಯುಕ ಮಾಳ್ಪ ಬಗೆಗಾಗಿ । ಅಮ್ಮ ಕೇಳೂ ॥ ಕುಶಲದೊಳನಿಮಿಷ ವಿಸರ ಜಯಂತನು । ಅಮ್ಮ ಕೇಳೂ । ನೆರ । ಹಿಸುತ ಬಂದಿಹೆ ಶಕ್ರ ಬೆಸಸಿ ಕಳುಹಿದರಿಂ । ದಮ್ಮ ಕೇಳೂ ॥ ೧ ॥ ಚಂದಿರಾನನೆ ನಿಮ್ಮನಿಂದು ವರಿಸನಂತೆ । ಅಮ್ಮ ಕೇಳೂ । ನಿನ್ನ । ತಂದೆಯು ಕೇಳಿ ಸಂಕ್ರದ ನಂದನ ಬಂದ । ನಮ್ಮ ಕೇಳೂ ॥ ಮುಂದೆ ನಿಮ್ಮಭಿಮತವೇಂದರೊಳ್ಳಿತು ನಮ್ರೊ । ಳಮ್ಮ ಕೇಳೂ । ಸುರ । ವೃಂದ ಬಾಗಿಲ ಬಳಿ ನಿಂದು ಕಾದಿಹರೆಲ್ಲ । ರಮ್ಮ ಕೇಳೂ ॥ ೨ ॥

॥ ವಾರ್ಧಿಕ್ಯ ॥

ಅರುಹ ಬೇಡೀ ಮಾತು ಸುರಪನನ್ನರಿತಿಹೆನು । ದುರುಳರಿಂಗಳುಕಿ ತನ್ನರಸಿಯುಳ ತೊರದು ನಿ । ರ್ಜರರನುಳಿದಮಿಳ ಭಾಗ್ಯವ ಮರತು ಕಾನನವ ಚರಿಸುವಗೆ ನಾನೊಲಿವೆನೇ ॥ ಇರುವರಪ್ಸರೆಯರತಿ ತರುಣಿಯರು ರೂಪದಿಂ । ಮೆರೆವಳಾ ಶಚಿಗೆ ನಾ ಸರಿಯುಹೆನಹಲ್ಲ್ರಿಯುಳ । ಚರಿತೆ ಮರದಾತ ಬಂದಿರುವಗೆಚ್ಚರಿಕೆ ನೀನರುಹಿ ಕಳುಹಿಪುದೆಂದಳೂ ॥ ೧ ॥

॥ ರಾಗ ಶಂಕರಾಭರಣ ತ್ರಿಪುಟತಾಳ ॥

ನಾರಿಯರು ನಡೆತಂದು ಸುರಪ ಕು । ಮಾರಗೆಂದರು ಸಿರ್ಜ
ರೇಂದ್ರಗೆ । ಸಾರಸೋದ್ಭವನಣುಗೆ ಸುಲಭದಿ । ಸೇರಳಯ್ಯಾ ॥ ೧ ॥
ನುಡಿದನಾಗ ಜಯಂತ ನಿಮ್ಮಯ । ಕಡುಹುತನಗಳ ನಿಲಿಸಿ ಶಕ್ರಗೆ ।
ಮಡದಿಯುಹ ತೆರಗೈವೆ ನಾ ಹೆಡೆ । ಮುಡಿಯ ಬಿಗಿದೂ ॥ ೨ ॥
ಜಾರೆಯರ ಸಂಗಡದಿ ಮನಸಿಗೆ । ತೋರಿದಂದದಿ ನುಡಿದು ಕಾರಾ ।
ಗಾರ ಸೇರದಿರೆನಲು ಪೇಳಿದ । ಶೂರಮಣಿಗೇ ॥ ೩ ॥

॥ ರಾಗ ಭೈರವಿ ಅಟತಾಳ ॥

ಮೂರು ಲೋಕದಿ ನಮ್ಮನೂ । ಮನ್ನಿಪರೆಲ್ಲ । ನಾರಿ ನೀ ನೆಂಬು
ದೇನೂ ॥ ತೀರಿಸಿ ನಿಮ್ಮಯ ಪಾರುಪತ್ಯವ ದಾಸಿ । ವಾರದೊಳಿರಿಸು
ವೆನೂ ॥ ೧ ॥ ಜಾಣನೀನೆಂದೆಣಿಸೀ । ಗಳಹಿ ಮಾನ । ಹೀನ ನಾಗ
ದಿರ್ಜಹಸೀ ॥ ತ್ರಾಣವೆನ್ನೊಡನೀರ್ಪ ಬಾಣಕಿಹುದು ಸಾರು । ಮಾನವ
ನೀ ನುಳಿಸೀ ॥ ೨ ॥ ಬಯಸಿದ ಕಾರ್ಯವನೂ । ಪೂರೈಸದೆ । ಭಯದಿ
ಸಾಗುವರಲ್ಲಿನ್ನೂ ॥ ನಯದೊಳೊಪ್ಪಿಸಿ ಸುರರೆರೆಯಗಿತ್ತರೆ ಯುದ್ಧ ।
ಬಯಕೆ ಬಿಟ್ಟಿಯ್ದುವೆನೂ ॥ ೩ ॥ ಶಶಿಯು ಬಯಸಿ ನಭಕೇ । ಹಾರಿದ
ರದು । ವಶವಹುದೇ ಮನಕೇ ॥ ಬಿಸಜಾಕ್ಷಿಯಾಶೆಯಿಂ ವಿಷಮನಿಮಗೆ
ಸಂಭ । ವಿಸುವದಿಂದೀಕ್ಷಣಕೇ ॥ ೪ ॥

॥ ಕಂದ ಪದ್ಯ ॥

ಬಪ್ಪುದನನುಭವಿಸುವೆ ನೆಂ । ದಿಪ್ಪ ಶರವ ಬಿಡಲು ಖಂಡಿಸುತ್ತ
ಜಯಂತನ ॥ ತಪ್ಪಿಸಿ ಕಾರಾಗಾರಕೆ । ಬಪ್ಪವರಾರೆಂದಿರಲ್ಕೆ ಶಿಖಿ
ತಡದೆಂದಂ ॥ ೧ ॥

॥ ರಾಗ ಕೇದಾರಗೌಳ ಝಂಪೆತಾಳ ॥

ಗೆಲಿದೆಯಾ ಶಕ್ರ ಸುತನಾ । ನಾರಿಯರ । ಬಲು ಶೌರ್ಯಗಳ
ಕಾಂಬೆ ನಾ ॥ ನಳುಕುವವನಲ್ಲ ಪಣಕೇ । ನಿನ್ನರಸಿ । ಯಳನೊಯ್ಯು
ದಿರೆನು ದಿವಕೇ ॥ ೧ ॥ ಬಡಿವಾರ ನುಡಿವುದರಲೀ । ನಿರ್ಜರರು । ಕಡು

ಶೂರರಿಳೆ ಮೂರಲೀ ‖ ಜಡಜನೇತ್ರೆಯು ಬಯಕೆಯೂ । ಸೆರೆಮನೆಯೊ । ಳಿಡುತ ತೀರಿಸುವೆ ನಿಜವೂ ‖ ೨ ‖ ಉತ್ತಮದ ವಸ್ತುವೆಲ್ಲಾ ಸುರ ಪುರದೊ । ಳಿತ್ತಿ ಶೋಭಿಸುವದೆಲ್ಲಾ ‖ ಮತ್ತಗಜಗಮನೆ ಸಹಿತಾ । ಮೆರೆಯೆ ಪ್ರಭೆ । ಬಿತ್ತರಿಸಲೇನು ಮತ್ತಾ ‖ ೩ ‖ ಕಳುಹಿಸುವೆನವಳ ಬಳಿಗೇ । ಎಂದು ಶರ । ಗಳನೆಸದು ಸೆರೆಯ ಮನೆಗೇ ‖ ಕಳುಹಲಾ ವರುಣ ಬಂದೂ । ವೀರಮಣಿ । ಗಳುಕದಿಂತೆಂದನಂದೂ ‖ ೪ ‖

‖ ರಾಗ ಮಾರವಿ ಏಕತಾಳ ‖

ವೀರತನಂಗಳು ನಾರಿಯರಿಗೆ ಕೈ । ಸೇರಿರುವದೆ ಜಗದೀ ‖ ತೀರಿಪೆ ನಾ ಹಂಕಾರವನೆಂದೆನು । ತಾರುಭಟಿಸೆ ರಣದೀ ‖ ೧ ‖ ನಿರ್ಜರರಲಿ ಜಲ ಗರ್ಜನೆ ಮಾಳ್ಪೆಯು । ಧೂರ್ಜಟಿಗೆಣೆಯೆನುತಾ ‖ ಮೂರ್ಜಗದೊಳಗೆನ್ನಾರ್ಜಯಿಸುವ ರೆಂ । ಬಜ್ಞಾನವು ವ್ಯರ್ಥಾ ‖ ೨ ‖ ಸಂಗರವೇಕೆ ಪತಂಗಸಖನ ದಳ । ಕಂಗಳೊಳೆಸೆದವಲ್ಲಾ ‖ ಹಿಂಗದೆಮ್ಮ ಪಾದಂಗಳಿಗೊಪ್ಪಿಸೆ । ಮಂಗಳವಹುದೆಲ್ಲಾ ‖ ೩ ‖ ಅನಿಮಿಷರೊಳು ವಿಧಿತನುಜೆಗೆ ಮಸವೆ । ಛನಿತಿಲ್ಲದರಿಂದಾ ‖ ರಣವ ಬಿಟ್ಟು ದಿವವನು ಸೇರಿರುವುದೆ । ಘನ ಸುಖನಿಮಗೆಂದಾ ‖ ೪ ‖ ಬಡಿವಾರದ ನುಡಿ ಬಿಡು ಬಿಡು ಸಹೆಯಾಕೆ । ಜಡಜಭವನೆ ಬರಲೀ ‖ ಕಡುಹೆ ನಿಲಿಸಿ ನಿನ್ನೊಡತಿಯನೊಯ್ಯುವೆ । ವೃಥವಿದು ಕಲಹದಲೀ ‖ ೫ ‖

‖ ಭಾಮಿನಿ ‖

ಆದರಾ ಪೌರುಷವ ಪರಿಕಿಪೆ । ನೀ ಧುರದೊಳೆಂದವಗೆ ಶರವೆಸ । ದಾ ದಿವಿಜರೆಲ್ಲರನು ಕಾರಾಗೃಹಕೆ ಸೇರಿಸುತಾ ‖ ಕಾದುವವರಾರೆನ್ನೊಡನೆ ರಣ । ಯೋಧರೈತರಲೆಂದು ಗರ್ಜಿಸ । ಲಾ ಧುರಂಧರ ಶಕ್ರ ತಡದಿಂತೆಂದ ನಾಕ್ಷಣದೀ ‖ ೧ ‖

‖ ರಾಗ ಸೌರಾಷ್ಟ್ರ ತ್ರಿಪುಟತಾಳ ‖

ವಿಸಾರಿರುವ ಸುರವಾರ ಕಾರಾ । ಗಾರ ಸೇರಿಸಿ ಮೆರೆವ ಧೀರೆ ವಿ । ಚಾರಿ ಬಲು ವೈಯ್ಯಾರಿ ಸತಿ ನೀ । ನ್ಯಾರು ಪೇಳೇ ‖ ೧ ‖ ವಿಧಿ ಕು ಮಾರಿಯು ಸಖಿಯು ನಾ ಯು । ದ್ಧದೊಳಧಿಕಳುತ್ತಮಳು ನೀ ನೆ ।

ನ್ನಿದಿರಿಸಲು ಕಾರ್ಯಂಗಳೇನದ | ಮುದದೊಳಿರುಹೊ || ೨ || ಸ್ವರ್ಗ ಪಾಲಕನಿಂದ್ರನಾ ಸುರ | ವರ್ಗ ಕಳುಹಿದೆ ಧುರಕೆ ನೀ ಕಾ | ರಾಗೃಹವ ಸೇರಿಸಿದೆ ಬಿಡೆ ಸತಿ | ಯಾಗ್ರಹವನೂ || ೩ || ಹೆಂಗಸರ ತೊತ್ತಿನಲಿ ಬಾಳುವ | ಇಂಗಿತವು ನಿನಗಿರಲು ನೀ ರಣ | ರಂಗಕಿದಿರಾಗೆಂದವಳು ಬಾ | ಣಂಗಳೆಸೆಯೇ || ೪ ||

|| ಕಂದ ಪದ್ಯ ||

ಎಚ್ಚ ಶರವ ತರಿದಾ ಸಿ | ರ್ಲಕ್ಷ್ಮದೊಳಾಕೆಯನು ಗೆಲ್ದು ಬರುತಿರೆ ಶಕ್ರಂ || ಅಚ್ಚರಿಯಾಂತು ಸ್ವಯಂ ಪ್ರಭೆ | ಯಕ್ಷಿಯೊಳುರಿಸೂಸುತೆಂದ ಳಿಂದ್ರನ ತಡದುಂ || ೧ ||

|| ರಾಗ ಭೈರವಿ ಏಕತಾಳ ||

ಸುರವರನೆಂಬವ ನೀನೋ | ವಿಧಿ | ತರಳೆಗೆಳಸಿ ಬಂದವನೋ || ತರುಣಿಯುರೂಳಿಗತನದೀ | ಬಾ | ಳಿರಲೆಣಿಸಿರುವೆಯ ಮುದದೀ || ೧ || ಎನ್ನೊಳಿಗ ನಿನ್ನಿಂದಾ | ಗೈ | ನಿನ್ನ ಮೆರವ ಮನದಿಂದಾ || ಪನ್ನಗ ವೇಣಿಯೆ ಬಂದೇ | ಬಾ | ರೆನ್ನೊಡ ದಿವಕದರಿಂದೇ || ೨ || ತರುಣಿ ಯಾಶೆಯಲಿ ಮೊದಲೂ | ಗಳಿ | ಸಿರುವೆಯ ನೀನಯನಗಳೂ || ದುರುಳರಿಗಂಜುವ ನಿನ್ನಾ | ಬಾ | ಳಿರೆ ಯಶವಿರುವದೆ ಯನ್ನಾ || ೩ || ಕೊರತೆಯು ನೀಮರೆಗಿಡುತಾ | ಯ | ನ್ನರಸಿಯಾಗೆ ಜಗ ಕುಚಿತಾ || ಭರಿತ ಸುಭಾಗ್ಯದೊಳಿರ್ದು | ಮೆರ | ದಿರು ಸಂತೋಷವ ತಾಳ್ದು || ೪ ||

|| ರಾಗ ಕೇದಾರಗೌಳ ಅಟತಾಳ ||

ನಿನ್ನಯ ಸುಖಗಳನೆಣ್ಣಿಸುವವಳಲ್ಲ | ಯನ್ನಧಿಕಾರದಲೀ || ಕನ್ಯೆಯುದೊಡಗೂಡಿ ಮನ್ನಣೆಯಾಂತು ಮ | ಹೋನ್ನತಿಯಿಂದಿಹೆ ನೂ || ೧ || ಮೂರು ಜಗದಿ ನೀ ಸಿಂಗಾರಿ ಯೆಂದರಿತೆನ್ನ | ಭೂರಿ ಭಾಗ್ಯಗಳೊಳಗೇ || ಸೇರಿ ಬಾಳಲು ಯನ್ನ ಮೀರುವರಾರುಂಟು | ಬಾರೆ ಕರುಣದೋರುತ || ೨ || ಮಾನ ಮರ್ಯಾದೆಯು ಸ್ಥಾನವಿಲ್ಲದ ನಿನ್ನ | ಆನನ ನೋಳ್ಪಳಲ್ಲಾ || ಪ್ರಾಣದಾಸೆಗೆ ಬಾಳ್ವ ಶ್ವಾನ ಸಮಾನ

ಷು । ರಾರ್ಣವ ವಿಹುದೆನ್ನಲೀ ॥ ೩ ॥ ಸಲುಗೆ ಮಾತಾಡಲು ಗಳಹುವೆ ಬಂದಂತೆ । ಅಳುಕೆ ನಿನ್ನನು ಬಿಗಿದೂ ॥ ಬಲುಹಿಸಿಂದೊಯ್ವಾಗ ಛಲದಿಂದ ಬಿಡಿಸುವ । ಬಲಯುತರಾರಿಹರೂ ॥ ೪ ॥ ತೋರು ನಿನ್ನ ಧಟನು ತೀರಿಪೆನೆಂದಸ್ತ್ರ । ವಾರದಿ ಮುಸುಕುತ್ತಲೀ ॥ ಘೋರನೆ ನಾಗಪಾಶದಿ ಬಂಧಿಸುತ ಕಾರಾ । ಗಾರವ ಪೊಗಿಸಿದಳೂ ॥ ೫ ॥

॥ ಮತ್ತೇಭವಿಕ್ರೀಡಿತ ವೃತ್ತ ॥

ಕಳುಹೇರ್ಪಾರ್ ಸೆರೆಗತ್ತ ದೇವತತಿಯುಂ ನ್ಯಾವಿಷಯುಮಂ ನಾರದಂ । ತಿಳಿದಾ ಕಾರ್ಯವ ಪೋಗಿ ಪೇಳ್ಪೆ ಶಚಿಗಂ ನಿರ್ಜರರ ಮಾನಚ್ಯುತೀ ॥ ಬಳಿಕಾ ವಾರಿಜಸಂಭವಂಗೆ ಮಣಿಸುತ್ತಾ ಸುರರ ನೈತಪ್ಪುಡೇ । ಬಲು ಚಿಂತಾಬ್ಧಿಯೊಳಾಳಿ ಪೇಳ್ಪೆನೆನುತಂ ನಾಕಪ್ರ ಕೈತಂದನೂ ॥ ೧ ॥

ರಾಗ ನಾದನಾಮಕ್ರಿಯೆ ಅಟತಾಳ ॥

ಕಾಣುತ್ತ ಸುರಮುನಿವರ್ಯನ । ನಿಂದ್ರ । ರಾಣಿಯು ಮನ್ನಿಸು ತಾತನ ॥ ಏನು ಕಾರಣ ಬಂದುದಿಲ್ಲಿಗೇ । ಮೌನಿ । ಯಾಸನ ಕಂಡಿ ಪ್ರರ್ದೇನ್ನೀಗೇ ॥ ೧ ॥ ತರಳನಿಂದ್ರಾದಿ ದಿವಿಜರೆಲ್ಲಾ । ಪೋದ । ವರು ಯಾವಕಡೆಗೆನಗರಿವಿಲ್ಲಾ ॥ ಅರಿತಿರೆ ಪೇಳ್ವುದೆನ್ನೊಡನೆಂದೂ । ಪೇಳೆ । ಸುರಮುನಿಯೊರೆದ ಚಿಂತೆಯೊಳಂದೂ ॥ ೨ ॥

॥ ರಾಗ ದೇಶಿ ಏಕತಾಳ ॥

ಬಿತ್ತರಿಸುವದೇನು । ವಾರ್ತೆಯು ॥ ಬಿತ್ತರಿಸುವದೇನೂ ॥ ಪಲ್ಲ ॥ ಬಿತ್ತರಿಸುವದೇನ್ ವಾರ್ತೆಯು ನಿನ್ನಲಿ । ಚಿತ್ತಕೆ ಮರುಕವು ಹತ್ತಿತು ದೆನಗದ ॥ ಬಿತ್ತರಿಸುವದೇನೂ ॥ ಅ. ಪ. ॥ ಒಂದಿನ ಸುರ ಸಭೆಗೇ । ನಾ ಬರ । ಲೆಂದನಿಂದ್ರನೆನಗೇ । ಮನ್ನಿಸಿ । ಇಂದೇನ್ ಪೊಸತು ಒಗೇ । ಪೇಳೆನ । ಲೆಂದೆನು ಸುರಪನಿಗೇ ॥ ತಂದೆಯು ಚಂದದ ನಂದನೆ ಯೋರ್ವಳ । ಕುಂದಿಲ್ಲದೆ ಸೊಗಸಿಂದ ಸೃಜಿಸಿಹನು ॥ ಬಿತ್ತರಿ ಸುವದೇನೂ ॥ ೧ ॥ ಎಂದುದ ಕೇಳುತ್ತಾ । ಸುಮನಸ । ವೃಂದದೊ ಡನೆ ಮತ್ತಾ । ನಿನ್ನಯ । ಕಂದನ ಕರಕೊಳುತಾ । ತೆರಳುತ । ಲೆಂದು

ಮುದದೊಳಿತ್ತಾ ॥ ಬ್ರಹ್ಮನ । ನಂದನೆಯುಳ ಮುದದಿಂದ ವಿಚಾರಿಸಿ ।
ಮಂದಗಮನೆ ಮನ ಹೊಂದದೆ ಕ್ರೋಧದಿ । ಬಿತ್ತರಿಸುವದೇನೂ ॥ ೨ ॥

॥ ವಾರ್ಧಿಕ್ಯ ॥

ಸುರಪಾದಿ ನಿರ್ಜರರ ಧುರದಿ ಜೈಸುತ ವಿಧಿಯು । ತರಳೆ ಕಾರಾಗೃಹದೊಳಿರಿಸೀರ್ಪಳದರಿಂದ । ಮರುಕವಹುದೆನಗೆ ಸುರ ಪುರವ ಪಾಲಿಪರಾರು ಬರಿದಾದ ಬಗೆಯಿಂದಲೀ ॥ ತೆರಳಿ ನೀ ಕಮಲಜನ ಚರಣಕಾನತಳಾಗಿ । ಮರುಗಿ ಪತಿದಾನವಂ ಕರುಣಿಸೆಂದರುಹಿ ನಿ । ರ್ಜರರ ತಾರೆಂದರುಹಿ ಹರಿಯು ಧ್ಯಾನಿಸಿ ಮುನಿಪ ತೆರಳಲ್ಕೆ ಶಚಿ ದುಗುಡದೀ ॥ ೧ ॥

॥ ಕಂದಪದ್ಯ ॥

ಇಂತಾದುದೆ ಪರಸತಿಯುರ । ಭ್ರಾಂತಿಯೊಳಾ ಡಿವಿಜರಿಂಗೆನುತ ನಡೆತರುತ್ತ ॥ ದಂತಿಗಮನೆ ವಿಧಿ ಚರಣಕೆ । ಚಿಂತಿಸುತೆರಗಲ್ಕೆ ಕಂಡು ತಳ್ಕಿಸುತೆಂದಂ ॥ ೧ ॥

॥ ರಾಗ ಕಾಂಬೋಧಿ ಝಂಪೆತಾಳ ॥

ಏನು ಕಾರಣ ಬಂದೆ ಮಾನಿನಿ ಶಿರೋರನ್ನೆ । ಆನನವು ಕಂದಿರುವದೇಕೇ । ಸಾನುರಾಗದಿ ಪೇಳು ನಾನೀವೆ ಮನದಿರವ । ಮಾನವಂತೆಯೆ ಮರುಗ ಬೇಡಾ ॥ ೧ ॥ ಆದಿಕರ್ತನೆ ಮನದ ಖೇದವಿನ್ನೇನೆಂಬೆ । ಆದಿತೇಯರು ನಿನ್ನ ಮಗಳಾ ॥ ಆಧೀನದಲ್ಲಿ ಸೆರೆಗಾಧಾರರಂತವರ । ನೀದಯವನಿಟ್ಟು ಕಳುಹಿಪುದೂ ॥ ೨ ॥ ಇಂತಾಗಿಹುದೆ ದೇವತಿಂಥಿಣಿಯನೆನ್ನಸುತೆ । ಸಂತಸದಿ ಸೆರೆಯೊಳಿಟ್ಟಿಹಳೇ ॥ ಚಿಂತಿಸದಿರೆಂದಕೆಂದು ದಂತಿಗಮನೆಯು ಕರದು । ತಾಂ ತವಕದಿಂದ ಕೇಳಿದನೂ ॥ ೩ ॥

॥ ರಾಗ ಕಲ್ಯಾಣಿ ಅಟತಾಳ ॥

ಕಮಲ ಮುಖಿಯೆ ಪುಣ್ಯವಂತೇ । ಈಕೆ । ಸುಮನಸರೆರೆಯನ ಕಾಂತೇ ॥ ಅಮಿತ ವಿಕ್ರಮದಿ ನೀ ಸಮರದಿ ಸೆರೆಗಿಟ್ಟ । ರಮಣ ಕುಮಾರರಮರರ ಬಿಡಿಸಲಿಕ್ಕೆ ॥ ೧ ॥ ಗೋಳಿಡುವಳು ಪಾದಕೆರಗೀ । ನೀನೀ । ವೇಳೆಯೊಳವರ ಮುಂದಾಗೀ ॥ ಮೇಲಾದ ಸುರರನ್ನು ಲೋಲಲೋಚನೆಗಿತ್ತು । ಪೇಳಿ ಕಳುಹು ಶುಭವೋಲ್ಯಸುವಂದದೀ ॥ ೨ ॥

ಸೆರೆಯ ಬಿಡಿಸಿ ದಿವೌಕಸರಾ । ಕರ । ದೊರೆದಳು ನೀತಿ ವಿಚಾರಾ ॥ ಇರಲಿನ್ನು ಮುಂದೆ ಜಾಗರ ತರುಣಿಯರಲ್ಲಿ । ಅರಿತಿರು ಭಂಗವ ಸುರಪ ಪೋಗೆಂದಳೂ ॥ ೩ ॥

॥ ರಾಗ ಸಾಂಗತ್ಯ ರೂಪಕತಾಳ ॥

ತರುಣಿ ಸ್ವಯಂಪ್ರಭೆಯೊರೆದುದ ಕೇಳುತ್ತ । ಮರುಗಿ ತಾ ನಾಚಿಕೆ ಗೊಳುತಾ ॥ ಸುರಪಮಾಣೀಶನಿಗೆರಗಿ ತಪ್ಪಾಯ್ತೆಂದು । ತೆರಳಿದ ಸುರರೊಡ ಪುರಕೇ ॥ ೧ ॥ ಬಂದು ನಿರ್ಜರರೊಡನೆಂದನೆಂತಾದರು । ಮುಂದೆ ವಿಧಾತನಂದನೆಗೇ ॥ ಹೊಂದಿಸದಿರೆ ಮಾನ ಭಂಗವೆಂದೆನುತಲಿ । ನೊಂದು ಯೋಚನೆಯೊಳಗಿರ್ದಾ ॥ ೨ ॥

॥ ಭಾಮಿನಿ ॥

ಇತ್ತ ಕಮಲಜನಣುಗೆ ಸಖಿಯರ । ಮೊತ್ತದೊಡನಿಂತೆಂದಳ್ದವಿಜರ । ಮತ್ತತೆಯನಿಳಿಸಿದೆನು ಸ್ತ್ರೀಯರ ಬಲುಹು ಮನಕಾಯ್ತೂ ॥ ಚಿತ್ತವಿಸಿರೆನ್ನುವನು ವರಿಸುವ । ರುತ್ತಮರು ಸೌಭಾಗ್ಯರಲ್ಲದೆ । ಸೊತ್ತು ಸಹಿತಧಿಕಾರವಿತ್ತರೆ ವರಿಪೆನೆನುತಿರಲೂ ॥ ೧ ॥

॥ ವಾರ್ಧಿಕ್ಯ ॥

ಕನಕ ಬೆಳ್ಳಿಯ ಹುತ್ತದಿಂದೆರಡು ಸರ್ಪಗಳು । ಮನುಜರೂಪವ ಧರಿಸುತಲಿ ನಾಗರಾಜ ನವ । ನನುಜ ಪಂಕಜರಾಜ ಸಹಿತ ವಿಕ್ರಮನೆನಿಸಿ ಬೆಳವುತ್ತ ಸಂತಸದಲೀ ॥ ಮನದೊಳೆಣಿಸುತ್ತ ಘನ ಕೀರ್ತಿಯುದ್ದೇಶವಂ । ಜನಪರಂ ಗೆಲಿದು ನಾರಿಯರ ವರಿಸುತ ಮುಂದೆ । ತ್ರಿಣಯನೊಲುಮೆಯಲಿ ಬಾಳುವೆವೆಂದು ಕಿರಿಯಗಿಂತೆಂದ ಫಣಿರಾಜನಂದೂ ॥ ೧ ॥

॥ ರಾಗ ಸೌರಾಷ್ಟ್ರ ತ್ರಿಪುಟತಾಳ ॥

ಅನುಜ ಕೇಳೆಮ್ಮವರ ಕುಲವನು । ಮನಕೆ ಬಂದಂದದಲಿ ಹಳಿವರು । ನಿನಗೆ ತಿಳಿದಿರೆ ಕೀರ್ತಿ ದಾರಿಯ । ನೆನಗೆ ಪೇಳೂ ॥ ೧ ॥ ಮರುಕವೇತಕೆ ಧರಣಿ ಪಾಲರ । ಧುರದಿ ಜೈಸುತ ಕಷ್ಟ ಪಡದಿತಿ । ಹರುಷ ಪಡೆವುದು ವರಿಸಿ ಸತಿಯರ । ಸಿರಿತ ಜಗದೀ ॥ ೨ ॥ ಹೀನ

ರಾದರು ಕುಲದಿ ನಮ್ಮಯು । ತ್ರಾಣ ಸೌಭಾಗ್ಯದಲಿ ವಾಸ್ಯತಿ । ಕ್ಷೋಣಿಯೊಳಗೆವುಗಹುದು ಮಾನ ಕನು । ವಾಸವೇಕೇ ॥ ೩ ॥ ತಡವ ಮಾಡದೆ ಪೋಪುದೆನುತಲಿ । ಕಡುಹಿನಿಂ ಶರ ಧರಿಸಿ ರಥವಂ । ನ್ನಡರಿ ಪೊರಟರು ವೀರರಾ ಧರೆ । ನಡುಗುವಂತೇ ॥ ೪ ॥ ಅಂಗವಂಗಾಧಿಪರ ಗೆಲಿದು ಕ । ಳಿಂಗದಿಂ ಕರಗೊಂಡು ಪೊಕ್ಕರು । ಸಿಂಗರದ ಕಾಶ್ಮೀರ ಪುರವನು । ತುಂಗಬಲರೂ ॥ ೫ ॥

॥ ಕಂದಪದ್ಯ ॥

ವಳ ಬಿಡೆವೆನುತ್ತ ಗರ್ಜಿಸಿ । ಬಲುಹಿಂ ತಡೆವ ಚರರಿಂಗೆ ಭಂಗಿಸಿ ಕಳುಹಲ್ ॥ ಕಳವಳದಿಂ ನಡೆತರುತ್ತ । ಲಿಳೆಯಾಣ್ಮಗೆಂದರಳುತ್ತ ಮಣಿವುತ್ತಾಗಂ ॥ ೧ ॥

॥ ರಾಗ ಮುಖಾರಿ ಏಕತಾಳ ॥

ಲಾಲಿಸೈ ವೀರಸೇನ ದೊರೆಯೇ । ಸೌಭಾಗ್ಯದ ಸಿರಿಯೇ । ಲಾಲಿಸೈ ವೀರಸೇನ ದೊರೆಯೇ ॥ ಪೇಳುವ ದೇಸೀ ವೇಳೆಯೊಳರಿಗಳ । ಜಾಲವು ರಾಜ್ಯಕೆ ಧಾಳಿಯನಿಟ್ಟರು ॥ ಲಾಲಿಸೈ ॥ ೧ ॥ ಕರವಿತ್ತು ಮನ್ನಿಸ ಬೇಕಂತೇ । ಅಲ್ಲದಡೆ ಸಂ । ಗರಕಾಗಿ ಸಿದ್ಧವಿರಬೇಕಂತೇ ॥ ಧುರವಿಕ್ರಮರೆಂದರಿತಿಹೆನವರನು । ಪರಿಪರಿ ಭಂಗಿಸಿದರು ನಮ್ಮೆಲ್ಲರ ॥ ಲಾಲಿಸೈ ॥ ೨ ॥ ಹಿರಿಯನ ಪೆಸರು ನಾಗರಾಜಾ । ಆತಗೆ ಸಹೋ । ದರನಿಪ್ಪ ಕಿರಿಯ ಪದುಮರಾಜಾ ॥ ಧರಣಿಪರೆಲ್ಲರ ಗರುವವ ಮುರಿವುತ । ಪುರಕೈತಂದಿಹರೊರೆಯುವದೇನನು ॥ ಲಾಲಿಸೈ ॥ ೩ ॥

॥ ರಾಗ ಭೈರವಿ ಅಟತಾಳ ॥

ಚರರೆಂದ ನುಡಿಕೇಳುತಾ । ಭೂನಾಥ ಹೊಂ । ಕರಿಸುತಲೆಂದ ಮತ್ತಾ ॥ ಅರಿಗಳು ಬಂದೆಮ್ಮವರ ಭಂಗಿಸಲು ಬಲು । ಶಿರಕಡರಿಹುದೇ ಪಿತ್ಥಾ ॥ ೧ ॥ ಧಾರಿಣಿ ಪಾಲಕರೂ । ಯನ್ನಧಟಿಗೆ । ಗಾರುಗೆಟ್ಟಂಜುವರೂ ॥ ಸಾರಿ ಬಂದೀಗೆಮನೂರಿಗೆ ಪೋಪ ವಿ । ಚಾರವ ಗೈದಿಹರೂ ॥ ೨ ॥ ಆರಾವರೇನೆನ್ನುತಾ । ನಾನೀಗ ವಿ । ಚಾರಿಸಿ ಗೆಲುವೆ ಮತ್ತಾ ॥ ಆರು ತಡವರೆಂದು ಸಾರಿ ಕಿರಿಯಗೆಂದ । ಭೋರನಿದಿರು ನಿಲುತಾ ॥ ೩ ॥

॥ ರಾಗ ಶಂಕರಾಭರಣ ಮತ್ಯತಾಳ ॥

ಆರೆಲಾ ನೀನ್ಯಾವ ವೀರ ಧಾರಿಣಿಪನಹೇ । ಸಾರಿ ಪುರವಿ ಗೈದಿರುವ ವಿಚಾರ ತಿಳಿದಿಹೇ ॥ ವೈರವೇನು ಯಾನ್ನೊಳಿರುಹು ಗಾರುಗೆಡಿಪೆನೂ । ಮಾರವೈರಿ ಬರಲು ಬೆದರೆ ಸಾರೆಲೊ ನೀನೂ ॥ ೧ ॥ ಉರಗ ಕುಲಜರಾವು ಕೀರ್ತಿ ಮೆರೆಸಲೋಸುಗಾ । ಧರಣಿಪಾಲರಿಂದ ಕಪ್ಪ ಹೊರಿಸುತೊಳಗಾ ॥ ವಿರಚಿಸುವೆವು ಚರಣಕೆರಗಿ ಕರವಕೊಡುವೆಯಾ । ಧುರದಿಗೆಲುವೆನಲ್ಲದಿರಲು ಹರಣ ತೊರವೆಯಾ ॥ ೨ ॥ ಹೇಡಿ ನೃಪರ ಗೆಲಿದೆನೆಂದಾತ ಬೇಡವೋ । ರೂಢಿಪಾಲನಾಗಿ ಕಪ್ಪಕೊಡುವನಲ್ಲವೊ ॥ ಪಾಡು ಪಂಥ ತೋರೆ ನೀನು ಪಡೆದ ಕೀರ್ತಿಯೂ । ಕೂಡೆ ಹಾನಿಗೈವೆ ರಣದಿ ನೋಡು ಬಲುಮೆಯೂ ॥ ೩ ॥ ವೀರನಾದಡೀಗ ತೋರು ಭೂರಿ ಬಲವನೂ । ತೀರಿಪೆ ತಾನೆನುತಲಸ್ತ್ರ ವಾರಸುರಿದನೂ ॥ ಧಾರುಣಿಪನು ತರಿದು ಗೆಲಲು ವೀರತನದಲೀ । ಘೋರನಿದಿರಿಸುತ್ತ ನುಡಿದ ಹಿರಿಯ ರಣದಲೀ ॥ ೪ ॥

॥ ರಾಗ ಸೌರಾಷ್ಟ್ರ ತ್ರಿಪುಟತಾಳ ॥

ತಮ್ಮನನು ನೀ ಗೆಲಿದೆನೆನ್ನುವ । ಹೆಮ್ಮೆಯಿಂದುಬ್ಬದಿರು ಕಪ್ಪವ । ನೆಮ್ಮ ಪಾವಕೆ ಕೊಡಲು ಬಿಡುವೆವು । ಧರ್ಮದಿಂದಾ ॥ ೧ ॥ ಶರಣು ಬರುವವನಲ್ಲ ನಿನ್ನಯ । ಹರಣ ತೆಗೆಯದೆ ಬಿಡೆನು ನಿಶ್ಚಯ । ಪೊರೆವರಿರೆ ಬೆಂಬಲಕೆ ಕರಸೈ । ಮರೆಯ ಸೇರೀ ॥ ೨ ॥ ಮಾತಿನೊಳಗತಿ ಧೀರನಾದರೆ । ಭೀತಿ ಪಡುವವನಲ್ಲ ಕಪ್ಪವ । ನಾ ತೆರುವೆನೆಂದೆನುತ ಶರಗಳ । ವ್ರಾತಸುರಿದಾ ॥ ೩ ॥ ಮೃತ್ಯುವಿನನರಸುತ್ತ ಬಂದಿಹ । ಧೂರ್ತ ಶುಭಪಥ ಕಾಂಬೆನೆನುತಲಿ । ಪೃಥ್ವಿ ಬಿರಿವೋಲ್ ಶಿಲೆ ಮಳೆಯ ಖತಿ । ನೆತ್ತು ಬಿಸುಟಾ ॥ ೪ ॥ ತಂದು ಪಾವಕ ಶರದಿ ಕ್ರೋಧವ । ಧರಿಸಿ ಫಣಿಶರ ಬಿಡಲು ವಿಷದುರಿ । ಧರಣಿಪಾಲಕ ತಡೆಯುದಾತಗೆ । ಎರಗುತೆಂದಾ ॥ ೫ ॥

॥ ಭಾಮಿನಿ ॥

ಮರವುದೆನ್ನಪರಾಧ ನಿಮ್ಮುಭ । ಯರ ಪರಾಕ್ರಮವರಿಯದಲೆ ವಿಧಿ । ವಿರಚಿಸಿದೆ ಪೊರೆಯೆಂದು ಮಣಿಯಲು ಫಣಿಪತಿಯು ನುಡಿ

ದಾ ॥ ಮರುಕನೆಳ್ಳನಿತಿಲ್ಲ ಕಷ್ಟಕೆ । ಬರುವೆವಾವೆಂದೆನುತಲೀರ್ವರು । ಕರವಗೊಂಡಾ ಸಕಲಭೂಪರಗೆಲಿದು ನಡೆತರುತಾ ॥ ೧ ॥

॥ ವಾರ್ಧಿಕ್ಯ ॥

ಪ್ರೊಡವಿಯಲಿ ಶೋಧಿಸುತ ಸುಸ್ಥಳವ ನೀರುವರು । ಕಡುತರದ ಸಿಂಗರದಿ ಕನಕ ಬೆಳ್ಳಿಯ ರತ್ನ । ಬಿಡಯುಗಳ ರಚಿಸಿ ಸಂತಸದಿಂದ ಕಿರಿಯಂಗೆ ನಾಗರಾಜಂ ನುಡಿದನೂ ॥ ಕೊಡುವೆ ರಜತದ ಮನೆಯು ನಿನಗೆ ಭಂಗಾರ ಗೃಹ । ಕೊಡೆಯು ನಾನೆನಿಸಿ ಬಾಳುವೆ ರತ್ನ ಮಂದಿರಕೆ । ಜಡಜಾಕ್ಷಿಯೋರುವಳ ತಹೆಯೋಚನೆಯ ಮಾಡಿ ಪದುಮರಾಜಂಗೆಂದನೂ ॥ ೧ ॥

॥ ರಾಗ ಸಾರಂಗ ಅಟತಾಳ ॥

ಉಳಿದೊಂದು ಮಂದಿರಕೇ । ಯುನಗೆಣೆಯುಹ । ಲಲನೆಯು ತರುವುದಕೇ ॥ ಇಳೆಯಾಣ್ಮರಲಿ ಕಂಡ ಹೊಲಬುಂಟೆ ನಿನಗೆ ಯು । ನ್ನೊಳು ಪೇಳು ಮನದಿರ ಕಳವಳಿಸದೆ ಬೇಗ ॥ ೧ ॥ ರತ್ನ ಮಂದಿರಕೆ ನಿನ್ನಾ । ರೂಪಿಗೆ ಪೋಲ್ವ । ಪತ್ನಿಯು ಕಾಣೆನಣ್ಣಾ ॥ ಪೃಥ್ವಿಯು ಜನರೆಲ್ಲ ಬಿತ್ತರಿಸುವ ಪೊಸ । ವರ್ತಮಾನವ ಕೇಳ್ದೆ ಸತ್ಯವಾಗೀರ್ಪುದೂ ॥ ೨ ॥ ವಿಧಿಪುತ್ರಿಯೋರುವಳೂ । ಯುವ್ವನವಾಂತು । ಸದನದೊಳೆಸದಿಹಳೂ ॥ ಬೆದರದೆ ವಿಧಿಪಾದ ಪದುಮಕೆರಗಿ ಕೇಳೆ । ಸುದತಿಯು ಕೊಡದಿರಸಿದು ಧಿಟವೆನಲೆಂದ ॥ ೩ ॥

॥ ವಾರ್ಧಿಕ್ಯ ॥

ಪುಟ್ಟಿಹೆವು ಹೀನ ಕುಲದಲಿ ಬ್ರಹ್ಮನಂದನೆಯು । ನೆಪ್ಟುಕಾಡಿದರು ಕೊಡಲಾರ ನವರಿಂದಲೀ । ಸೃಷ್ಟಿಯೊಳಗೆಲ್ಲಾದರಿರಲವಳ ತಂದು ವರಿಸುವದೆ ಹಿತವೆನಲೆಂದನೂ ॥ ಎಷ್ಟಾದರೆಮ್ಮ ಮನ ಸಂದೇಹ ಬಿಟ್ಟುಪೊಡ । ಮುಟ್ಟು ನಾನಾ ವಿಧದಿ ಕೇಳಿ ಕೊಡದಿರೆ ಬಳಿಕ । ಪಟ್ಟಪೆನು ನಾಶ್ರಮವನೆನಲೊಪ್ಪಿ ನಡೆತಂದ ವಿಧಿ ಬಳಿಗೆ ಫಣಿರಾಜನೂ ॥ ೧ ॥

॥ ಕಂದ ಪದ್ಯ ॥

ವಿಧವಿಧದಿಂ ನುತಿಸುತ ಶಾ । ರದೆಯರಸನ ಪಾದ ಕಾನತನಾಗೆ

ಕಂಡಾ ॥ ಮುದದಿಂ ಮನ್ನಿಸುತಾತನ । ಪದನಂಗಳ ಕೇಳ್ದನಾಗ ಸಂತಸಗೊಳುತಂ ॥ ೧ ॥

॥ ರಾಗ ಸಾಂಗತ್ಯ ರೂಪಕತಾಳ ॥

ಯಾರಯ್ಯಾ ನಿನ್ನ ವಿಚಾರವ ತಿಳಿಯೆ ನಾ । ಊರೆಲ್ಲಿ ಗುಣ ನಾಮವೇನು ॥ ಸಾರಿ ಬಂದಿರುವರೆ ಕಾರಿಯವೇನುಂಟು । ಘೋರನೆ ಪೇಳೆಂದನವನೂ ॥ ೧ ॥ ಉರಗರ ಕುಲದಿ ಪುಟ್ಟಿರುವೆ ಮಾನಷ ರೂಪ । ಧರಿಸಿ ಭೂಪಾಲರ ಗೆಲಿದೂ ॥ ಕರವಗೊಳ್ಳುತ ಕೀರ್ತಿಮೆರವುದೆಮ್ಮವನಿಯೊ । ಇರುವನನುಜ ಪದುಮರಾಜಾ ॥ ೨ ॥ ಕರೆವರೆನ್ನನು ನಾಗರಾಜನೆಂದೆನುತಲಿ । ವಿರಚಿಸಿಹೆವು ಮೂರು ಮನೆಯಾ ॥ ಮೆರವುದು ರಜತ ಕನಕ ರತ್ನದಿಂದಲಿ । ಪರಮೇಶನೊಲುಮೆಯೊಳಿಂದೂ ॥ ೩ ॥ ವೈವಾಹ ಗೈದು ಸಂಸಾರದಿ ಬಾಳುವ । ಭಾವನೆಯಾಂತು ನಿನ್ನೆಡೆಗೇ ॥ ನಾ ವೇಗದಿಂ ಬಂದೆನೈ ನಿನ್ನ ಕುವರಿಯು । ಭಾವಿಸಿ ಕೊಂಡಿಲ್ಲವರೆಗೇ ॥ ೪ ॥ ನಡೆತಂದೆನವರಿಂದ ಜಡಜದಳಾಕ್ಷಿಯು । ಕಡುಹರುಷದೊಳಿತ್ತು ಯನ್ನಾ ॥ ಬಿಡದೆಮ್ಮಭ್ಯುದಯವ ನಡಸೆಂದು ಪೇಳಿ ಕೆಂ । ಗಿಡಿಗೆದರುತಲೆಂದನಜನೂ ॥ ೫ ॥

॥ ರಾಗ ಸೌರಾಷ್ಟ್ರ ತ್ರಿಪುಟತಾಳ ॥

ಗಳಹದಿರು ಸಾಕತ್ತ ತೊಲಗೆಲೊ । ಚಲುವ ಮಗಳನು ಕೇಳುವೆಯ ನೀ । ತಿಳಿಯದಾದೆನೆ ನಿನ್ನ ಯೋಗ್ಯತೆ । ಕಾಲಗಳೆಲ್ಲಾ ॥ ೧ ॥ ಸಲಹಿದಂಗೆರಡೆಣಿಸುವಿರಿ ಭೂ । ವಲಯದೊಳಗಿಹ ಜನರ ಕೊಲುವಿರಿ । ಇಳೆಗೆ ಜನಿಸುತ ಮೊಟ್ಟೆಯಿಂ ದಿನ । ಕಳೆವರೆಲ್ಲಾ ॥ ೨ ॥ ಕುಲವಳಿದು ಹೆಣರೂಪಿಗೊಪ್ಪುತ । ಚೆಲುವೆಯನು ಕೊಡೆ ತೆರಳೆನಲು ಕಜ । ವಳಿಸಿ ನಾನಾ ತೆರದಿ ನುಡಿದನು । ನಳಿನಭವಗೇ ॥ ೩ ॥ ಭಕ್ತರಿಂಗಿತವೀವ ನೀ ವ್ರತಿ । ರಿಕ್ತ ಮಾತಾಡುವದು ನೀತಿಯೆ । ವ್ಯಕ್ತಿಯನು ತಿಳಿದಿತ್ತು ಕಳುಹೈ । ಭಕ್ತಿಯಿಂದಾ ॥ ೪ ॥ ಚಪಳತನ ಮಾತಾಡಿದರೆ ಕೊಡೆ । ತಪವ ಗೈದರು ದೊರಕಳೆನಲಾ । ನೃಪರರಸ ಬೇಸರದಿ ಪೇಳಿದ । ಶಪಥವನ್ನಾ ॥ ೫ ॥

॥ ವಾರ್ಧಿಕ್ಯ ॥

ಎಂತಾದರೂ ನಿನ್ನ ಸುತೆಯನೊಲಿಸದೆ ಪೋಗೆ । ಕಂತು ವೈರಿಯ ಭಜಕನಲ್ಲ ನಾನೆಂದು ಬಲು । ಚಿಂತಿಸುತ ಪೊರಮಟ್ಟು ಜನಕ ಮಂದಿರಕಾಗ ಬರುತ ಸಹಜನೊಳೆಂದನೂ ॥ ದಂತಿಗಮನೆಯ ತರಲು ನಿನ್ನ ನುಡಿಯಿಂ ಪೋಗಿ । ಸಂತತಿಗೆ ಕುಲಕೆ ಸಹ ಜನಮ ಕಮಲಜ ನೆನ್ನ । ಅಂತರ್ಯ ಬರಿ ಗೈದನೇನ ಗೈಯ್ಯುವದೆನಲು ಖತಿಯೊಳಗ್ರಜ ಗೆಂದನೂ ॥ ೧ ॥

॥ ರಾಗ ಕೇತಾರಗೌಳ ಝಂಪೆತಾಳ ॥

ಹೆಮ್ಮಿನಿಂದೆಮ್ಮ ಕುಲವಾ । ನಿಂದಿಸಿದ । ಬೊಮ್ಮಗೇರಿದ ಗರ್ವ ವಾ ॥ ಘಮ್ಮನಿಳಿಸುವೆನು ತೆರಳೀ । ಪಾಲಿಸೆನ । ಗೊವ್ಮೆ ವೀಳ್ಯವ ದಯುದಲೀ ॥ ೧ ॥ ಜರದ ನಾಲಿಗೆಯೊಳಿಂದೂ । ಪೊಗಳಿಸುತ । ತರುವೆ ವಿಧಿ ಸುತೆಯಸಿಂದೂ ॥ ಭರಿತ ವಿಕ್ರಮ ವೆಮ್ಮಲೀ । ಇರಲು ಭಯ । ವಿರುವುದೇನೆಂದವನಲೀ ॥ ೨ ॥ ದುಡುಕ ಬೇಡಿದಕೆ ತಮ್ಮಾ । ಸೈರಣೆಯೆ । ಕಡು ಮೂಲವಾದ ಧರ್ಮಾ ॥ ಹುಡುಗಿಯನು ಕೇಳ್ವಿನ ಯದೀ । ಕೊಡದಿರಲು । ದುಡುಕದೇ ಬಾರೊ ದಯುದೀ ॥ ೩ ॥ ವಿಧಿ ಸುತೆಯ ಕಲ್ಯಾಣವಾ । ನಿನಗೆ ಮಾ । ಡದಿರಲುಳಿಸೆನು ಪ್ರಾಣವಾ ॥ ಇದುವೆನ್ನ ಶಪಥವೆಂದೂ । ಬಂದಜನ । ಪದಕೆರಗಲೆಂದನಂದೂ ॥ ೪ ॥

॥ ಕಂದ ಪದ್ಯ ॥

ಬಂದವ ನೀನಾವವ ನಡೆ । ತಂದಿಹುದೇನ್ ಪುರವದಾವುದರು ಹೆನಲಾಗಂ ॥ ಕಂದಿದ ವದನದಿ ಪಾದ । ದ್ವಂದಕೆರಗಿ ಕಮಲಜಂಗೆ ವಿನಯದೊಳಿಂದಂ ॥ ೧ ॥

॥ ರಾಗ ಬೇಹಾಗ್ ರೂಪಕತಾಳ ॥

ಲಾಲಿಸೆನ್ನ ಮಾತ ವಾಣೀಲೋಲ ದಯುದಲೀ । ಪೇಳ್ವೆ ಸಕಲ ಮೊದಲು ನಿನ್ನ ಬಾಲಕೀಯಲೀ ॥ ಮೇಲೆ ಮೋಹವಾಂತು ಬಂದಾತ ಗನುಜನೂ । ಶೀಲವಂತ ನಾನೆ ಪದುಮರಾಯನೆನಿಪನೂ ॥ ೧ ॥ ಮಗಳ ಕೇಳ್ದನೆವದೊಳಗ್ರಜಂಗೆ ಜರದೆಯಾ । ಬಗೆಯನೆನ್ನೊಳೆಂದ

ನಣ್ಣಿಸಿಗೆ ಸಧೈರ್ಯವಾ || ಸುಗುಣ ನಿನ್ನ ನಂಬಿ ಪೇಳಿ ಬಂದೆನಿಲ್ಲಿಗೇ | ಮೃಗವಿಲೋಚನೆಯುಳ ಪಾಲಿಸೆನ್ನ ಹಿರಿಯಗೇ || ೨ ||

|| ವಾರ್ಧಿಕ ||

ಎಷ್ಟು ನೀವೆನ್ನೊಡನೆ ಕಾಡಿದರು ಬಾಲಕಿಯು | ದುಷ್ಟರಾಗಿಹೆ ನಿಮಗೆ ಕೊಡೆನು ನಿಶ್ಚಯು ನಿನ್ನ | ಪಟ್ಟಣವ ಸೇರಿ ಸೌಖ್ಯದಿ ಬಾಳಿದರೆ ಲೇಸು ತೆರಳೆನಲು ಮಣಿವುತೆಂದಾ || ಪುಟ್ಟಿಹೆವು ನಿನ್ನ ದಯದಿಂ ಸುತೆಯ ಕೊಡದವರಿಂ | ಬಿಟ್ಟಪೆನು ಮಮ ಪ್ರಾಣವೆಂದು ನಾಲಗೆ ಸೆಳದು | ಸೃಷ್ಟಿಕರ್ತನ ಚರಣದಲಿ ಪೊರಳುತಿರೆ ಕಂಡು ತಡೆದಾತ ಗಿಂತೆಂದನೂ || ೧ ||

|| ರಾಗ ಪೀಲು ಅಟತಾಳ (ತ್ರಿಪದಿ) ||

ಸೈರಿಸು ಕ್ಷಣಕೆ ಪದುಮರಾಯಾ | ನಾ | ಪೂರೈಪೆ ಮನದಿಷ್ಟ ಮಹರಾಯಾ || ವೈರವೆಣಿಸಿ ಪ್ರಾಣ ತೊರೆಯುವದ್ಯಾಕಯ್ಯಾ || ಸೈರಿಸು || ೧ || ಕೊಡುವೆ ನಾ ಮಗಳ ನಿನ್ನಗ್ರಜಗೇ | ಖೇದ | ಪಡ ಬೇಡ ಧೈರ್ಯವ ತಾಳು ಮಿಗೇ || ತೊಡರುಂಟು ಕೇಳೊಂದು ನುಡಿವೆ ನಾನಾ ಬಗೆ || ಸೈರಿಸು ||೨|| ಮಾತುಳನೊಳು ಕೇಳದಾಗದೂ | ಭೂತ | ನಾಥನೊಳಧಿಕಾರ ವೀರ್ಪುದೂ || ಜಾತೆಯ ಲಗ್ನ ಸಸೂತ್ರದೊಳ ಪ್ಪುದು || ಸೈರಿಸು || ೩ || ನಿನ್ನ ಮಾತಿನೊಳೊಪ್ಪಲಾರನು | ಪತ್ರ | ವನ್ನೀವೆ ಕೊಡು ಭಾವಗೆಂದನೂ || ಬಿನ್ನವಿಲ್ಲದೆ ಮನದೆಣ್ಣಿಕೆಯುಹು ದೆಂದ || ಸೈರಿಸು || ೪ ||

|| ರಾಗ ಸಾಂಗತ್ಯ ರೂಪಕತಾಳ ||

ಪದುಮ ರಾಯನ ಬಲುವಿಧದಿಂದ ಸಂತೈಸಿ | ವಿಧಿಯೊಲಿ ಬರದತಿಜೇಗಾ || ಚದುರನ ಕಳುಹಲು ಬೆದರದೆ ನಡೆತಂದ | ಮದ ನಾರಿಯೊಪ್ಪಿಹ ಗಿರಿಗೇ || ೧ || ಪುತ್ರಾದಿ ಗಣಗಳ ಸೊತ್ತದೊಡನೆ ಲಯ | ಕರ್ತ ತನ್ನರಸಿಯ ಸಹಿತಾ || ವರ್ತಿನೊಳಿರಿಸುತಲುತ್ಸಹ ದಿಂದಿರ | ಲತ್ತ ಬಂದೆರಗೀರ್ದ ಫಣಿಗೇ || ೨ || ಬೆಸಗೊಂಡ ನಿನ್ನಯ ವಿಷಯಗಳೆಲ್ಲವ | ನುಸುರೆನಲಾಗ ಸಂತಸದೀ || ವಿಷಕಂಠಗಿತ್ತ ಪಾ ಣೀಶನಿತ್ತೋಲೆಯ | ಕುಶಲದೊಳದರ ವಾಚಿಸಿದಾ || ೩ ||

॥ ರಾಗ ಕಾಂಬೋಧಿ ಝಂಪೆತಾಳ ॥

ಶ್ರೀಮತ್ ಸಮಸ್ತ ಸದ್ಗುಣ ಭರಿತ ಲಯಕರ್ತ । ಸೋಮಧರನಾದ ಶಂಕರಗೇ ॥ ಪ್ರೇಮದಿಂದಾ ನಿನ್ನ ಭಾವನಾಗೀರ್ಪಜನು । ಪ್ರೇಮದಿ ಕೊಡುವ ನಮಸ್ಕಾರ ॥ ೧ ॥ ಕುಶಲ ನಮ್ಮೆಲ್ಲರಿಂಗಾದಿ ಶಕ್ತಿಯ ದಯದಿ । ವಿಷಯವೊಂದಿಹುದ ಸೂಚಿಪೆನೂ ॥ ಶಶಿಮುಖಿ ಸ್ವಯಂಪ್ರಭೆಯನಾಶಿಸುತ ಫಣಿರಾಜ । ನುಸುರಿ ತಮ್ಮನ ಕಳುಹಿಸಿಹನೂ ॥ ೨ ॥ ಚಂದ್ರಶೇಖರನೆನ್ನ ನಂದನೆಯ ಕೊಡಲು ನಿ। ನ್ನಂದವೇನದ ಪೇಳಿ ಕಳುಹೂ ॥ ಚಂದದಿಂ ಯೋಚಿಸುತ ಕುಂದಿಲ್ಲದಂತೆ ನಡ । ಸೆಂದೋದಿ ಖತಿಯ ತಾಳ್ದಿಂದಾ ॥ ೩ ॥

॥ ರಾಗ ಭೈರವಿ ಅಟತಾಳ ॥

ಏನಿದೇನಚ್ಚರಿಯೂ । ಮುದದಿ ತನ್ನ । ಸೂನುವ ನಾ ವಿಧಿಯೂ ॥ ಹೀನ ಫಣಿಪಗೀವದೇನರ್ಥ ಮರುಳಾಯ್ತು । ವಾಣೀಶಗಿಂದಿನದೀ ॥ ೧ ॥ ನಮ್ಮಯ ದೇವತ್ವಕೇ । ಕುಂದಕ ತಂದ । ಧರ್ಮ ತಪ್ಪಿದನೇತಕೇ ॥ ಸಮ್ಮತವೆನಗಿಲ್ಲ ವೊಮ್ಮೆ ಕೇಳುವೆನೆಂದು । ಪದ್ಮರಾಯನೊಳೆಂದನೂ ॥ ೨ ॥ ಎನ್ನನುಜೆಯ ಮಗಳಾ । ಕೇಳಲು ನಿನ್ನ । ನೆಣ್ಣಿಸಿದೆಯೊ ಮರುಳಾ ॥ ಕನ್ಯೆಯ ಕೊಡಲು ನಿನ್ನಣ್ಣಗೊಪ್ಪುವನಲ್ಲ । ಕುನ್ನಿ ನೀ ನಡೆಯೆಂದನೂ ॥ ೩ ॥

॥ ಭಾಮಿನಿ ॥

ಖತಿಗೊಳದೆ ನೀ ನಿನ್ನ ಸೊಸೆಯಂ । ನತಿ ಮುದದಿ ಜ್ಯೇಷ್ಠಂಗೆ ಕೊಡದಿರೆ । ಪಥವಿಡಿದು ಪಿಂದಿರುಗೆ ತಾನೆಂದೆನುತ ವಂದಿಸಲೂ ॥ ಪೃಥುವಿ ಕುಸಿವಂದದಲಿ ರೋಷದಿ । ಮತವಿಹೀನನ ದೂಡಿಸುವೆ ನೆಂ । ನ್ನುತಲಿ ಗಣವೀರ್ರರನು ಕರಸಲ್ಕೆಂವರೊಂದಿಸುತಾ ॥ ೧ ॥

॥ ರಾಗ ಸೌರಾಷ್ಟ್ರ ತ್ರಿಪುಟತಾಳ ॥

ಕರದ ಕಾರ್ಯವದೇನು ಯನ್ನೊಡ । ನರುಹು ಕ್ರೋಧವ ಬಗೆಯದಾವುದು । ವಿರಚಿಸುವೆ ತಾನೆಂದು ಶಂಕರ । ಗೊರೆದನಾಗಾ ॥ ೧ ॥ ಪೇಳಿದಳು ಮತ್ತೋರ್ವಳಾತಗೆ । ಮೇಲೆಸಿಸ ವಿಕ್ರಮರು ನಾವಿರೆ ।

ಗೋಳುಗುಡಿಸುವೆ ತ್ರಿಜಗವನು ನೀ। ಪೇಳು ನಮಗೆ ॥ ೨ ॥ ಸೇಳಲೀ ನಪವಮಾನ ಬಂದೀ । ಖೂಳನೀತನು ಮಮ ಸೊಸೆಯು ನೀ। ಪೇಳಿಯಲಿ ಮಣಿವೇಗಿ ಹಿರಿಯಗೆ। ಕೇಳುತಿಹನೂ ॥ ೩ ॥ ದುಷ್ಟನೀತನ ಪ್ರೀಳಿದಿಂದಲಿ । ಸಿಟ್ಟಿನಿಂ ಹೊರದೂಡಿರೆನಲಾ । ಧಿಟ್ಟಸುತ ಕೈಯಿಕ್ಕಿ ತಳ್ಳಿದ । ದೊಟ್ಟುಗೂಡೀ ॥ ೪ ॥

॥ ದ್ವಿಪದಿ ॥

ಚಂಡಿ ಚಾಮುಂಡಿ ಗಣಗಳು ದೂಡಲವನಾ ॥ ಕೆಂಡಾಡುತಲಿ ಹರನ ದೇಹದಿಂ ಮುನ್ನಾ ॥ ೧ ॥ ಜಾತಿಗೆ ತಿರಸ್ಕಾರವಾಯ್ತೆನುತ ತಿಳಿದೂ ॥ ಆತತೂಕ್ಷಣವಿಳಿದು ಪೋಗಲಾ ಮುನಿದೂ ॥ ೨ ॥ ಫಣಿಗಳಿಳಿಯಲ್ಲುರನು ತಡೆಯುದುರ ಬಳಿಕಾ ॥ ಮನನೊಂದು ಪದುಮರಾಯಂಗೆಂದನನಕಾ ॥ ೩ ॥

॥ ರಾಗ ತೋಡಿ ಅಟತಾಳ ॥

ಎಲ್ಲಿಗೈವೆ ಪದುಮರಾಯ । ನಿಲ್ಲು ಸ್ವಲ್ಪ ಮುನಿಸೇನಯ್ಯಾ ॥ ತಲ್ಲಣವಗೊಳ್ಳಲೇಕೆ । ಕಲ್ಲೆದೆ ಮಾಡದಿರು ಕ್ಷಣಕೇ ॥ ೧ ॥ ಜಾತಿ ವಾತ್ಸಲ್ಯಗಳ ಬಿಡದೇ । ಪ್ರೀತಿಯನಹಿಗಳು ಬೆಂಬಿಡದೇ ॥ ಈ ತನುವ ನಿಳಿದವೆಲ್ಲ । ಮಾತ ಲಾಲಿಸೆನ್ನದೆಲ್ಲ ॥ ೨ ॥ ತಡೆಯಲಾರದಾದೆನರಿಯ । ದೃಢವಗೊಳಿಪೆ ಪದುಮರಾಯ ॥ ಹುಡುಗಿಗಾಗಿ ಮುನಿಸನಾಂತು । ನಡೆಯ ಬೇಡ ಪೇಳ್ವೆನಿಂತು ॥ ೩ ॥ ಸೊಸೆಯ ಕೊಡುವದಕ್ಕೆ ನಿಮ್ಮ । ವಸತಿ ಭಾಗ್ಯಾಧಿಪತನವನ ॥ ಕುಶಲದಿಂದಿತ್ತರೆ ಮಾತ್ರ । ಕುಸುಮನೇತ್ರೆ ಸಿಗುವಳ್ಮತ್ತಾ ॥ ೪ ॥ ತರುಣಿ ಸ್ವಯಂಪ್ರಭೆಗೆ ಜ್ಯೇಷ್ಠ । ರಿರುವ ಚಂದ್ರಾರ್ಕರಭೀಷ್ಟ ॥ ವರಿತು ಬರಲು ಮುಂದೆ ಕಾರ್ಯ । ನೆರವೇರುವದು ತಾಳು ಧೈರ್ಯ ॥ ೫ ॥ ಅಮವಾಸ್ಯೆಯ ದಿನದೊಳನಚಂ । ದ್ರಮರು ಸಿಗುವರೊಂದೇ ರಥದಿ ॥ ಅಮಿತ ಕಾರ್ಯ ಮುಂದೆ ನಡಸೆಂ । ದುಮೆಯರಸಕಳುಹಲವನ ॥ ೬ ॥

॥ ಕಂದ ಪದ್ಯ ॥

ಈಶನೊಳಾಜ್ಞೆಯ ಗೊಂಡವ । ವಾಸ್ಯೆಯ ದಿನ ಕೈತರುತ್ತಲಿನ

ಚಂದ್ರಮುಕಿಸೆ || ಮಾಸ್ಯಂದನದಿದಿರೊಳು ನಿಲ | ಲಾ ನೃಪನೊಡನಿಂತು ಪೇಳ್ದರಾ ಸಂತಸದಿಂ || ೧ ||

|| ರಾಗ ಹಂಸಧ್ವನಿ ಅಟತಾಳ ||

ಯಾರಯ್ಯಾ | ನೀನು | ಯಾರಯ್ಯಾ || ಪಲ್ಲ || ಯಾರಯ್ಯಾ ನೀನೆಮ್ಮ ರಥಕಡ್ಡ ನಿಂದೂ | ಈ ರೀತಿ ಮಣಿದಿಹ ಕಾರ್ಯ ಪೇಳಿಂದೂ || ಊರಾವುದರುಹು ನಿನ್ನಭಿದಾನವೇನೂ | ಈರ್ವರೊಳಾರ ಕಾಣಲು ಬಂದೆ ನೀನೂ || ಯಾರಯ್ಯಾ || ೧ || ವಿಧಿಯು ಕಟ್ಟಳೆಯಂತೆ ದಿನ ದಿನ ಚರಿಸೀ | ಯಿದುವೆ ವಿರಾಮಕಾಲವ ಪರಿಹರಿಸೀ || ಮೊದಲಿನಂದದಿ ಪೋಪೆವದರಿಂದ ಬೇಗಾ | ಬೆದರದೆ ಪೇಳು ಸಮಸ್ತವನೀಗಾ|| ಯಾರಯ್ಯಾ || ೨ ||

|| ರಾಗ ಯಮುನಾಕಲ್ಯಾಣಿ ಝಂಪೆತಾಳ ||

ಚಂದ್ರ ಸೂರ್ಯರು ಕೇಳಿರಿಂದೆನ್ನ ಮಾತಾ | ಚಂದದಿಂದೊರವೆನಾ ಬಂದಿರುವ ವಾರ್ತಾ || ಯಿಂದು ಭೂಲೋಕದಲಿ ಮಂದಿರವು ನಮಗೇ | ವಂದೆ ಮತದಿಂದಿರುವೆವಿಂದು ಜತೆಯೊಳಗೇ || ೧ || ನಾಗರಾಜನು ಹಿರಿಯನಾಗೀರ್ಪನೆನ್ನ | ಭಾಗ್ಯಯುತ ನಾ ಪದುಮರಾಯನಹೆ ಮುನ್ನಾ || ಸಾಗಿ ನೃಪರುಗಳ ಸಂಗ್ರಾಮದಲಿ ಗೆಲಿದೂ | ಯೋಗಬಲದಿಂದ ಕಪ್ಪವ ಹೊರಿಸಿ ಮೆರೆದೂ || ೨ || ಕಟ್ಟಿಹೆವು ಮೂರು ಮನೆಯಷ್ಟ ಭಾಗ್ಯದಲೀ | ದಿಟ್ಟತನದಿಂ ಹೇಮ ರತನ ಬೆಳ್ಳಿಯಲೀ || ಸೃಷ್ಟಿಕರ್ತನ ಮಗಳನಿಷ್ಟಗೊಂಡೆನ್ನಾ | ಜ್ಯೇಷ್ಠನಟ್ಟಿದ ವಿಧಿಯ ಬಳಿಗೆ ಮೊದಲೆನ್ನಾ || ೩ || ಆತನಿಂದೊಪ್ಪಿಗೆಯನಾಂತು ಹರನೆಡೆಗೇ | ನಾ ತೆರಳಿ ಮನವರಿತು ಬಂದೆ ನಿಮ್ಮೆಡೆಗೇ || ಪ್ರೀತಿಯಿಂದರುಹಿ ಮನದಾತುರವನೆನಲೂ | ಶೀತಕಿರಣನು ನುಡಿದ ನಾತಂಗೆ ಮೊದಲೂ || ೪ ||

|| ರಾಗ ಕಲ್ಯಾಣಿ ತ್ರಿಪುಟತಾಳ ||

ಕೇಳಿಮ್ಮ ಮನದಿರವಾ | ಪದುಮರಾಯಾ | ಕೇಳಿಮ್ಮ ಮನದಿರವಾ || ಕೇಳು ಕಮಲಜ ಬಾಲಕಿಯಳೊಡ | ಬಾಲ್ಯದಲಿ ನಾವ್

ಬಾಲಕೇಳಿಯು । ಲೀಲೆಯಿಂ ಗೈದೀರ್ಪ ದೆಸೆಯಿಂ । ದಾಲಲನೆ ಸಹ
ಜಾತೆ ಯೆನಿಪಳು ॥ ೧ ॥ ಜಡಜನೇತ್ರೆಯು ನಿನ್ನಯಾ । ಜ್ಯೇಷ್ಠಗೆ
ಕೊಡ । ಲೆಡರಿಲ್ಲವೈ ನಿಶ್ಚಯಾ ॥ ತಡವ ಮಾಡದೆ ನಡಸಿ ಕಾರ್ಯವ ।
ನುಡಿದತೆರ ರಥವಡರಿ ಶುಭದಿನ ॥ ಬಿಡದೆ ನಡೆತಹೆ ಪೊಡವಿ ಪುರಕೆ ।
ಕೊಡುತ ಪತ್ರವ ನಡಸಿ ಲಗ್ನವ ॥ ೨ ॥

॥ ವಾರ್ಧಕ್ಯ ॥

ಎನಲೆಂದ ಭಾಸ್ಕರಂ ಪುಣಯುಕೆ ಸಮಗೆ ಮೇ । ಲಿನ ಕೃಷ್ಣ
ಪಕ್ಷದಮಾವಾಸ್ಯೆಯಲ್ಲದೆ ಸಮಯ । ವಿನಿತಿಲ್ಲವಾದಿನಕೆ ಕೈಲಾಸದಲಿ
ಲಗ್ನವಿರಚಿಸಿರಿ ಬಹೆವೆನ್ನುತಾ ॥ ಇನ ಶಶಿಗಳತ್ತ ತೆರಳಲ್ ಸಕಲ
ವಾರ್ತೆಯಂ । ವಿನಯದಿಂ ಹರವಿಧಿಯರಿಂಗರುಹಿ ಪದ್ಮರಾ । ಯನು
ಜ್ಯೇಷ್ಠಗೊರೆಯುಲಯ್ತರೆ ಸ್ವಯಂಪ್ರಭೆಯು ಕರನೆಂದನಾ ಪರಮೇಷ್ಠಿ
ಯಾ ॥ ೧ ॥

॥ ರಾಗ ಸಾಂಗತ್ಯ ರೂಪಕತಾಳ ॥

ಕಮನೀಯಗಾತ್ರೆ ಸಂಭ್ರಮವಂತೆ ಮಗಳೆ ಬಾ । ಸುಮಗಂಧಿ
ಕೇಳೆನ್ನ ಮಾತಾ ॥ ರಮಣ ನಿನಗೆ ಯೋಗ್ಯ ಸಮನಾಗಿ ದೊರಕಿದ ।
ವಿಮಲ ಮೂರುತಿ ಭಾಗ್ಯವಂತಾ ॥ ೧ ॥ ಧೀರಧನಾಢ್ಯ ಸುಂದರ
ಗುಣಯುತ ಕೀರ್ತಿ । ಮೂರು ಲೋಕದಿ ಮೆರೆದಿಹುದೂ ॥ ಧಾರಿಣಿ
ಯಲಿ ನಾಗರಾಜನೆಂದೆಂಬರು । ಮಾರವೈರಿಯ ಭಕ್ತನಾತಾ ॥ ೨ ॥
ಸುತೆಯೆ ನಿನ್ನಭಿಮತದಂತೆ ಸೌಭಾಗ್ಯಾಧಿ । ಪತಿತನ ಸತಿಯರಿಗೆಂ
ದೂ ॥ ಹಿತದಿ ಪೇಳಿಹೆ ಮುಂದಿನಮಾವಾಸ್ಯೆಗಾ ಲಗ್ನ । ಮತಿ ಮುದದಿಂ
ಮಾಳ್ಪೆವೆಲ್ಲ ॥ ೩ ॥

॥ ಶಾರ್ದೂಲ ವಿಕ್ರೀಡಿತ ವೃತ್ತ ॥

ಕೈಲಾಸಾದ್ರಿಯೊಳಪ್ಪುದೈಸೆ ನಿನಗಾ ವೈವಾಹ ಸಂತೋಷಮೇ ।
ಪೇಳೆಂದಾಡಲು ತಾತಗೊಂದಿಸುತಲಾ ನಾಚುತ್ತಲಿಂತೆಂದಳೂ ॥ ಕೇಳ
ಲ್ಕೇನಿಹುದೆನ್ನೊಳೆಂದು ಸಕಲಂ ನೀಂ ಬಲ್ಲೆ ಶಾಸ್ತ್ರಗಮಾ । ಬಾಳೇರ್ಪೆಂ
ಸುಖದಿಂದ ಕಾಂತನೊಡ ತಾನೆಂದಾಕೆಯೊಪ್ಪೀರ್ದಳೂ ॥ ೧ ॥

॥ ಭಾಮಿನಿ ॥

ಮಗಳ ನುಡಿಗೊಡಬಟ್ಟು ಕಮಲಜ । ನಗುತ ಸನ್ನಹೆ ಪೊದಗಿ ಸುತ್ತಿರ । ಲಗಲಿರುವ ಸಹಜನನು ಕಾಣದೆ ನೊಂದು ಫಣಿಪತಿಯು ॥ ಮೃಗವಿಲೋಚನೆಯುಳ ತರಲು ಶಪ । ಥಗಳ ನೊರದೈದಿರುವ ತಮ್ಮನ । ಮೊಗವ ಪರಿಕಿಪುದೆಂತೆನಲು ಪದಕೆರಗೆ ನಗುತೆಂದಾ ॥ ೧ ॥

॥ ರಾಗ ಶಂಕರಾಭರಣ ತ್ರಿಪುಟತಾಳ ॥

ಬಂದೆಯಾ ಕುಳ್ಳಿರು ಸಹಜ ನಾ । ನಂದವಾಂತೆನು ದಣಿದೆಯಾ ॥ ಒಂದುಳಿಯದರುಹೆನ್ನ ಕಾರ್ಯಕೆ । ನೊಂದ ಹದನಾ ॥ ೧ ॥ ಸುತೆಯ ನೆನಗೀವುದಕೆ ವಿಧಿ ಸ । ಮ್ಮತಿಯನಿತ್ತನೆ ಹಿತದಲೀ ॥ ಮತಿಗೆ ತೋರದ ತೆರದಿ ಜರದನೆ । ಖತಿಯೊಳಿಮಗೇ ॥ ೨ ॥ ಬೇಸರವು ಯನಗಿಲ್ಲ ಕೊಡದಿರೆ । ಏಸು ನಾರಿಯರ್ಜಗದಲೀ ॥ ತೋಷದಿಂ ಬಾಳಿಹರೊ ತಹೆನಾ । ಕ್ಲೇಶವೇಕೇ ॥ ೩ ॥

॥ ರಾಗ ಹನುಮತೋಡಿ ಅಟತಾಳ ॥

ಅಣ್ಣ ನಿನ್ನೊಡನೆಂಬುದೇನೂ । ನಾ । ಬನ್ನ ಬಟ್ಟಿಹೆ ಬಗೆಗಳನೂ ॥ ನಿನ್ನಾಜ್ಞೆಯಲಿ ಪೋಗಿ ಕನ್ನಿಕೆಯುಳ ವಿಧಿ । ಯನ್ನ ಕೇಳಲು ಕೊಡೆನೆನ್ನಲಾ ಕ್ಷಣದಲ್ಲಿ ॥ ಅಣ್ಣ ॥ ೧ ॥ ಪ್ರಾಣವ ಕಳಕೊಂಬೆನೆಂದೂ । ಮ । ತ್ತಿನಾಲಗೆಯ ಸೆಳದಂದೂ ॥ ಕ್ಷೋಣಿಯೋಳ್ ಪೊರಳಲು ಕಾಣುತ್ತ ಮಗಳನು । ತಾ ನೀವೆ ಮನದನುಮಾನ ಬೇಡೆಂದನೂ ॥ ಅಣ್ಣ ॥ ೨ ॥ ಹರನನೊಪ್ಪಿಸಿ ಬಾರೆನುತ್ತಾ । ಓಲೆ । ಬರದೆನ್ನೊಳೀಯಲು ಮತ್ತಾ ॥ ತೆರಳುತವಗೆ ಕೊಡಲರಿತಭಿಮತವನ್ನು । ಭರಿತ ಖಾತಿಯ ತಾಳ್ದು ಗಣಗಳಿಂ ದೂಡಿಸೆ ॥ ಅಣ್ಣ ॥ ೩ ॥

॥ ವಾರ್ಧಿಕ್ಯ ॥

ಮುನಿಸಿಂದ ಪೊರಡಲೆನ್ನನು ಸರಿಸಿ ಹೆರನಂಗ । ವನು ತೊರವುದು ಫಣಿಗಳವಮಾನ ಸಹಿಸದೆ ಬರಲು । ಘನದುರಿಯ ತಾಳಮಾತ್ರಿಣಯ ಸಂತೈಸುತೆನ್ನನು ಕರವುತಿಂತೆಂದನೂ ॥ ವನಜಾಕ್ಷಿ ವಿಧಿ

ಕುವರಿಯನು ಕೊಡುವೆನಾದರಾ । ಮನೆ ಸಕಲ ಭಾಗ್ಯಾಧಿಕಸವಿತ್ತ ರೆಡರಿಲ್ಲ । ವೆನುತ ಚಂದ್ರಾರ್ಕರಿರುವನು ಕೇಳು ಬಾರೆಂದು ಮನಸಾವ ಧಾರಿಯು ಕಳುಹಲೂ ॥ ೧ ॥

॥ ರಾಗ ಕಾಮವರ್ಧಿನಿ ಅಟತಾಳ ॥

ಚಂದ್ರ ಸೂರ್ಯರ ಮಾನದಂಡವರಿತು ಮಿಗೆ । ಮುಂದೆ ಬಪ್ಪ ಮಾಮಾಸ್ಯೆಗೇ ॥ ಚಂದದ ಲಗ್ನವೆಂದರಿತು ನಿಶ್ಚೈಸಿ ನಾ । ಬಂದು ಸಾರಿದೆ ಹರಗೇ ॥ ೧ ॥ ಹಿಂದುಳಿಯದೆ ಬ್ರಹ್ಮಗೆಂದು ಮಾತ್ರೆಯ ನಡೆ । ತಂದೆ ನಿನಗೆ ಪೇಳಲೂ ॥ ಮುಂದಿನ ಸನ್ನಾಹ ಚಂದದೊಳಾಗಬೇ । ಕೆಂದೊದಗಿಸಿದರಾಗ ॥ ೨ ॥ ಮೂರು ಲೋಕಕೆ ಪತ್ರವ್ರೋರಂತೆ ಕಳುಹಿತ್ತ । ಸೇರಿಪ್ಪ ಜನರೊಡರೊಡನೇ ॥ ಸಾರಿದ ದಿಬ್ಬಣ ಪಾರದೊಡನೆ ನಡೆ । ವಾ ರಜತಾದ್ರಿಗಂದೂ ॥ ೩ ॥ ಸುರರು ಕಿನ್ನರರು ಕಿಂಪುರುಷ ವಿದ್ಯಾಧರ । ರಿರಲಲ್ಲಿ ಚಂದ್ರಾರ್ಕರೂ ॥ ಉರಗರು ಸತಿಯರು ಸಹಿತ ಶೋಭಿಸುತಿರೆ । ಮೆರೆವಮಾಮಾಸ್ಯೆ ದಿನಾ ॥ ೪ ॥

॥ ಭಾಮಿನಿ ॥

ಇಂದ್ರ ಗುರುವಿನ ಮುಖದಿ ಕಮಲಜ । ನಂದನೆಯ ವೈವಾಹ ಫಣಿಪಗೆ । ಚಂದದಿಂ ತೀರಿಸುತ ಸಕಲರೊಳಂದು ಬಳುವಳಿಯಾ ॥ ಮಂದಗಮನೆಯು ಪಡೆಯಲಾಹರ । ನಂದದಿಂ ಗಣವೀಶ್ವರನು ಕೊಡ । ಲಂದು ಸಂತಸವಾಂತು ನೆನವುತಲಾದಿಶಕ್ತಿಯನೂ ॥ ೧ ॥

॥ ಕಂದ ಪದ್ಯ ॥

ಮಾತುಳಸಿಂದನುಮತಿ ಗೊಂ । ಡಾ ತರಳಾಕ್ಷಿಯು ಜನೌಘ ಕೊಂದಿಸುತಾಗಳ್ ॥ ಮಾತೆಗೆರಗಿ ವಾಣಿಗೆ ಮಣಿ ॥ ದಾ ತಾತಗೆರಗಲು ನೀತಿ ವಾಕ್ಯವ ನೊರೆದಂ ॥ ೧ ॥

॥ ರಾಗ ಮಧ್ಯಮಾವತಿ ಯೇಕತಾಳ ॥

ಕೇಳವ್ವಾ ಮಗಳೆ ನಾ ಪೇಳುವ ಮಾತಾ । ಲೋಲಲೋಚನೆ ಚಿಂತೆ ತಾಳದಿರ್ ವ್ಯರ್ಥಾ ॥ ಪಾಲಿಸಿದೆನು ನಾನೀ ಕಾಲದವರೆಗೇ । ಏಳಿಗೆ ಬಯಸಿ ನೀ ಪೇಳಿದ ಹಾಗೇ ॥ ೧ ॥ ವಿರಚಿಸಿದೆನು ನಿನ್ನ

ಪರಿಣಯ ಮುದದೀ । ತರಳೆ ನಿನ್ನಿರದೆರೆಯಾಗೆ ಸರ್ವಹಿತದೀ ॥ ಮರೆಯ ದಿರೈ ನಿನಗೊರವೆ ನೀತಿಯನೂ । ನಿರತ ಪಾಲಿಸು ಪತಿವ್ರತ ಧರ್ಮ ಗಳನೂ ॥ ೨ ॥ ವರನೇಳ್ವ ಮೊದಲು ಶುದ್ಧಿಯ ಮಾಡು ಪುರವಾ । ಜರೆಯದೆ ದಂಡಿಸದಿರು ದಾಸಿ ಕುಲವಾ ॥ ಗುರುಹಿರಿಯರ ಭಕ್ತಿ ಮರೆಯದಿರ್ಮನದೀ । ನಿರತ ಕೀರ್ತಿಯ ತಾಳಿ ಬಾಳಿರು ಜಗದೀ ॥ ೩ ॥ ನೆರೆಹೊರೆಯವರೊಳ್ಕಲಹ ಮಾಡಬೇಡಾ । ತರಳೆ ನೀ ದೂರ ಪೋಗದಿರೋರ್ವಳ್ ನೋಡಾ ॥ ಜರೆವರೆ ಪತಿಗೆರಡೆಣಿಸಿ ಪಾತಕಕೇ । ಗುರಿಯಾಗದಿರು ಬೇಸರವ ತಂದು ಮನಕೇ ॥ ೪ ॥ ಮೀರದಿರ್ಪತಿ ವಾಕ್ಯ ವಾರಿಜ ಮುಖಿಯೇ । ನೀಂನೊಡನೆಸುಖದಿಂ ಬಾಳು ಸುತೆ ಯೇ ॥ ಮಾರವೈರಿಯ ಭಕ್ತಳಾಗೆಂದು ಮತ್ತಾ । ವಾರಿಜಭವ ಕಣ್ಣ ನೀರೊರಸುತ್ತಾ ॥ ೫ ॥

॥ ಕಂದ ಪದ್ಯ ॥

ನೀತಿ ವಿಚಾರಂಗಳ ತನು । ಜಾತೆಗರುಹಿ ತಳ್ಕಿಸುತಲಾ ನಾಗ ರಾಜ ॥ ಗಾ ತಿಳುಹಿದ ಹತ್ತಿರ ಕರ । ದಾತಂಗೆ ತನ್ನ ಕುಮಾರಿಯಳ ಕೈಗಿತ್ತಂ ॥ ೧ ॥

॥ ರಾಗ ಬೇಗಡೆ ಅಟತಾಳ ॥

ನಿನಗಿತ್ತೆ ನಾ ಮಗಳಾ । ಪನ್ನಗ ರಾಜ । ನೆಣಿಸದೆ ತಪ್ಪುಗಳಾ ॥ ಅಣುಗೆಯ ಪಾಲಿಸು ಕನಿಕರವಿಟ್ಟಕೆ । ಮನಸಿಗೆ ಬೇಸರವನುಗೊಳಿ ಸದೆ ನಿತ್ಯ ॥ ೧ ॥ ಚಿಕ್ಕ ಪ್ರಾಯದ ಕೋಮಲೇ । ತಿಳಿಯಳೊಂದ । ಳಕ್ಕರದಿಂದ ಮೇಲೇ ॥ ಚೊಕ್ಕದಿಂದರುಹಿ ನೀ ತಕ್ಕ ಕಾಲಕೆ ಸೇವೆ । ಭಕ್ತಿಯಿಂದಲಿ ಗೈಸಿ ನಿತ್ಯಸಂತಸ ತಾಳೂ ॥ ೨ ॥ ಪತಿಯ ಪಾದವ ಬಯಸೀ । ಬಂದವಳ ಶಾ । ಶ್ವತಳಾಗಿ ಹಿತಗೊಳಿಸೀ ॥ ಸತತ ನಿನ್ನಯ ದುಃಖ ಸುಖಕೆ ಸಮತೆದೋರಿ । ಸುತ ಕೀರ್ತಿಯುತ ನಾಗೆಂನ್ನುತ ಕಳುಹಿದನಾಗಾ ॥ ೩ ॥

॥ ವಾರ್ಧಿಕ್ಯ ॥

ಮದುವೆಗೈತಂದವರು ತೆರಳಲ್ಕೆ ಮಂದಿರಕೆ । ವಿಧಿಪುತ್ರಿಯರ

ಗೇಂದ್ರ ಪದುಮಾರಾಯಂ ಸಹಿತ । ಪದನ ಕೈತಂದು ಸ್ವಯಂಪ್ರಭೆಗೆ ಪುರದವಿಸ್ತಾರವಂ ತಿಳುಹುತ್ತಲೀ ॥ ಸುದತಿಗಾ ನಾಗಕನ್ನಿಕೆಯೆಂಬ ಪೆಸರಿರಿಸಿ । ಒದಗಿಸಿಂದಿತ್ತಡಾ ರತ್ನ ಮಂದಿರದಿ ಸುಖ । ದುದಧಿಯಲಿ ಬಾಳೀರ್ದದಾಂಪತ್ಯ ಜೀವನವಿ ಪತಿವ್ರತಾಧರ್ಮದಿಂದಾ ॥ ೧ ॥

॥ ರಾಗ ನೀಲಾಂಬರಿ ರೂಪಕತಾಳ ॥

ಇತ್ತಲು ನಿರ್ಜರರಧಿಪತಿ ಚಿತ್ತದಿ ಮರುಕವ ತಾಳುತ । ಬಿತ್ತರಿಸಿದ ಸುರ ಮೊತ್ತಕೆ ಹತ್ತಿರಕರವುತಲೀ । ಸ್ವರ್ಗವಾಯಿತ್ತು ಮಮ ಬಾಳುವೆ । ಯುಕ್ತಿಯು ತೋರದು ಮನಸಿಗೆ । ಉತ್ತಮನೆನಿಸುತ ತ್ರಿಜಗದಿ ಸತ್ವವು ಹಿಂಗಿತಲಾ ॥ ೧ ॥ ಸುರಮುನಿಯಾಡಿದ ಮಾತಿಗೆ ತೆರಳಿದೆ ನಿರ್ಮಲ್ಲರನು । ಸರಿಸುತ ವಿಧಿ ನಂದನೆಯುಳ ಪರಿಪಾತಾರದಿಂದಾ ॥ ಧುರದಲಿ ನಮ್ಮನು ಸೆರೆಯೊಳಗಿರಿಸಿದ ಪೌಲೀ ನಾಕವ । ಪೊರೆಯುವ ಬಗೆ ಯಿನ್ನೆಂತಹದೋ ಪರಿಹಾಸ್ಯವಿದಾಯ್ತು ॥ ೨ ॥ ದಿನ ನಿತ್ಯವು ನೆನನೆನವುತ । ತನುವ ಕೊರೆವ ಬಗೆಯಿಂದಲಿ । ತಣಿಸುವ ಪಾಯವ ಪೇಳುವೆನೆನುತಲಿ ನಗುತೆಂದಾ ॥ ಮಮನಗರಿಯೊಳ್ ಚೆಂಡಾಟವ ದನುಜರ ಕರಸುತ್ತಾಡುವ । ದೆನುತಲಿ ಸುರರನುರು ತೊಡಗಿದರಾ ಸುರಪುರದೀ ॥ ೩ ॥

॥ ರಾಗ ಬೇಹಾಗ್ ರೂಪಕತಾಳ ॥

ಆಡಿದರೂ । ಚೆಂಡ । ನಾಡಿದರೂ ॥ ಪಲ್ಲ ॥ ಓಡಿ ಪದದಿಂದೂಡಿ ಕೊಂಡಾಡಿ ನೋಡಿ ಕಾಡಿಪಾಡಿ ॥ ಕೂಡಿಕೂಡಿ ನೀನಾಡಬೇಡವಾಡಲರಿಯದ ಹೇಡಿಯೆಂದು ॥ ಆಡಿದರೂ ॥ ೧ ॥ ಹಾರಿಸುವೆ ನಾ ಮೇಲಕೆಂದು ಸಾರಿ ದೂರ ಸೇರಿ ಪರಾರಿ ॥ ದಾರಿ ಬಿಟ್ಟು ಹಾರಿಸುತ್ತ ವೀರರೆತ್ತಿ ಕೊಳುತ ಚೆಂಡ ॥ ನಾಡಿದರೂ ॥ ೨ ॥

॥ ದ್ವಿಪದಿ ॥

ಈ ತೆರದಿ ಚೆಂಡಾಟವಾಡಿ ವಿಧವಿಧದೀ ॥ ಭೂತಳಕೆ ಬಟಿಜ್ಞಾನ ಮರವುತಾಕ್ಷಣದೀ ॥ ೧ ॥ ಬಣ್ಣಿಸುತ ಸಕಲವನು ಸುರರಸುರರಾಗಾ ॥ ರನ್ನಮಂದಿರವೆದುರು ನಿಂದರತಿ ಬೇಗಾ ॥ ೨ ॥ ಉಪ್ಪರಿಗೆಯಿಂ ನಾಗ

ಕನ್ನಿಕೆಯು ನೋಡಿ ॥ ಒಪ್ಪಿದಾನಂದದಿಂದಾ ನಗೆಯ ಮಾಡೀ ॥ ೩ ॥ ನೋಡುತಿರಲಾ ಮುಖದ ಕಾಂತಿಯಿಂದವರೂ ॥ ರೂಢಿಗೊರಗಿದರಾಗ ಕಳವಳಿಸಿ ಸುರರೂ ॥ ೪ ॥ ಬೆದರುತ್ತ ಪತಿಗಿದರ ಬಿಡದೆ ಸೂಚಿಸುತ್ತಾ ॥ ಮುದದಿ ಮಂತ್ರೋದಕವ ಪ್ರೋಕ್ಷಿಸಲ್ಕತ್ತಾ ॥ ೫ ॥ ಮೂರ್ಛೆಯಿಂದೆದ್ದಾಗ ನೋಡೆ ವಿಧಿ ಸುತೆಯಾ ॥ ಆ ಕ್ಷಣದಿ ಕೈ ಹೊಯ್ದು ಪೇಳ್ದಳೀ ಬಗೆಯಾ ॥ ೬ ॥

॥ ರಾಗ ಆನಂದ ಭೈರವಿ ಯೇಕತಾಳ ॥

ಬಂದೆಯಾ । ಇಂದ್ರ । ನೊಂದೆಯಾ ॥ ಪಲ್ಲ ॥ ಬಂದೆಯಾ ನೀನಿಲ್ಲಿ ಸುರರ । ವೃಂದದೊಡ ಚೆಂಡಾಟವಾಡಿ । ದಣಿದಿರೇ । ಧರೆಗೆ । ಮಣಿದಿರೇ ॥ ೧ ॥ ಹಿಂದಕೆನ್ನ ಬಯಸಿ ಬಂದು । ಹೊಂದಿದೆ ನೀ ಸೆರೆಯೊಳಂದು । ಕೊರತೆಯಾ । ಆದರ । ಮರತೆಯಾ ॥ ೨ ॥ ಉತ್ತಮ ನೀನಾಗಿ ನಮ್ಮ । ಪೃಥ್ವಿಗೆ ಬಂದೆನ್ನ ಮನೆಯ । ಇದಿರೊಳು । ಬಿದ್ದೆ । ಮುದದೊಳೂ ॥ ೩ ॥ ಮಾನಕೆಟ್ಟ ನಿನ್ನ ಮುಖವ । ನಾನು ನೋಡೆನೆಂದು ಸತಿಯು । ಪೋದಳು । ಕಾಣ । ದಾದಳೂ ॥ ೪ ॥

॥ ಕಂದ ಪದ್ಯ ॥

ಬಹುವಿಧ ನಿಂದ್ಯಸ್ತುತಿಯಂ । ಸಹಸ್ರಲೋಚನನು ಕೇಳಿ ಬೆರಗಾಗುತ್ತಂ ॥ ಸಹಿಸದೆ ಮನಸಂತಾಪವ । ಮಹಿಗೆ ಬರುತ ಕೆಟ್ಟೆವೆಂದು ಸುರರೊಡನೆಂದಂ ॥ ೧ ॥

॥ ರಾಗ ಮೋಹನ ಝಂಪೆತಾಳ ॥

ಬ್ರಹ್ಮನಂದನೆಯೀವಳು ನಮ್ಮ ಸೋಲಿಸಿದವಳು । ಹೆಮ್ಮೆಗೊಂಡಿಹಳೀಗ ಹೆಮ್ಮನಿಂ ಬೇಗಾ ॥ ಧರ್ಮದಲಿ ಮೇಲೆನುತ ನಮ್ಮಿದಿರಿನಲಿ ನಿಲುತ । ಸುಮ್ಮನೇ ನಿಂದಿಸಿದಳೆಮ್ಮ ಕರವೆತ್ತಾ ॥ ೧ ॥ ಬೇಸರವ ಕಳೆವುದಕೆ ತೋಷದಿಂ ಬಂದುದಕೆ । ಕ್ಲೇಶಕೆಡೆ ಮಾಡಿದಳು ಮೋಸಗೊಳಿಸಿಹಳೂ ॥ ಈಸು ವೈಭವವೀರ್ಪಡಾಸುದತಿಗಿಹದೆಪರ್ಪ । ವಾಸುದೇವಗೆ ದೂರಿನಾಶಿಸುವ ಸಾರೀ ॥ ೨ ॥

॥ ಕಂದ ಪದ್ಯ ॥

ಎಂದೆನುತಲಿ ಕರಕೊಳುತಂ । ವೃಂದಾರಕರೊಡನೆ ಪಾಲ್ಗಡಲಿನ ತಡಿಯೊಳಂ ॥ ನಿಂದೆಲ್ಲರು ಜಯ ಜಯವೆನೆ । ಇಂದಿರೆಪತಿಯುವರ ಕೂಡೆ ಕರಸುತ್ತೆಂದಂ ॥ ೧ ॥

॥ ರಾಗ ಬಿಲಹರಿ ಅಟತಾಳ ॥

ಯಾಕೆನ್ನ ನುತಿಸುವಿರೀ ಪರಿಯಿಂದಾ । ಪಾಕಶಾಸನ ಸಹಿತೀ ಸುರವೃಂದಾ ॥ ನಾಕದಿ ನಿಲಲಿಡೆಯಿಲ್ಲವೇ ನಿಮಗೇ । ಶೋಕದ ಕಾರಣ ಪೇಳಿರೆಂದೆನಗೇ ॥ ೧ ॥ ಸಂಧಾನವೇ ಖಳರೊಳು ನಿಮಗೀಗಾ ॥ ಬಂದಿಹರ್ನಿನ್ನೊಡ ಹದನವೇನೀಗಾ ॥ ನೊಂದುಕೊಳ್ಳದೆ ಪೇಳಿರೆಂದೆನಲಿರಗೀ । ಯಿಂದ್ರನೆಂದನು ಗೋವಿಂದನೊಳು ತಾ ಮರುಗೀ ॥ ೨ ॥

॥ ರಾಗ ತೋಡಿ ತ್ರಿಪುಟತಾಳ ॥

ಅವಧರಿಸೆಮ್ಮ ಮಾತಾ । ಬಂದಿರುವ ಕಷ್ಟ ॥ ವಿವರಿಪೆ ಲಕ್ಷ್ಮೀನಾಥಾ ॥ ದಿವಸಧಿಪ ಸಖ ಕುವರ ತನುಜೆಯು । ದಿವಕೆ ಯೋಗ್ಯಳೆನ್ನುವ ವಿಚಾರದಿ । ಕುವರ ಸಹಸುರ ನಿವಹದೊಡನತಿ । ಜವದಿ ಸಾರಿದೆವವಳ ರಾಜ್ಯಕೆ ॥ ಅವಧರಿಸೆಮ್ಮ ॥ ೧ ॥ ನಾನಾ ಯತ್ನದಿ ನುಡಿಸೀ । ಕೇಳದಿರೆ ಧುರಕೆಂ । ದಾನು ನಿಲಲು ಯೋಚಿಸೀ ॥ ಮಾನಿನಿಯು ಗೀರ್ವಾಣರನು ತವ । ತ್ರಾಣದಿಂ ಸೆರೆಗಾಸಿಸುತ ಬಲು । ಮಾನಹಾನಿಯ ತಾನೆಸಗಿ ಸುರ । ತಾಣ ಕಟ್ಟಿದಳೇನನೆಂಬೆನು ॥ ಅವಧರಿಸೆಮ್ಮ ॥ ೨ ॥

॥ ವಾರ್ಧಿಕ್ಯ ॥

ಮರತು ನಾನಿರಲು ಕೆಲಕಾಲಕಳೆದವಳಿಂಗೆ । ಉರಗರಾಯಗಿತ್ತು ಪರಿಣಯಂ ವಿರಚಿಸಲು । ಮೆರದಿಲ್ಕತ್ತ ಭೂಲೋಕದಲಿ ನಾನೊಂದು ದಿನ ಜೀಸರವ ಕಳೆಯಲೂ ॥ ಸುರರಸುರರೊಡನೆ ಚಂಡಾಟವಾಡುತಲವಳ । ವರರತ್ನನಿಳಯದೆಡೆಗೈತರಲು ಕಂಡೆಮ್ಮ । ಪರಿಹಾಸ್ಯಗೈದಳು ಪುರಿಗೆಯೊಳ್ನಿಂದು ಪತಿವ್ರತೆಯೆಂಬ ಗರ್ವದಿಂದಾ ॥ ೧ ॥

॥ ಭಾಮಿನಿ ॥

ಬಣ್ಣಿಸಲು ನಾನರಿಯೆನದರನು । ಎಣ್ಣಿಸುತ ಸರಿಯಾದ ಶಿಕ್ಷೆಯ । ಪನ್ನಗೇಂದ್ರನ ಸತಿಗೆ ವಿರಚಿಸದುಳಿಯೆ ನಾ ಮುಂದೇ ॥ ಉನ್ನತದ ಸುರವಿಯಾಳಿನ । ರಣ್ಯ ಪೊಗುವೆನು ಮೊಗವ ತೋರದೆ । ನಿನ್ನ ಮನ ವಿದ್ದಂತೆ ಮಾಡೆಂದೆನಲು ಹರಿ ನುಡಿದಾ ॥ ೧ ॥

॥ ರಾಗ ಕಾಂಬೋಧಿ ಅಟತಾಳ ॥

ಮರುಗದಿರ್ಕೈ ಸುರರಾಯಾ । ಇದ । ಕೊರವೆ ನಾನಿನಗೊಂದು ಪಾಯಾ ॥ ತೆರಳಿ ನೀ ಸ್ವರ್ಗದಿ ಹರುಷದಿಂದಲಿ ದೇವ । ನೆರವಿಯೊಡ ಬಾಳಿರಲು ಮರುಕಪ । ಕಿರಿದು ದಿನದಲಿ ಪರಿಹರಿಸುವೆನು ॥ ಮರುಗ ದಿರ್ಕೈ ॥ ೧ ॥ ಬರುವೆ ನಿನ್ನಯ ನಾಕಪುರಕೇ । ನಾ । ನರಿತುಪಾಯವ ನಿನ್ನ ಮನಕೇ ॥ ಸರಸಿಜೋದ್ಭವನ ಕುವರಿಯಿಂದ ಬಂದಿಹ । ಕೊರತೆ ಯನು ನೀನಿರುವ ಸಭೆಯಲಿ । ಸರಸದಿಂ ಪರಿಹರಿಸಿಕೊಡುವೆನು ॥ ಮರುಗದಿರ್ಕೈ ॥ ೨ ॥ ಎಂದು ನಯದಿ ಸಂತವಿಸುತಾ । ಸಂ । ಕ್ರಂದನ ಕಳುಹಿಸಿ ಮತ್ತಾ ॥ ಇಂದಿರಾವರ ತನ್ನೊಳೆಂದ ಸುರರಿಗಜ । ನಂದನೆಯ ಸೊಗಸಿಂದ ಲವನತಿ । ಹೊಂದಿಸಿದ ತೆರವಿಂದು ವಿರಚಿಪೆ ॥ ಮರುಗ ದಿರ್ಕೈ ॥ ೩ ॥

॥ ಕಂದ ಪದ್ಯ ॥

ಇಂತೀ ಯತ್ನವನೆಣಿಸುತ । ದಂತೀಂದ್ರನ ಪುರಕೆ ನಾಗರಾಜನು ಬರುವ್ಪೋಲ್ ॥ ತಾಂ ತವಕದಿ ಪತ್ರ ಕಳುಹಿ । ನಂತರ ಯೋಚಿಪೆ ನೆನುತ್ತದಾರುಕಗೆಂದಂ ॥ ೧ ॥

॥ ರಾಗ ಅರಭಿ ಅಟತಾಳ ॥

ದಾರುಕ ನೀನಿತ್ತ ಬಾರಯ್ಯಾ । ನಾ ಪೇಳ್ವಮಾತವಿ । ಚಾರ ಮಾಂತು ಕೇಳಬೇಕಯ್ಯಾ ॥ ದಾರುಕ ನೀನಿತ್ತ ಬಾರಯ್ಯಾ ॥ ಪಲ್ಲ ॥ ಬೇಗದಿಂದಲಿ ನಾಗರಾಜನ । ಆ ಗೃಹಕೆ ಮುಂದಾಗಿ ತೆರಳುತ । ಯೋಗಕ್ಷೇಮವ ಶೀಘ್ರದಿಂ ತಿಳಿ । ದಾಗಲೊರೆನಾನೆಂದ ವಿಷಯವ ॥ ದಾರುಕ ನೀನಿತ್ತ ಬಾರಯ್ಯಾ ॥ ಅ. ಪ. ॥ ಇಂದ್ರನ ಸಭೆಗೆ ಬಾರದೇ ।

ಬಹುಕಾಲ ಸರಿದುದು । ಎಂದು ಪೇಳ್ವೆನೆಂದೆನುತಲವಗೇ ॥ ಹಿಂದುಳಿ
ಯುಪಂದವಲಿ ಬಗೆ ಬಗೆ । ಯಿಂದ ಬೋಧಿಸಿ ಮುಂದೆ ಸ್ವರ್ಗಕೆ ॥
ಚಂದದಿಂ ಬರುವಂತ ಮಾಡೆನು । ತಂದು ಲಿಖಿತವನಿತ್ತು ಕಳುಹಿದ ॥
ದಾರುಕ ನೀಸಿತ್ತ ಬಾರಯ್ಯಾ ॥ ೧ ॥

॥ ಕಂದ ಪದ್ಯ ॥

ಭಂಗಾರದ ನಿಳಯದಿ ಬಲು । ಸಿಂಗರದಿಂದಿರಲು ನಾಗಂಜನ
ಬಳಿಗಾ ॥ ಹಿಂಗದೆ ಬರಲಾತನ ಕಾಶ । ಲಂಗಳರಿತು ಬರವಿದೇನೆನಲ್ಕವ
ಗೆಂದಂ ॥ ೧ ॥

॥ ಆರ್ಯಾ ಸಪ್ತಾ ॥

ಕೇಳ್ ಕೇಳಹಿಪತಿ ಹೇಳುವ ವಚನವ । ಮೋಲೆನಿಸಿಹ ಸುರ
ರೋಲಗಕೇ ॥ ಪಾಳಯು ಸಹಿತಾ ವೇಳ್ಯಕೆ ಬಾರದೆ । ಕಾಲವ್ರ
ಬಹಳಾಯಿತ್ತಾ ದಿನಕೇ ॥ ೧ ॥ ಆದುದರಿಂದಲಿ ಮಾಧವನರುಹಿದ ।
ಖೇದವಿಡದೆ ಬರಬೇಕೆನುತಾ ॥ ನೀ ದಯವಿರಿಸುತ್ತೈದುವದೆನುತ ವಿ ।
ನೋದದಿ ಕೈಗಿತ್ತನು ಲಿಖಿತಾ ॥ ೨ ॥

॥ ಮತ್ತೇಭವಿಕ್ರೀಡಿತ ವೃತ್ತ ॥

ಹರಿಯಿತ್ತಾ ಲಿಖಿತಾರ್ಥ ವಾಚಿಸಿದನಾ ಭೂಲೋಕನೆ ಪತಿ
ಯಾಗಿಹಾ । ಉರಗೇಂದ್ರಂಗತಿ ಪ್ರೀತಿಯಿಂ ಕೊಡುವೆ ನಾಂ ಸ್ವೀಕರಿಸು
ನಮಸ್ಕಾರವಾ ॥ ಸರಸೀಜಾಸನ ಸೂನು ಲಗ್ನದನಕಂ ನೀನಮರ
ಸಭೆಗೈಯ್ದದೇ । ಇರುತೀರ್ದಾ ಬಗೆಯಿಂದಲಿನ್ನು ನುಡಿಗೈತಪ್ಪೆನೆನುತಾಂ
ನಂಬಿಹೆಂ ॥ ೧ ॥

॥ ಭಾಮಿನಿ ॥

ಎಂಬ ಲಿಖಿತಾರ್ಥಗಳನೋದುತ । ತುಂಬಿದಾನಂದದಲಿ ಪೇಳಿದ ।
ಜಂಭವೈರಿಯ ಸಭೆಗೆ ಬಹೆ ನಾನೆಂದು ದಾರುಕನಾ ॥ ಸಂಭ್ರಮದಿ
ಮನ್ನಿಸುತ ಕಳುಹುತ । ತುಂಬಿಗುರುಳೆ ಸ್ವಯಂಪ್ರಭೆಗೆ ಮೊದ ।
ಲಿಂ ಬೆಸಸಿ ನಾ ಪೋಪೆನುತಾಕೆಯನು ಕರದೆಂದಾ ॥ ೧ ॥

॥ ರಾಗ ಬೇಹಾಗ್ ರೂಪಕತಾಳ ॥

ಮಂದಗಾಮಿನೀ ಚಂದಿರಾನನೇ । ಒಂದು ಮಾತನೂ ಕೇಳೆ ಮೋಹನೇ ॥ ಇಂದಿರೇಶನಾ ಸೂತ ಲಿಖಿತವಾ । ತಂದು ಕೊಟ್ಟನೂ ತಿಳಿದೆನರ್ಥವಾ ॥ ೧ ॥ ನಿನ್ನ ವರಿಸಿದಾ ಮೇಲೆ ಸ್ವರ್ಗಕೇ । ಮುನ್ನ ತೆರಳದೇ ನಿಂದ ಕಾರ್ಯಕೇ ॥ ಎನ್ನ ನಿಂದಿಗೇ ಬರಲು ಪೇಳಿಹಾ । ಸ್ವರ್ಣಮಂದಿರಾವುಳಿದು ಪೋಪೆನಾ ॥ ೨ ॥ ಖೇದಗೊಳದಿರೂ ನಾಗ ಕನ್ನಿಕಾ । ಯಾದವೇಂದ್ರನಾ ಕಾಣಲೋಸುಗಾ ॥ ಮಾಧವನೆನ್ನ ಹಾದಿನೋಳ್ಪನೂ । ಆದಿತೇಯರಾ ಪುರಕೆ ಪೋಪೆನೂ ॥ ೩ ॥

॥ ರಾಗ ಶಹನ ತ್ರಿಪುಟತಾಳ ॥

ಮಾತೊಂದಾಲಿಪುದು ಪ್ರಿಯಾ । ಕೋಮಲಕಾಯಾ । ಮಾತೊಂದಾಲಿಪುದು ಪ್ರಿಯಾ ॥ ಮಾತನೊಂದಾಲಿಪುದು ನೀ ಶ್ರೀ। ನಾಥ ಪೇಳಿಹೆ ಮಾತಿನಿಂಪೋ । ಪಾತುರದಿ ಪುರು । ಹೂತ ಸಭೆಗಾ । ಪ್ರೀತಿಯಿಂ ಬಹೆ ಖಾತಿಗೊಳದಿರು ॥ ೧ ॥ ಕುಂದಕುಟ್ಮಲರದನೇ । ಕೇಳಲೆ ಸುಗುಣೇ । ನೊಂದುಕೊಳದಿರ್ಮೋಹನೇ ॥ ಮಂದಗಮನೆ ಯಮರಿಂದ್ರ ಸಭೆಗೈ । ತಂದರದು ಸೊಗಸೆಂದೆನಿಸದೈ । ಮಂದಿರದೊಳಿರು ಸುಂದರಾಂಗಿಯೆ । ಬಂದಪೆನು ಇನ್ನೊಂದು ದಿನದಲಿ ॥ ೨ ॥ ಮಮತೆಯ ತೊರೆದೆನ್ನನೂ । ಪೋಪೆಯ ಬಿಡೆ । ರಮಣನೆ ನಾ ನಿನ್ನನೂ ॥ ಕುಮತಿಗಳು ನೆರೆದಮಿತ ರಾಜ್ಯದೊ । ಳಮಿತ ನಿಗಮಾಗಮವರಿತ ನೀ । ರಮಣಿಯಳ ಬಿಟ್ಟಮರ ಲೋಕಕೆ । ಗಮಿಸಿಪುದು ಸತ್ಕ್ರಮವೆ ನಿನ್ನದು ॥ ೩ ॥

॥ ವಾರ್ಧಿಕ್ಯ ॥

ಬೆದರದಿರು ವಿಟರಿಂಗೆ ಕೇಳ್ಮಮ ಪ್ರಭಾವವಂ । ಕದವ ಬಂಧಿಸಿ ನೆಲಸು ನಾಂಬರುವ ಕಾಲದಲಿ । ಇದಿರು ಕಟ್ಟಿದ ಭೇರಿ ನಾದವಪ್ಪುದು ದನದ ಕರು ತಾನೆ ಧ್ವನಿಗೈಯ್ವುದೂ ॥ ಮುದದಿ ನೀ ಬಂಧಿಸಿಹ ಕದವು ತಾನೇ ತೆರೆವ । ಮೊದಲುರಿವುದಾ ಸೊಡರು ಭಯುವ ಬಿಡು ಜಡಜಾಕ್ಷಿ । ಪದುಮ ರಾಯನು ಸಹಿತಲಿರುವನೊತ್ತಿನಲಿ ಚಿಂತಿಸ ಬೇಡ ನೀನೆನ್ನುತಾ ॥ ೧ ॥

|| ಭಾಮಿನಿ ||

ಅರುಹಿ ನಾನಾ ವಿಧದ ಧೈರ್ಯವ | ಕರೆದು ತನ್ನ ಸಿಗರುಹಿ ಸೀತೆಯು | ನರಸಿಗಿರಿಸಿದ ಕಾವಲಿನ ಗಣವೀರ್ಸರನ ಘಂಟೆ || ಪ್ರರ ಹರೆಸು ಸಲಹುವನು ನೀ ಗಳಿ | ಸಿರಿಯ ಧರ್ಮವನೆಂದು ಪೊರಟ | ಸುರ ಸಭೆಗೆ ನಡೆತಂದು ಸಂತಸಪಡುತಾಳ್ವಿದಾರ್ || ೧ ||

|| ಕಂದಪದ್ಯ ||

ಸುರ ಗಂಧರ್ವರು ಕಿನ್ನರ | ಗರುಡೋರಗ ಸಿದ್ಧಸಾಧ್ಯ ಹರಿಸ ಹಿತರಲಾ || ಸುರಪತಿಯೋಲಗವೀಯುತ | ನೆರವಿಹ ಸಭಿಕರೊಡನೆಂದ ಸಂತಸದಿಂದಂ || ೧ ||

|| ರಾಗ ಮಧ್ಯಮಾವತಿ ತ್ರಿಪುಟತಾಳ ||

ಕೇಳಿರೈ ಸುರಗರುಡ ಸಾಧ್ಯರು | ಪೇಳಿರೀ ಸಭೆಯೊಡೆತನವ ಶುಭ | ವೇಳೆಯಲಿ ಕೊಡಲ್ಯಾರಿಗೆಂಬುವ | ಮೇಲೆನಿಸ ನೀವೆಲ್ಲರೂ || ತಿಳುಹಿರೆಂದು || ೧ || ನುಡಿದರಾ ತನ್ಮೋಳವ ಸಭಿಕರು | ಪೊಡವಿ ಮೂರರೊಳಧಿಕ ಶ್ರೀಹರಿ | ಗೊಡೆತನವ ಶುಭ ಸಮಯದಲಿ ನಾವ್ | ಕೊಡುವದೆನೆ ದೇವೇಂದ್ರನೂ || ಹರುಷದಿಂದಾ || ೨ || ಚರಣ ಪೂಜೆಯಗೈದು ವಂದಿಸಿ | ಸುರುಚಿರಾಸನವಿತ್ತು ಮನ್ನಿಸೆ | ಹರಿಯು ಕಪಟದ ನೆನದು ಶಕ್ರನ | ಕರವಪಿಡಿದೆಂದನು ಸಕಲರೂ || ಕೇಳು ವಂತೇ || ೩ || ಇಂದಿನಗ್ರಸ್ಥಾನವೊಲ್ಲೆನು | ಎಂದವನು ನಾನಲ್ಲ ವಾದರು | ಬಂದೆ ನಿನ್ನಯ ಮಾತಿಗೋಸುಗ | ಹಿಂದುಳಿಹ ಮಮ ಕಾರ್ಯವ | ಅರೆ ಗಳಿಗೆಗೇ || ೪ || ಅಣುಗನೋರ್ವಗೆ ನಮ್ಮ ಕುಲ ದಲಿ | ಘನ ತರದ ಬ್ರಹ್ಮೋಪದೇಶವ | ಮನವಿರಿಸಿ ಕರುಣಿಪರು ಬರಲಿಂ | ದೆನಗೆ ಪೇಳಿಹ ಕಾರಣಾ || ಪೋಪೆನೀಗಾ || ೫ || ಮರಳಿ ನಾ ಬರುವನಕವೀ ವಿ | ಷ್ಟರದಧಿಪತನ ನಾಗರಾಜಗೆ | ಕರುಣಿಪೆನು ಹಿತವಹುದೆ ನಿಮಗಂ | ದರುಹಿರೆನೆ ಸುರಸಾಧ್ಯರೂ || ಪೇಳ್ದ ರಾಗ || ೬ ||

|| ಕಂದ ಪದ್ಯ ||

ಬಲ್ಲವ ನೀ ನಿಗಮಾಗಮ | ನೊಲ್ಲಿಗೆ ನಾವೊಲ್ಲೆನೆಂಬರಲ್ಲವು

ತವ ಮನ ॥ ದಲ್ಲೀರ್ವದಂಡದಿ ನಡಸಿನೆ । ಫುಲ್ಲದಳಾಕ್ಷನುರಗೇಂದ್ರನಿ ಗೆಂದನಾಗಂ ॥ ೧ ॥

॥ ರಾಗ ಸುರುಟ ಏಕತಾಳ ॥

ಕೇಳಹಿಕುಲದೊಡೆಯಾ । ನಿನ್ನಲಿ । ಪೇಳುವೆ ಪೊಸ ಬಗೆಯಾ ॥ ಮೇಲಾಗಿಹ ಘನದೋಲಗದೊಡೆತನ । ಪಾಲಿಪೆ ನಿನಗೀ ವೇಳೆಯೊ ಳಿಂದಿಗೆ ॥ ೧ ॥ ಬರ ಪೇಳಿಹರೆನಗೇ । ಯದುಕುಲ । ತರಳಸಿಗೋರು ವಗೇ ॥ ಕರುಣಿಸುವರು ಬ್ರಹ್ಮೋಪದೇಶವನು । ತ್ವರಿಯಾದಿ ತೆರಳದೆ ಯತುನವ ಕಾಣೆನು ॥ ೨ ॥ ಮನೆಗೆ ತೆರಳುವನಕಾ । ಸಮಯವು । ಎನಗಿಲ್ಲದ ಬಳಿಕಾ ॥ ಸನುಮತದಿಂ ತವ ತನುವಿನೊಳಿರುವ ವ । ಸನ ಗಳನಿತ್ತೆನ್ನನು ನೀ ಕಳುಹೈ ॥ ೩ ॥

॥ ಭಾಮಿನಿ ॥

ಧರಿಸುತಲಿ ಸೀನೆನ್ನ ವಸನವ । ಮೆರದಿರುವ ದೀ ಜಾಗದೊಳ ಗೆಂ । ದೊರದು ತ್ವರಿಯದೊಳುಭಯುರಾ ವಸನಾದಿಗಳ ತ್ಯಜಿಸೀ ॥ ಭರದಿ ಬದಲೆಸಗುತ್ತ ಚಕ್ರವ । ಉರಗರಾಜಂಗಿತ್ತು ಮತ್ತಾ । 'ಜೆಲಿ ನುಂಗುರವಾತನಿಂ ಕೈಗೊಂಡು ಮುರಮಥನಾ ॥ ೧ ॥

॥ ರಾಗ ಸಾಂಗತ್ಯ ರೂಪಕತಾಳ ॥

ಪೊರಡುವ ಕಾಲದಿ ಸುರಪನ ಕರದೆಂದ । ಅರೆಗಳಿಗೆಯೊಳು ನಾ ಬಹೆನೊ ॥ ಮರೆಯದೆ ಸಭೆಯ ತೀರಿಸದಿರಿ ಬಾರದೆ । ಚ್ಚರಿಕೆ ನೋ ಡೆಂದು ಬೀಳ್ಕೊಟ್ಟಾ ॥ ೧ ॥ ವಾಸವಗೊದಗಿದ ಕ್ಲೇಶವಸೀಕಾಲ । ಘಾಸಿಗೈಯ್ಯುವೆನೆಂದು ನೆನೆದೂ ॥ ಆ ಸುವರ್ಣಾರೂಢ ಬರೆ ರತ್ನಮನೆ ಗಾಗಿ । ಆ ಸುದತಿಯು ಕೆಡಿಸಲ್ಕೆ ॥ ೨ ॥

॥ ಕಂದಪದ್ಯ ॥

ಬಾಗಿಲ ಬಳಿಗೈತರಲಾ । ನಾಗೇಂದ್ರ ಕಾವಲಿಗಿಟ್ಟ ಗಣಂಗಳೀ ರ್ವರ್ ॥ ರೇಗುತ ತಡದಾ ಹರಿಯಂ । ಹೋಗೆಂದು ಗಜರಿ ವಿಚಾರವ ಗೈದರಾಗಂ ॥ ೧ ॥

॥ ರಾಗ ನಾದನಾಮಕ್ರಿಯೆ ಅಟತಾಳ ॥

ಆರೆಲೊ ಕಪ್ಪ ಪ್ಯೆಯ್ಯುವ ನೀನು । ವೀರ । ಚೋರನಂದದಿ ತೋರುತಿಹುದೇನೂ ॥ ಕಾರಿಯ ವೀರ್ಪುದ ನಮ್ಮಲೀ । ಆ ವಿ । ಚಾರ ಪರುಹಿ ಪೋಗು ಜವದಲೀ ॥ ೧ ॥ ತರುಣಿಯರಿಸದಿರ್ಪ ಠಾವಿಗೇ । ಪುರು । ಷರು ಬರುವುದು ಲೇಸಲ್ಲವು ಮಿಗೇ ॥ ಅರುಹಲೆಮ್ಮೊಳು ಬಂದ ಕಾರ್ಯವಾ । ಪರಿ । ಹರ ಗೈವೆ ನೋಡದ ಮಾನವಾ ॥ ೨ ॥ ಕದವ ನೀನ್ನಿಟ್ಟರೆ ಲೇಸೆಲ್ಲಾ । ಬಲು । ಮದದಿ ಜರೆದರೆನ್ನ ಫಲವಿಲ್ಲಾ ॥ ಸದನದೊಳಹ ನಾರಿಯೊಡನಿಂದು । ಕೆಲ । ಸಧಿಕವೀರ್ಪುದರಿಂ ಬಂದಿಹೆನಿಂದೂ ॥ ೩ ॥ ನಿನ್ನಾಜ್ಞೆಯಾಂತು ನಿಂದವರಲ್ಲಾ । ಬಾಗಿ । ಲನ್ನು ಬಿಡೆವು ನಾರೆಲೊ ಖುಲ್ಲಾ ॥ ಕನ್ಯೆಯರೊಳು ಚೋರ ನಿನಗಿಂದೂ । ಕಾರ್ಯ । ವಿನ್ನೇನು ಬಗುಳದೆ ಪೋಗಿಂದೂ ॥ ೪ ॥ ಎಮ್ಮೊಡೆಯನ ವಸನಂಗಳಾ । ಧರಿ । ಸ್ನೆಮ್ಮೊಳು ಗಳಹದಿರ್ಪೆ ಖೂಳಾ ॥ ಹೆಮ್ಮೆಯಿಂ ಬಂದಿಹೆಯ್ಯೆ ನೀನೂ । ಅದ । ನೊಮ್ಮೆ ನಿಲಿಸಿ ನಾಶ ಗೈವೆನೂ ॥ ೫ ॥ ಓರ್ವನಂದದಲಿ ಮತ್ತೋರ್ವರೂ । ವಸ್ತ್ರ । ಧಾರಣೆಯಲಿ ತೊಟ್ಟು ಕೊಂಬರೂ । ಪಾರುಪತ್ಯವ ನಿಲಿಸುವೆ ನೆಂದೂ । ಚಕ್ರ । ಧಾರಿಯು ತುಡುಕಲವರನಂದೂ ॥ ೬ ॥

॥ ವಾರ್ಧಿಕ್ಯ ॥

ಬಲುಕಾಲ ವೀರ್ವರಲಿ ಹೊಯ್ದಾಡೆ ಮುರಮಥನ । ಗೆಲವು ಕಾಣದೆ ಪಲಾಯನ ಗೈದು ಸಿಗದಿರಲು । ಬಳಿಕ ತಮ್ಮೊಳು ಗಣಗಳವಿ ಗೈದಳಿಯೆ ಸೀ ತಿಂದುದೆಂದೆನುತ ಭರದೀ ॥ ಜಲಜ ನಾಭನು ಮನದಿ ನೆನದನಿದುವೇ ಸಮಯ । ನಳನಾಕ್ಷಿ ನಾಗಕನ್ನಿಕೆಯು ಪರಿಕಿಸಲೆಂದು । ನಲವಿನಿಂಹೊರ ಬಾಗಿಲಲಿ ನಿಂದು ಕರದವಳ ಮಾತಾಡಿಸಿದ ವಿನಯದೀ ॥ ೧ ॥

॥ ರಾಗ ಜಂಜೂಟಿ ಏಕತಾಳ ॥

ಚಂದಿರಮುಖಿ ವಿಧಿನಂದನೆ ಬಾ ಬಾ । ರಿಂದು ಕದವ ತೆರೆ ಸುಂದರೀ । ಕುಂದರದನೆ ನೋಡ್ ಬಂದ ನಿನ್ನ ಸತಿ । ಯಂದವ

ಕಂಬುಕಂಧರೀ ॥ ಇಂದ್ರ ಸಭೆಯು ಮುಗಿಸಿಂದು ಬಂದೆ ನಿ । ನ್ನಂಪವ
ಮರೆಯದೆ ಮೋಹಿಸೇ । ಇಂದಿಗೆ ಮಮ ಪದದ್ವಂದ್ವ ಸೇವೆಯಲಿ ।
ಹಿಂಮುಳಿದೆಯ ವಾರಣಯಾನೇ ॥ ೧ ॥ ದ್ವಾರದ ಬಳಿ ನಿಂದಿರ್ಪರು
ಕರವ ಹಂ । ಕಾರಿ ಜಾರರಂದದಿ ನಿಂದೂ । ನಾರಿಯರೀಪರ್ಗಾರದಿ
ಪೇಳ್ವೆಯ । ನೀರನೆಂಬ ಮಾತುಗಳ್ನಿಂದೂ ॥ ಸಾರೆಲೊ ನಿನ್ನ ಪಚಾರದ
ನುಡಿ ಮನ । ವಾರೆ ಗ್ರಹಿಸಿ ಮೋಹಿಪಳಲ್ಲಾ । ಜಾರೆಯಲ್ಲ ನಾ
ಧಾರಿಣಿಯಲಿ ಸ್ತ್ರೀ । ವಾರದೊಳಧಿಕಳು ಪುಸಿಯಲ್ಲಾ ॥ ೨ ॥ ಆರೆಕ್ಷಣ
ದಲಿ ನಿನ್ನೆರೆಯನ ಗುರುತವು । ಮರವೆಯಾಯ್ತು ಸುಮಗಂಧಿಸೀ ।
ಪರಿ ಪರಿ ದಣಿದೈದಿರುವನು ವರ ನಿಂ । ದಿರುವನು ನೋಡೆಲೆ ಭಾಮಿ
ನೀ ॥ ತೆರಳೀರ್ದರು ಸುರ ಸಭೆಯಲಿ ನಿನ್ನನು । ಮರೆಯದೆ ಹಂಬಲ
ವಿರಿಸುತಾ । ಇರುತಿರೆ ನಾನತಿ ತ್ವರಿಯದಿ ಬಂದಿಹೆ । ಕರಕೊಳ್ಳೆಲೆ ಕರ
ವೀಯುತಾ ॥ ೩ ॥ ಯಾತಕೊ ನಿನಗೀ ರೀತಿಯ ನುಡಿಗಳು । ಯಾತನೆ
ಗೊಳ್ಳುವೆ ನರಕದೀ । ಪ್ರೀತ ಬರಲು ಕದವೇ ತಾ ತೆರೆವುದು । ಜ್ಯೋತಿ
ಯುಹುದು ಬರೆ ದೀಪದೀ ॥ ಧಾತ್ರಿಗರಿವ ತೆರದಿಂ ತೂಗಾಡಿಸಿ ।
ದೀತೆರ ಭೇರಿಯು ಧ್ವನಿಯುಹುದೂ । ಆ ತರುವಿನ ಕರು ತಾನಳುತಿದೆ
ಮು । ತ್ತೀತೆರ ಕುರುಹುಗಳೊಪ್ಪಿಹುದೂ ॥ ೪ ॥

॥ ರಾಗ ಆರಭಿ ಅಟತಾಳ ॥

ಯಾತಕಿಂಥಾ ಮಾತನುಡಿವೆ ನೂತನಾಂಗಿ ನೀನೂ । ಪ್ರೀತನ
ಸಂಪ್ರೀತಿ ತೊರದು ಖಾತಿಗೊಂಬುದೇನು ॥ ಧಾತ್ರಿಯೊಳೀ ರೀತಿ
ಕುರುಹು ನಾ ತಿಳಿದುದಿಲ್ಲಾ । ನೀತಿಯುತೆ ನಾ ಮಾತನೊರದೆ ಭೀತಿಗೆ
ನಿನಗೆಲ್ಲಾ ॥ ೧ ॥ ಸಾರೊ ಚೋರ ಜಾರ ಮಾತ ವಿಕಾರಿ ನುಡಿಯು
ಬೇಡಾ । ಧಾರಿಣಿಯು ವಾರತೆಗಳ ನೀಂಪೇಳ್ದ ನೋಡಾ ॥ ಕ್ರೂರ ನಿನ್ನ
ಭಾರಿ ನುಡಿಗೆ ಸೇರುವಳಾನಲ್ಲಾ । ನಾರಿಯರಿಂ ಮಾನಕಳದು ಸಾರ
ಬೇಡ ಮಲ್ಲಾ ॥ ೨ ॥ ಪುಸಿಯ ಮಾತ ನುಸುರಲಾರೆ ಬಿಸಜಗಂಧಿ
ಕೇಳೀ । ವಿಷಯುವ ಯೋಚಿಸುತಲೆನ್ನ ವಸನಾಭರಣ ನೋಡೇ ॥
ಕುಶಲಗಾತ್ರ್ಯೆನ್ನಸುವ್ರಳಿಯದು ಶಶಿಯು ಪೋಲ್ವವದನಾ । ವ್ಯಸನ
ಬಿಟ್ಟು ತೋರೆ ನಾ ಪರಿಕಿಸಿ ಹರುಷಿಪೆ ಮುನ್ನಾ ॥ ೩ ॥

॥ ಕಂದ ಪದ್ಯ ॥

ಕುರುಹುಗಳಿಲ್ಲವು ಸರಿ ನುಮು । ವರನೆಂಬಾ ನುಡಿಯು ಮಾತ್ರವಲ್ಲವಿದೆನಲಾ ॥ ಸಿರಿಯುರಸಂ ಖತಿ ತಾಳುತ । ಲೊರದಂ ಪತಿ ನಾಗಕನ್ನಿಕೆಯು ಬಿದರುವಪ್ರೋಲ್ ॥ ೧ ॥

॥ ರಾಗ ಭೈರವಿ ಏಕತಾಳ ॥

ಅರಿಯೆಯು ನೀನೆನ್ನವನಾ । ಬಲು । ಗರುವವ ನುಡಿವೆಯು ಬಿಡೆನೂ ॥ ಪೊರೆವವರಾರ್ಕೈತರಲೀ । ಮನ । ದಿರ ಸಲಿಸುವೆ ನಿಂದಿಸಲೀ ॥ ೧ ॥ ಪತಿವ್ರತೆಯೆಂಬುವ ಪದವೂ । ನಾ । ಹತಗೈಯುವೆ ನೋಡ್ ಫಲವೂ ॥ ಪತಿ ಬದಲಿರೆ ಕರಸೆನುತಾ । ಶ್ರೀ । ಪತಿ ಬಲುತರ ಗರ್ಜಿಸುತಾ ॥ ೨ ॥ ತುಳಿದನು ಬಾಗಿಲ ಭರದೀ । ಆ । ಲಲನೆಯು ಕಾಣುತ ಭಯದೀ ॥ ಕಳವಳಿಸುತ ಪೊರಳುತ್ತಾ । ತಾ । ನಳಲುತೆಂದಳಿಂತೆನುತಾ ॥ ೩ ॥

॥ ರಾಗ ಶಹನ ತ್ರಿಪುಟತಾಳ ॥

ಯಾರಿಗೆ ಪೇಳಲಿನ್ನೂ । ದುರ್ಜನನೋರ್ವ । ವೀರ ಬಾಧಿಸುತಿಹನೂ ॥ ನೀರನಿಲ್ಲದ ಕಾಲ ಸಾರಿ ಬಾಗಿಲ ಮುರಿದು । ವಿಾರಿ ಬೆನ್ನಟ್ಟುವನೂ ॥ ರಕ್ಷಿಸಿರಿನ್ನು ॥ ೧ ॥ ಉರಗೇಂದ್ರನರಸಿಯಾಗೀ । ರತ್ನದ ಮನೆಯೊ । ಳಿರುತಿರ್ದೆ ನಾ ಲೇಸಾಗೀ ॥ ಸರಸಿಜಾಸನನ ಕುವರಿಯು ಪಡುವ ಭಂಗ । ಪರಿಕಿಸಿ ಸಲಹಿರೆನ್ನಾ ॥ ಬಳಲಿಹೆ ಮುನ್ನಾ ॥ ೨ ॥ ಪತಿಯೇ ನೀ ಯನ್ನ ಬಿಟ್ಟು । ಪೋದೆಯು ನಿನ್ನ । ಜತೆಗೈವೆನೆಂದರಿಂತೂ ॥ ಗತಿ ಕಾಣದಾದೆ ನಾನತಿಕಷ್ಟದಿಂದಿಹೆ । ಹಿತದಿ ಪಾಲಿಸೊ ಶಂಕರಾ । ಶುಭಕರಾ ॥ ೩ ॥

॥ ಕಂದ ಪದ್ಯ ॥

ಇನ್ನಿರಲೆನ್ನನು ದುರ್ಮತಿ । ಬನ್ನಬಡಿಪನೆಂದೆನುತ್ತ ನೊರಜಾಕಾರದಿ ॥ ಪನ್ನಂಗ ವೇಣಿ ಸುಳಿಯುಲ್ । ಚಿನ್ಮಯನಿವ ಕಾಣುತಾಗ ಖತಿ ತಳದೆಂದಂ ॥ ೧ ॥

॥ ರಾಗ ಭೈರವಿ ಅಟತಾಳ ॥

ಎನ್ನನು ವಂಚಿಸಲೂ । ಈ ಸತಿ ಮಾಯ । ವನ್ನು ಪ್ರಯೋಗಿಸಲೂ । ಎನ್ನೊಳು ನಡೆಯುದಿದೆನ್ನುತ ಹಲ್ಲಿ ರೂ । ಪನಾಂತು ಬೆನ್ನಟ್ಟಿದಾ ॥ ೧ ॥

॥ ರಾಗ ನೀಲಾಂಬರಿ ಏಕತಾಳ ॥

ಆಕಟಿಕಟಿನ್ನನೀತಾ । ಬಾಧಿಪನಲ್ಲೋ । ಸುಖದಾಶೆ ಬಹಳ ವ್ಯರ್ಥ ॥ ಮುಖವ ತೋರಿಸದಂದದೀ । ಇಲಿರೂಪದಿ ಮಾ । ಯಕದಿ ಸಾರಿದಳ್ ಜವದೀ ॥ ೧ ॥

॥ ರಾಗ ಭೈರವಿ ಅಟತಾಳ ॥

ಧರೆಯೊಳೆಲ್ಲಡಗಿದರೂ । ನಾ ಬಿಡೆ ನಿನ್ನ । ಪೊರೆವವರಾರಿಹರೂ ॥ ಬರಲಿ ನೋಡುವೆನೆಂದು ತ್ವರಿಯದಿ ಬೆಕ್ಕಾಗಿ । ಭರದೊಳಟ್ಟಿದ ನಾಕೆಯಾ ॥ ೧ ॥

॥ ರಾಗ ತೋಡಿ ರೂಪಕತಾಳ ॥

ಹರ ಹರ ಮೃತ್ಯುಂಜಯ ಶುಭ । ಕರ ದಾರಿಯ ಕಾಣೆನು ನಾ । ತರತರ ರೂಪವನಾಂತರು ದುರುಳನು ಪೀಡಿಪನೂ ॥ ಪೊರೆವವರಾರಿಲ್ಲವು ಯಾಗೋರೆಯಲಿ ಮಮ ಪ್ರಾರಬ್ಧವ । ತರುಣಿಯು ಜನುಮದಿ ಜನಿಸುತ । ಬರಿದಾಯಿತೆ ಬಾಳ್ವೇ ॥ ೧ ॥ ಎಂತಾದರು ಯಿಾ ದುರ್ಗತಿ । ಯಿಂ ತಪ್ಪಿಸಿ ಮಮ ಮಾನವ । ಸಂತಸದಿಂ ರಕ್ಷಿಪೆನೆಂದಂತರ್ಯದಿ ನೆನೆದೂ ॥ ದಂತಿಗಮನೆ ಮುಂದ್ವರಿಯುತ । ನಿಂತಿಹ ಪಶುವಂ ಕಾಣುತ । ಚಿಂತಿಸುತಲಿ ಪದಕೆರಗುತ್ತಿಂತೆಂದಳು ಭಯದೀ ॥ ೨ ॥

॥ ರಾಗ ಆರಭಿ ಆದಿತಾಳ ॥

ಜಯ ಜಯ ಗೋಮಾತೇ । ಸುಜನರ । ಭಯವರ್ಜಿತೆ ಧಾತೇ ॥ ಜಯ ಜಯ ॥ ಪಲ್ಲ ॥ ತನುವನು ದಣಿಸುತ ಮನದಿ ಕೋಪಿಸುತ । ಜನರಿಗಾಗಿ ಕಾಯುವ ಪೊರೆಯುತ್ತಾ ॥ ಸ್ತನ ಕ್ಷೀರವ ದಿನ ದಿನ ಮೀ

ಯುತ ಶುಭ । ವಸು ಪಾಲಿಪ ಘನ । ಮನ ಕರುಣಾನ್ವಿತೆ ॥ ಜಯ ಜಯ ॥ ೧ ॥ ಧರೆಯೊಳು ಬಾಳಲ್ಕಿರುವ ಋಣವು ಪರಿ । ಹಲ ವಹುದಿಂದಿನ ಶುಭಚರಿತೇ ॥ ನಿರತ ಸುಮಂಗಲೆ ಪೊರೆ ನೀನೆನೆ ದಯ । ವಿರಿಸಿ ಪೇಳ್ದಳತಿ ಮುದವನು ತಾಳುತ ॥ ಜಯ ಜಯ ॥ ೨ ॥

॥ ವಾರ್ಧಿಕ್ಯ ॥

ಯಾರು ನಿನಗೇನ ಮಾಡಿದರು ಪೇಳೆನ್ನೊಳದ । ಸಾರಸೋದ್ಭವ ನಣುಗೆ ಬೆದರ ಬೇಡೆಂದೆನಲು । ನಾರಿ ಭಯದಿಂದೊರೆದಳಾ ಕ್ರೂರ ವಿಟನೋರ್ವ ನಾನಾ ತೆರದಿ ನುಡಿಸುತಾ ॥ ಸೇರದಿರಲೆನ್ನ ಮನೆಯಂ ಪ್ರೇಕ್ಷ್ಯ ಬೆಂಬಿಡದೆ । ಮಾರಿ ಬೆನ್ನಟ್ಟುತಿರೆ ತರತರದ ಮಾಯದಲಿ । ದಾರಿಕಾಣದೆ ನಿನ್ನ ಮನೆಯ ಹೊಕ್ಕಿಹೆ ಮಾನ ಸಲಹೆನಲು ನುಡಿದ ಳಾಗಾ ॥ ೧ ॥

॥ ರಾಗ ಬೇಹಾಗ್ ರೂಪಕತಾಳ ॥

ನೊಂದುಕೊಳ್ಳಬೇಡ ಮನದಿ ಮಂದಗಾಮಿನೀ । ಬಂದು ಭ ಯದಿ ಮರೆಯ ಸೇರ್ದರಿಂದ ಕಾಮಿನೀ ॥ ಇಂದು ವಿಟಗೆ ತೋರದೆನ್ನ ಸುಂದರಾಂಗದೀ । ನಿಂದಿರು ನೀನೆಂದು ನುಡಿದಳ್ಮಂದಹಾಸದೀ ॥ ೧ ॥ ವನಜನೇತ್ರೆ ಮನದಿ ಹಿಗ್ಗಿ ದನವ ಕಾಯುವಾ ॥ ಕ್ಷಣದಿ ಹುದುಗಿ ಕುಳಿತ ಳಾಗಲುಣ್ಣರೂಪವಾ ॥ ದನುಜ ವೈರಿ ಕಂಡು ವಿಧಿಯ ನಣುಗೆ ಚರಿ ತೆಯಾ । ಮನದಿ ಕೆದರಿ ನುಡಿದ ಸತಿಯ ಕೆಡಿಪ ಕಾರ್ಯವಾ ॥ ೨ ॥

॥ ರಾಗ ಸೌರಾಷ್ಟ್ರ ತ್ರಿಪುಟತಾಳ ॥

ದನವ ಕೆಚ್ಚಲೊಳಡಗಿ ಕುಳಿತೆಯ । ವನಜನಾಭನು ಬಿಡುವನೇ ನೋ । ಡೆನುತ ಬಳಿಗೈತರಲು ಕಾಣುತ । ತ್ರಿಣಯ ಸಖನಾ ॥ ೧ ॥ ಭರದೊಳಗ್ನಿಯ ತೆರದಿ ಜ್ವಲಿಸುತ । ಉರಿಗೆದರಿ ಹಾಯುತ್ತ ತುಳಿ ಯುತ । ಹರಿಯ ಬಳಿಗೈತರಗೊಡದೆ ಮುಂ । ದ್ವರಿದಳಾಗಾ ॥ ೨ ॥ ತೀರದೀ ಬಗೆಯಿಂದ ಕೆಡಿಸಲು । ಬೇರೆ ಪಾಯುವ ಕಾಂಬೆನೆನುತಲಿ । ಮಾರರಮಣ ಯೋಚಿಸುತ ಬೇಸರ । ದೋರಿ ಬಳಿಕಾ ॥ ೩ ॥ ನುಡಿದಳಾ ಗೋಮಾತೆ ಸತಿಯಳಿ । ಗೊಡನೆ ಕರವುತ ತಳ್ಕಿಸುತ । ಮುಂ । ದಡಸಿ

ಕಷ್ಟಗಳೆನ್ನ ನುತಿಸಲು । ಒಡನೆ ಬಂದೂ ॥ ೪ ॥ ಪರಿಹರಿಪೆ ನಲ್ಲದಿರ ಲೆನ್ನಯ । ತರಳನಾರೂಢನನ ನುತಿಸಲು । ಪೊರೆವನೆಂದರುಹುತ್ತ ಕಳುಹಿದ । ಳಿರದೆ ಮುದದೀ ॥ ೫ ॥

॥ ರಾಗ ಕೇದಾರಗೌಳ ಅಟತಾಳ ॥

ಮನದೊಳೊಂದೊಂದ ತಾನೆಣಿಸುತಲಿತ್ತಲು । ಮನುಮಥ ಪಿತ ಬರಲೂ ॥ ಘನ ವೀರ ರಜಕ ನೋರ್ವನು ಬರುತಿರಲಾತ । ನನು ತಡ ವ್ರತ್ತಿಂದನೂ ॥ ೧ ॥ ಯಾಕಿಲಾ ರಜಕ ನೀ ಸಾರುವದೆಲ್ಲಿಗೆ । ವೀರ ನಂತಿಪೆ ಕಾಣಲೂ ॥ ಕಾರಿಯವೊಂದ ನೀ ಪೂರೈಸಿಕೊಡುವೆಯ । ಭೋರನೆ ಪೇಳೆಂದನು ॥ ೨ ॥ ಭುಜಗಕನ್ನಿಕೆಯಳ ರಜಕನಾಗಿರುವೆ ನಾ । ನಿಜವಾಗಿ ದಿನನಿತ್ಯವೂ ॥ ಅಜನಂದನೆಗೆ ವಸ್ತ್ರ ಮಡಿ ಮಾಡಿ ಕೊಡುವೆನು । ಗಜರಿ ನೀ ನುಡಿವುದೇನೂ ॥ ೩ ॥ ತಿಳಿಯದೆ ನುಡಿದೆ ನೀ ನಿಳೆಯೊಳಧಿಕನಯ್ಯಾ । ನಳಿನಾಕ್ಷಿಗಾ ವಸನಾ ॥ ತಳುವದೀಯುವ ದೆಂತದಳುಕದೆ ಪೇಳಾಕೆ । ಗಳ ಗುಣ ಗಣವೆಲ್ಲವಾ ॥ ೪ ॥ ಮಣೆ ಯೊಳಾ ವಸನವ ದಿನನಿತ್ಯವಿರಿಸಲು । ವನಿತೆ ಮಂತ್ರೋದಕವಾ । ವಿನಯದಿ ತಳಿದು ಮಲಿನ ವಸ್ತ್ರ ಹಣ ಸಹಿ । ತೆನಗಿತ್ತು ಕಳುಹು ವಳೂ ॥ ೫ ॥

॥ ವಾರ್ಧಿಕ್ಯ ॥

ಈ ತೆರದಿ ನಿರತ ಸಂಸಾರ ನಡಸುವೆನೆನ್ನ । ನೀತರವ ನೀ ವಿಚಾರಿಸಲು ತೋರಿಗೆಸಲು ಶ್ರೀ । ನಾಥ ನಸುನಗುತೆಂದ ಮತಿ ಮರವೆ ಯಿಂ ನೀನು ಮಾನ್ಯತೆಯ ಕಳಕೊಂಡಿಹೇ ॥ ನೀ ತಿಳಿದು ನೋಡು ಮಡಿ ವಸ್ತ್ರಕಿರುವುದೆ ಮಲಿನ । ವೀತೆರನ ಯೋಚಿಸದೆ ತೆರಳಿ ವಿಧಿ ಸುತೆಯ ಕೈ । ಗಿತ್ತಾತುರದಿ ಮರಳಿ ಬಾರೆನಲ್ ಮಡಿವಾಳನಿಂತೆಂದ ಸ್ಮರತಾತಗೇ ॥ ೧ ॥

॥ ರಾಗ ತೋಡಿ ಅಟತಾಳ ॥

ಏನು ಬೋಧೆಯೊರವೆಯಯ್ಯಾ । ಪ್ರಾಣಹಾನಿ ಗೈವಕಾರ್ಯ ॥ ನಾನು ಕೇಳಿ ಪೋದಳಿನ್ನ । ಮಾನಿನಿಯು ಗತಿಯಿನ್ನೇನೋ ॥ ೧ ॥

ಸತಿಯು ಬಹಳ ಧರ್ಮವಂತೆ । ಪತಿಯೊಳ್ಪ್ರಿಯೆ ಸುಗುಣವಂತೇ ॥ ಪೃಥಿವಿ ಮರೂರ ದಹಿವಳಾಕೆ । ಹಿತದ ಮಾತು ಬೇಕಿನ್ನ್ಯಾಕೇ ॥ ೨ ॥ ನಿನ್ನೊಳಿದ್ದ ವಸನವೆಲ್ಲ । ಕನ್ಯೆಯು ಕೈಗಿತ್ತು ಮೆಲ್ಲ ॥ ಎನ್ನೆದೆಗೆ ತರಲು ನಿನ್ನ । ಚಿಣ್ಣ ಸತಿಯರಿಂಗೆ ಮನ್ನ ॥ ೩ ॥ ಮರಣ ಪರಿಯಂ ತರವು ತಿಂಬ । ಭರಿತ ಭಾಗ್ಯವೀವೆನೆಂಬ ॥ ಹರಿಯ ಮಾತ ಕೇಳಿ ಮನದಿ । ಹಿಂದು ಹಿಗ್ಗುತೆಂದ ಮುದದೀ ॥ ೪ ॥

॥ ಭಾಮಿನಿ ॥

ಬದ್ಧವಾದರೆ ನಿನ್ನ ನುಡಿ ಯಶ । ಹೊದ್ದಿಸುತ ನಾ ಬಪ್ಪೆ ಮಾತ್ರೆನ । ಗರ್ಧರಾಜ್ಯವನೀಯು ಬೇಕೆಂದೊಪ್ಪಿಗೆಯನಾಂತಾ ॥ ರುದ್ರ ನೋಲ್ ಪ್ರೇಮುಟ್ಟಿ ವಿಧಿ ಮಗ । ಳಿದ್ದ ನಿಳಯಕೆ ಬಂದ ಸತ್ವರ । ಹೊದ್ದಿ ಕದವಾಕೆಯನು ಬೆದರಿಸಿ ಮಾತನಾಡಿಸಿದಾ ॥ ೧ ॥

॥ ರಾಗ ಕಾಂಬೋಧಿ ಝಂಪೆತಾಳ ॥

ಭೂಲೋಕದಲಿ ಸತಿಯರೊಳ್ ಶ್ರೇಷ್ಠಳೆಂಬ ನುಡಿ । ಪಾಳು ಯತ್ತು ನಿನ್ನ ಕಾರ್ಯದಲೀ ॥ ಪೇಳು ಮಡಿವಸ್ತ್ರದೊಳಗಾನುಂಟು ಮಲಿನ ಕೈ । ಯೊಳ್ ಕೊಡುವದೆಂದು ಮುಂದ್ಯಾರಾ ॥ ೧ ॥ ಏನೆಲವೊ ಖೂಳ ಸುರೆಪಾನ ಮತ್ತತೆಯೊ ಮತಿ । ಹೀನತೆಯೊ ಸಿಕ್ಕಿಪೇ ಮರುಳೇ ॥ ಪ್ರಾಣೇಶನಿಲ್ಲವೆಂದೀ ನಿಧಾನವೆ ಕುಲಕೆ । ಹಾನಿಯುಂ ಬರು ಹುವೆಯು ಧೂರ್ತಾ ॥ ೨ ॥ ಹೆಂಗಸರ ವಸನ ಮಡಿಯಂಗೈದು ನಿರತ ವರ । ಹಂಗಿನಲಿ ಬಾಳ್ವನೆಂದೆನುತಾ ॥ ಹಂಗಿಸರು ಜನರೆನ್ನ ಸಿಂಗಾರಿ ನೀ ಖಾತಿ । ಯಂ ಗೊಳದೆ ಪಿಡಿಯೆ ಕರದೊಳಗೇ ॥ ೩ ॥ ವೇದ ಶಾಸ್ತ್ರ ವಿಚಾರವೋದಿ ತಿಳಿಯುವ ನಿನಗೆ । ಬೋಧೆಯೊರೆದರೆ ಹಿತಾಗದುದೇ ॥ ಸಾದರದಿ ಮೊದಲಿದ್ದ ಹಾದಿಯಂತಿರೆ ಲೇಸು । ವಾದವಿಲ್ಲದೆ ಸಾಧಿಸೆನಲೂ ॥ ೪ ॥ ಮಾನವಪಮಾನ ಸ್ತ್ರೀ ಪುರುಷರಿಗೆ ಸಮವೈಸೆ । ಹೀನ ನಾನಹೆನೆ ನಿನ್ನೊಡನೇ ॥ ಏನು ಧರ್ಮಗಳಿರ್ದಡೇನೆಂದು ಮುಂದ್ವರಿಯೆ । ಮಾನಿನಿಯು ಖತಿಯೊಳುಸುರಿದಳೂ ॥ ೫ ॥

॥ ಭಾಮಿನಿ ॥

ಸಿಲ್ಲಿಲವೊ ದುರ್ಮತಿಯೆ ಹಂಕೃತಿ । ಯಲ್ಲಿ ಸಲ್ಲದ ಕೃತ್ಯಗೈ ವೆಯು । ಖುಲ್ಲ ನೀ ನಡುಪಥದೊಳಳಿ ಮದದಿಂ ದೆನುತ ಶಪಿಸೀ ॥ ಫುಲ್ಲನೇತ್ರೆಯು ಗೃಹದೊಳಿರೆ ಮನ । ದಲ್ಲಿ ಕೆದರುತ್ತಾಗ ರಜಕನು । ನಿಲ್ಲದೈತಂದಾಗ ಕ್ರೋಧದೊಳೆಂದ ಮಾಧವಗೇ ॥ ೧ ॥

॥ ರಾಗ ಸೌರಾಷ್ಟ್ರ ತ್ರಿಪುಟತಾಳ ॥

ಧೂರ್ತ ನಿನ್ನಯ ಮಾತಿನಿಂದೆನ । ಗಿತ್ತಳಾ ಶಾಪವ ಸತಿಯಃ ಮಮ । ಪತ್ನಿ ಸುತರಿಂಗೇನು ಗತಿ ಪೇ । ಳ್ಯತ್ನಗಳನೂ ॥ ೧ ॥ ನುಡಿದೆ ನೀ ಮೊದಲರ್ಧರಾಜ್ಯವ । ಕೊಡುವೆನೆನ್ನುತ ಬಿಡೆನು ನಿನ್ನನು । ಸಡಗರದ ಮಾತಿರಲೆನಲು ಭೋ । ಗರ್ಜಿಸುತೆಂದಾ ॥ ೨ ॥ ಸತ್ಯಧರ್ಮವ ತೊರೆದು ಜಗದಲಿ । ವಿತ್ತಕೋಸುಗ ಬಾಳ್ವ ನಿನ್ನ ಸ । ಮಾಪ್ತಿಗೊಳಿಸುವೆನೆಂದು ತರಿದನು । ದೈತ್ಯವೈರೀ ॥ ೩ ॥

॥ ರಾಗ ಸಾಂಗತ್ಯ ರೂಪಕತಾಳ ॥

ಬಳಿಕ ಯೋಚಿಸುತೆಂದ ಸುರರಿಂಗೆ ಸಂತಸ । ಗೊಳಿಸಲು ನಾಗ ಕನ್ನಿಕೆಗೇ ॥ ಬಲುತರದಪಮಾನ ಹೋಪೆನೆಂತಾದರು । ಇಳೆಯ ಭೂಸುರನಾಗಿ ಪೋಗೀ ॥ ೧ ॥ ಮೊದಲು ನಿರ್ಜರರ ಸಭೆಯ ಮುಗಿಸಲು ಪೇಳಿ । ತುದಿಗೆ ನಾನೇ ಕಪಟದಲೀ ॥ ಬದಲೋರ್ವ ಬುಧನ ವೇಷದಿ ಬಂದು ಬೇಕಾದ । ಹದನಗೈಯ್ಯುವೆನೆಂದು ಪೊರಟಾ ॥ ೨ ॥ ಬರುತಿರಲಿತ್ತಲಾ ಹರಗಣದೊಳಗೋರ್ವ । ಭರಿತ ವಿಕ್ರಮಿ ಕ್ಷೇತ್ರಪಾಲಾ ॥ ಮೆರದಿರೆ ಮಧುವನದೊಳಗೆ ತಾನುಬ್ಬಿ ಹೊಂ । ಕರಿಸುತ್ತ ನುಡಿದನಾಕ್ಷಣದೀ ॥ ೩ ॥

॥ ರಾಗ ಪಂತುವರಾಳಿ ಮಟ್ಟತಾಳ ॥

ಯಾರಿಗೊರೆಯಲೆನ್ನ ಭವಣೆಯಾ । ಬಲು ಕಷ್ಟ ಕಾಲ । ವ್ಯಾರಿಗೊರೆಯಲೆನ್ನ ಭವಣೆಯಾ ॥ ಯಾರಿಗೊರೆಯಲ್ಹೈಸೆ ಕಂತಾರದಲ್ಲಿ ಪೋಪ ತ್ರಾಣ । ಮಾರಿ ಹೋಗಿ ಹೊಟ್ಟೆ ಹೊರುವ ದಾರಿ ಕಾಣದಿಲ್ಲಿ ದಣಿವು । ಸೇರಿ ಕುಳಿತೆ ವೃಕ್ಷದಡಿಯಲೀ ॥ ಸಂಚಾರ ಮಾಳ್ಪ । ರಾಂ

ಕಾಣದಾದೆ ವನದಲೀ । ಮೃಗಪಕ್ಷಿವಾರ । ಜಾರದೆನ್ನ ಭೀತಿಯೊಳಿಲ್ಲೀ ॥ ಯಾರಿಗೊರೆಯಲೆನ್ನ ॥ ೧ ॥ ನರರ ಮಾಂಸ ಮೆಲದೆ ಬಹಳ । ವರುಷವಾಯ್ತು ಕಾಣೆಸೀಗ । ಪರಿಕಿಸುವೆನು ವನದೊಳಿಂದು ದುರುಳ ಪೊರಟು ಬರುತ ಮುಂದೆ । ಹರಿಯು ಕಾಣುತಾಗ ದೂರದೀ । ಸಂಹರಿಸಿ ತಿಂದು । ಉದರವ ತುಂಬಿಸುವೆನು ಬೇಗದೀ । ಎಂದೆಣಿಸಿ ಪೇಳ್ದ । ಧುರಕೆ ನಿಂದು ಬಹಳ ಕ್ರೋಧದೀ ॥ ಯಾರಿಗೊರೆಯಲೆನ್ನ ॥ ೨ ॥

॥ ರಾಗ ಮಾರವಿ ಯೇಕತಾಳ ॥

ಹುಲು ಮಾನವ ನಾರೆಲೊ ಸೀ ನಮ್ಮಯ । ಹೇಳುವದಿ ಪೋಪೆಯಲಾ ॥ ಕೊಲದಿರೆ ನಿನ್ನನು ಸಲಹುವರಾರೈ । ಸುಲಭದಿ ದೊರತೆಯಲಾ ॥ ೧ ॥ ಮರಣದ ಭಯವೆನಗಿರುವುದೆ ನಾನಸು । ರರ ವೈರಿಯು ಕಾಣೈ ॥ ದುರುಳನೆ ತಡೆಯದೆ ಹರಣವುಳಿಸಿ ಪೋ । ದರೆ ನಿನಗೊಳಿತೇನೈ ॥ ೨ ॥ ನರರ ತಿನದೆ ಬಲು ವರುಷವು ಸರಿಯಿತು । ದೊರಕಿದೆ ನೀನೆನಗೇ ॥ ತೆರಳಲು ಬಿಡೆ ನಿನ್ನುರವ ಬಗಿದು ನಾ । ಹರುಷವ ತಾಳ್ವೆನಿಗೇ ॥ ೩ ॥ ತಿಂದರೆನ್ನ ವಿಷದಂದದಿ ಲಭಿಪುದು । ಮುಂದ ಮತಿಯೆ ನಿನಗೇ ॥ ಮುಂದ್ವರಿಯಲು ಬಿಡೆ ಹೊಂದಿಪೆ ಯಮನೆಡೆ । ಗೆಂದರಿತಿರು ಮನಕೇ ॥ ೪ ॥ ಸ್ಥಳದಧಿಕಾರವು ನೆಲಸಿಹುದೆನ್ನಲಿ । ಕಲಹದ ಬಲುಮೆಯನೂ ॥ ತಿಳಿವೆನೆನುತ ಮರಗಳ ತೆಗೆದೆಸೆವಡೆ । ಅಳುಕದೆ ತರಿವವನೂ ॥ ೫ ॥ ಅಸಿತದೊಳೀರ್ವರು ಸಮಬಲರಾಗುತ । ರಣದಲಿ ಹೊಯ್ದಾಡೇ ॥ ದನುಜನು ಶಿಲೆಗಳ ತೆಗದೆಚ್ಚಡೆ ಧುರ । ವನು ಹರಿ ಬಿಟ್ಟೋಡೇ ॥ ೬ ॥

॥ ರಾಗ ನಾದನಾಮಕ್ರಿಯ ಅಟತಾಳ ॥

ಯುದ್ಧದಿ ಕೈಸಾಗದಾಕ್ಷಣಾ । ದೈತ್ಯ । ಮರ್ದನವೃಶ್ಯಗೊಂಡಾಕ್ಷಣಾ ॥ ಸೇರ್ದನು ಸ್ವರ್ಗಸಭೆಯ ಬಂದೂ । ಹರು । ಷಾಬ್ಧಿಯೊಳ್ನಲಿದಾಡಲವರಂದೂ ॥ ೧ ॥ ಕರದು ಫಣೀಂದ್ರನೊಳಿಂತೆಂದಾ । ಶುಭ । ಕರವಾಯ್ತು ನಾ ಪೋದ ಬಗೆಯಿಂದಾ ॥ ಪರಿಪೂರ್ಣ ಕಾರ್ಯವ ತೀರಿಸಿ । ನಾ ಬಂ । ದಿರುವೆನು ಸಕಲವ ಯೋಚಿಸೀ ॥ ೨ ॥ ಎನುತ

ಲನ್ಯೋನ್ಯದಿ ವಚನವಾ । ಮೊದ । ಲಿನ ತೆರ ಧರಿಸುತ್ತ ಮಾಧವಾ ॥
ಘನ ಸಭೆ ಮುಗಿಸಲಿಕರುಹಲೂ । ಬಂದ । ನನಿತರೊಳ್ ಭೂಸುರ
ನಾಗಲೂ ॥ ೩ ॥

॥ ಕಂದ ಪದ್ಯ ॥

ವಿಪ್ರೋತ್ತಮನಂ ಕಂಡಾ । ಕ್ಷಿಪ್ರದಿ ಹರಿ ನಿಲಿಸುತಾಗ ಸಕಲರ
ಮತ್ತಾ ॥ ತಪ್ಪದೆ ಮನ್ನಿಸುತಾ ಕಂ । ದರ್ಪ ಪಿತನ ಮೊಗವ ನೋಡಿ
ಸುರೇಂದ್ರನೆಂದಂ ॥ ೧ ॥

॥ ರಾಗ ಭೂಪಾಳಿ ತ್ರಿಪುಟತಾಳ ॥

ಎತ್ತಣಿಂದಾಗಮನಾ । ಮಾಯಿತು ಭೂಸು । ರೋತ್ತಮ ಪೇಳ್
ಪದನಾ ॥ ಪೃಥ್ವಿತ್ರಯದಿ ಪೊಸ ವರ್ತಮಾನಗಳೇನು । ಚಿತ್ರಿಸದ
ನೆಮ್ಮೊಳೂ ॥ ಸಂತಸದೊಳೂ ॥ ೧ ॥ ಲೋಕ ಲೋಕವ ಚರಿಸೀ ।
ಯಾಚಕನಾಗಿ । ಶ್ರೀಕಾಂತನನೆ ಸ್ಮರಿಸೀ ॥ ಏಕ ಚಿತ್ತದಲಿ ಭೂಲೋಕ
ಕೈದಿರೆ ಪೇಳ್ವ । ರಾಕಡೆ ಸುಜನರೆಲ್ಲಾ ॥ ಸುಳ್ಳಲ್ಲಾ ॥ ೨ ॥ ಧರಣಿ
ಪಾಲರ ಗೆಲಿದೂ । ಕಪ್ಪವಗೊಂಡು । ಉರಗೇಂದ್ರ ಮುದ ತಳೆದೂ ॥
ಮೆರೆವ ಕನಕ ಬೆಳ್ಳಿ ರತುನದಿಂ ಗೃಹಗಳ । ವಿರಚಿಸಿ ವಿಧಿ ಬಾಲಿಯಾ ॥
ವರಿಸಿಹೆನಯ್ಯಾ ॥ ೩ ॥ ಬಹಳ ಪತಿವ್ರತೆಯೂ । ಧರ್ಮಾತ್ಮಳು ।
ಅಹಿರಾಯನರ್ಧಾಂಗಿಯೂ ॥ ಮಹಿಯೊಳೆಂಬುದ ಕೇಳಿ ಬಹುಮಾನ
ಪಡೆಯಲು । ಗ್ರಹಿಸುತ್ತ ಮನೆಗೆ ಪೋದೇ ॥ ಸಂತಸ ತಾಳ್ದೇ ॥ ೪ ॥

॥ ವಾರ್ಧಿಕ್ಯ ॥

ಹೊರ ದ್ವಾರದಲಿ ನಿಂತು ಕರೆದು ಬಳಲಿದರೆನ್ನ । ಪರಿಕಿಸುತ
ಕದತೆರದು ಮಾತಾಡಿಸುವರಿಲ್ಲ । ದರಿತು ಜಗಚರಿಸಿ ದಣಿದಾ ದಾಹ
ಕಳೆಯಲೆರಗೀರ್ದೆ ನಾ ಕಂಭಕಿಂದೂ ॥ ಅರೆ ಗಳಿಗೆ ಕಳೆದು ಮಿಗೆ
ನುಡಿಯುತಿರೆ ಮನೆಯೊಳಗೆ । ಭರದಿಂ ಕವಾಟದೆಡೆಯಿಂ ಕಂಡೆ ರಜಕ
ನೊಡ । ಸರಸವಾಡುತ್ತ ಸತಿಯುಯ್ಯಾಲೆಯೊಳಗಿರಲು ಪತಿವ್ರತಾ
ಧರ್ಮದಿಂದಾ ॥ ೧ ॥

॥ ಕಂದ ಪದ್ಯ ॥

ಪರಿಕಿಪ್ರುದತಿ ಪಾಪವೆಂದು । ಪರಿಹರಿಸಲಿಕಾಗಿ ಬಂದೆ ನಾನೀ
ಸಭೆಗಂ ॥ ಒರೆದಾ ನುಡಿ ಪುಸಿಯಲ್ಲೆನೆ । ಸುರರು ಕರವ ಹೊಯ್ಯೆ
ಲೆಂದ ಫಣಿಪ ಕನಲ್ದುಂ ॥ ೧ ॥

॥ ರಾಗ ಭೈರವಿ ಏಕತಾಳ ॥ (8 ಅಕ್ಷರಕಾಲ)

ಪೇಳಿದ ನುಡಿ ಧಿಟವಹುದೇ । ಸಾರ । ಜಾಲಕೆ ಸಂತಸ
ವಿಹುದೇ ॥ ಕಾಲಗತಿಯು ಬಹು ಕಷ್ಟ । ಇದ । ಕೇಳ್ದಿನಗಾಯ್ತು
ಸಂಕಷ್ಟಾ ॥ ೧ ॥ ಕೂಡಿದ ಸಭೆಗೈತಂದೂ । ಬುಧ । ನಾಡಿದ ವಾಕ್ಯ
ಗಳಿಂದೂ ॥ ನೋಡಿ ವಿಚಾರಿಸಿ ಸತಿಯಾ । ಜೆಂ । ದಾಡದೆ ಬಿಡೆನೈ
ತಲೆಯಾ ॥ ೨ ॥ ಭೂಸುರ ನಾಡಿದ ನುಡಿಗೇ । ಹರಿ । ವಾಸವ
ಸಾಕ್ಷಿಯು ಕಡೆಗೇ ॥ ಈಸು ಜನರ ಮುಂದೆನ್ನಾ । ಸತಿ । ಬೇಸರ
ಗೊಳಿಸಿದಳೆನ್ನಾ ॥ ೩ ॥ ಸಡಲಿದೊಸನ ಬಿಗಿಮಾಡುತಾ । ಘಾಡು ।
ಘುಡಿಸಿ ಮನೆಗೆ ನಡೆ ತರುತಾ ॥ ಒಡನೆ ತುಳಿದು ಕದ ಮುರಿದೂ ।
ಸತಿ । ಯೊಡನೆಂದನು ಮುಡಿ ಪಿಡಿದೂ ॥ ೪ ॥

॥ ರಾಗ ಭೈರವಿ ಅಟತಾಳ ॥

ದುಷ್ಟೆ ದುರಾಚಾರಿಣೀ । ರಜಕನೊಡ । ನಿಷ್ಟಗೊಂಡೆಯು
ಭಾಮಿನೀ ॥ ಸೃಷ್ಟಿಯೊಳಗೊಡೆ ಕುಟ್ಟುವೆ ಶಿರವೆಂದು । ಸಿಟ್ಟಿನೊಳೆಸಿ
ಯೆತ್ತಿದಾ ॥ ೧ ॥ ಅರಿತು ಪದುಮರಾಯನೂ । ತಡವೃತೆಂದ । ಹಿರಿ
ಯನೆ ಕ್ರೋಧವೇನೂ ॥ ಅರಸಿಯು ಶಿರವಕತ್ತರಿಸಲೇನ್ಕಾರಣ । ಮರಿಯೆ
ನೀ ಪೇಳೆಂದನೂ ॥ ೨ ॥ ಸಾರಿಸದಾ ಸಭೆಗೇ । ಭೂಸುರ ನೋರ್ವ ।
ಬರುತೆಂದಳಿವಳು ಹೀಗೇ ॥ ಮರೆವಳಗಸನೊಡನೊರೆದ ಮಾತ್ರ । ಶಿರ ।
ವರಿಯುವೆ ಬಿಡೆನೀಕೆಯಾ ॥ ೩ ॥ ಅಣ್ಣ ನೀ ಹೋದ ವೇಳೇ । ನಿನ್ನಯ
ಸತಿ । ಯನ್ನ ಕಾದಿರ್ದ ವೇಲೇ ॥ ಅನ್ಯರು ಬಂದಿಹುದನ್ನ ತಿಳಿಯೆ
ಶಿರ । ವನ್ನ ತರಿಯಲೇತಕೇ ॥ ೪ ॥ ಪುಸಿಯಾಡುವನೆ ವಿಪ್ರನೂ ।
ಪೇಳ್ದುದಕನಿ । ಮಿಷರೆಲ್ಲ ಸಾಕ್ಷಿಯಿನ್ನೂ ॥ ಎಸೆವ ಸಭೆಯೊಳೆನ್ನಯ
ಶಕೆ ಭಂಗವ ತಂದ । ಸುರೆಯುಸುಳಿಸೆ ನಾನೂ ॥ ೫ ॥

॥ ರಾಗ ಸಾವೇರಿ ತ್ರಿಪುಟತಾಳ ॥

ಲಾಲಿಪುದೆನ್ನ ಮಾತಾ । ಲೋಕ ಪ್ರಖ್ಯಾತ । ಪೇಳುವೆ ಪ್ರಾಣ ನಾಥಾ ॥ ಖೂಳರಾ ಸುರರೆನ್ನ ಯತ್ನದಿ । ಹಾಳು ಗೈಯ್ಯಲು ಯೋಚಿಸುತ ಶುಭ । ವೇಳೆ ಸಾಧಿಸಿ ಮಾಡಿದಾ ಬಗೆ । ಪೇಳ್ವೆನದ ಗುಣಶೀಲ ವಿನಯದಿ ॥ ಲಾಲಿಪುದೆನ್ನ ॥ ೧ ॥ ನೀ ತೆರಳಿದ ಕಾಲಕೇ । ಬಂದೋರ್ವವಿ । ಖ್ಯಾತ ವಿಟನು ಪೀಡಿಸೇ ॥ ನಾ ತಳೆಯುತದೃಶ್ಯ ವಿಗೆ ಗೋ । ಮಾತೆಯನು ಮರೆಹೊಗಲು ಮಾನವ ॥ ನೀತಿಯುತೆ ಕಾಪಾಡಿದಳು ನಿನ । ಗೇತರದ ಯಶ ಭಂಗ ಗೈದೆನೋ ॥ ಲಾಲಿಪುದೆನ್ನ ॥ ೨ ॥

॥ ವಾರ್ಧಿಕ್ಯ ॥

ಬುಧನೆಂದ ಮಾತು ಪುಸಿಯಹುದೆ ಜಾರೆಯರರಸಿ । ಬೆದರಿಕೆಯ ಬಗೆಯರಿಯಳದರಿಂದ ನಿನಗೆ ಯಮ । ಸದನ ತೋರುವೆನೆಂದು ಖಡುಗಗಳಕಿಡೆ ಸಹಜ ತಡವುತ್ತಲಿಂತೆಂದನೂ ॥ ಸುದತಿಯಳ ಕೊಂದು ಸ್ತ್ರೀಹತ್ಯ ಗಳಿಸುವದೇಕೆ । ತ್ರಿದಶ ಸಭೆಯಲಿ ಭೂಸುರನ ಮುಂದೆ ಸತಿಯ ಸ । ತ್ಯದ ಪರೀಕ್ಷೆಯ ಮಾಳ್ಪದುತ್ತಮವೆನಲು ಸೆಳದು ತಂದನಾ ಸುರ ಲೋಕಕೇ ॥ ೧ ॥

॥ ರಾಗ ಕೇತಾರಗೌಳ ಅಟತಾಳ ॥

ಸಭೆಯೊಳು ದಂಡಿಸಲಿಭಗಮನನು ಪೇಳ್ದ । ನಬುಜಾಕ್ಷಿಯಳ ಧರ್ಮವಾ ॥ ವಿಬುಧರೆದುರು ಪರೀಕ್ಷಿಪುದು ಲೇಸೆನಲೆಂದ । ನಭವರ್ಣ ನಾಕ್ಷಣದೀ ॥ ೧ ॥ ಏಳು ತಾಳೆಯಮರದಾಳ ಕೊಪ್ಪರಿಗೆಗೆ । ಬೀಳಿಸೆ ಕುದಿವೆಣ್ಣೆಗೇ ॥ ಮೇಲೆ ಸುಕ್ಷೇಮದೊಳ್ಳೈತರೆ ಧರ್ಮಾತ್ಮ । ಳೀ ಲೋಲ ಲೋಚನೆಯೂ ॥ ೨ ॥ ಎಂದಮಾತಿಗೆ ಸುರರಂದು ಬೇಗದಿ ಮಾಡ । ಲಂದು ಕಾದೆಣ್ಣೆಯಲೀ ॥ ನೊಂದು ಕೊಂಡಾಗ ಗೋವಿಂದ ಸಖನೆ ನೀಲ । ಕಂಧರ ಸಲಹೆಂದಳೂ ॥ ೩ ॥

॥ ವಾರ್ಧಿಕ್ಯ ॥

ಭೂಸುರನ ನುಡಿಗೆ ಮಮ ಪತಿವ್ರತಾ ಧರ್ಮವನು । ವಾಸವನ ಮತದಿಂದ ತಪ್ತ ತೈಲದೊಳಿರಿಸಿ । ತೋಷದಿ ಪರೀಕ್ಷಿಪರು ಪಾಲಿಸೈ

ಮದನಾರಿ ಮೃತ್ಯುಂಜಯನೆ ಪುರಹರಾ ॥ ದೋಷಹರ ಭಕ್ತ ರಕ್ಷಕ ನೆನ್ನನುದ್ಧರಿಸು । ಲೇಸೆನಿಸುವುದೆ ನಿನ್ನಮನಕೆನುತ ಮರುಗಲಾ । ಆ ಸರೋಜಾಕ್ಷಿ ಗಾ ತ್ರೈಲ ಶೀತಳವಾಗಿ ಮೇಲಡರೆ ಸಂತಸದಲೀ ॥ ೧ ॥ ವಿಪ್ರನಾಡಿದನಾಗ ಕೊಪ್ಪರಿಗೆ ಬಿಸಿಯಾಗ । ದಿಪ್ಪ ಕಾರಣದಿ ನಾನೊಪ್ಪ ಲಾರೆನು ಧಿಟವು । ಕ್ಷಿಪ್ರದಿಂ ಬೇರೆ ವಿಧದಿಂ ಪುಲ್ಲನೇತ್ರೆಯಳನುಂ ಪರೀಕ್ಷಿಪುದೆನ್ನಲೂ ॥ ಒಪ್ಪಿದಾನಂದದಿಂದಾ ಪುರಂಧರನೆಂದ । ತಪ್ಪದೀ ಕ್ಷಣದೊಳುಕ್ಕಿನ ಗುಂಡುಕಲ್ಲ ಶಿಖಿ । ಗೊಪ್ಪಿಸುತ ಬಿಸಿಯಾಗಲದನು ಕೈಗಿತ್ತದರ ಮೇಲೆ ಬೆಣ್ಣೆಯನಿಡುವುದೂ ॥ ೨ ॥

॥ ರಾಗ ಕೇದಾರಗೌಳ ಅಟತಾಳ ॥

ಕರಗದಿದ್ದರೆ ಪತಿವ್ರತೆಯಾಕೆ ನಿಶ್ಚಯು । ವಿರಚಿಸಿರೆನಲಾಕೆಯಾ ॥ ಕರದಾಕೆಗಾತೆರ ವಿರಚಿಸೆ ಜಯುಹೊಂದ । ಅರಿತು ಭೂಸುರನೆಂದ ನೂ ॥ ೧ ॥ ಕಿಚ್ಚು ಬಂಧನ ಗೈವ ಮಂತ್ರ ಬಲ್ಲವಳಾಕೆ । ಹುಚ್ಚರು ನೀವೆಲ್ಲರೂ ॥ ಬೆಚ್ಚದೆ ಬೇರೆ ಪರೀಕ್ಷೆ ಮಾಡೆಂದೆನ । ಲುಚ್ಚರಿಸಿದನಿಂ ದ್ರನೂ ॥ ೨ ॥ ಉರಗರೊಳಧಿಕನಾಗಿಹ ಸಂಕಬಾಳನ । ತ್ವರಿಯದಿ ತಂದವರಾ ॥ ತೆರೆದು ಬಾಯಿಗೆ ಲಿಂಬೆಹಣ್ಣನಿಟ್ಟರೆ ನಾವೆ । ಲ್ಲರು ಪತಿವ್ರತೆಯೆಂಬುದೂ ॥ ೩ ॥ ಚಂದ್ರಶೇಖರನ ಧ್ಯಾನಿಸಿ ಶಕ್ರನೆಂ ದಂತೆ । ಮಂದಗಮನೆ ಗೈದಳೇ ॥ ಇಂದ್ರಾದಿ ಸುರರಚ್ಚರಿಯುಗೊಳಲಾ ಬುಧ । ನೆಂದನತ್ಯಗ್ರದಲೀ ॥ ೪ ॥

॥ ವಾರ್ಧಿಕ್ಯ ॥

ಗರುಡ ಮಂತ್ರವ ಬಲ್ಲಳಾಕೆಗದರಿಂದ ನೀ । ವಿರಚಿಸು ಪರೀಕ್ಷೆ ಬೇರೊಂದು ವಿಧದಿಂದೆನಲ್ । ಸುರಪಾಲನೆಂದ ನಾ ಕೃಷ್ಣಸರ್ಪನ ಮಸ್ತಕದ ಮೇಲೆ ಕೈಯಿರಿಸುತಾ ॥ ತೊರೆದಿಲ್ಲ ಪತಿವ್ರತಾಧರ್ಮವೆಂ ದರುಹಿದರೆ । ಹರುಷದಿಂ ಸಭಿಕರೊಪ್ಪುವರೆನಲು ವಿಧಿ ಕುವರ । ಹರನ ಧ್ಯಾನಿಸಿ ಜಾರತನವ ಗೈದಿಲ್ಲ ನಾನೆನೆ ಕೇಳುತಾ ವಿಪ್ರನೂ ॥ ೧ ॥

॥ ಭಾಮಿನಿ ॥

ನುಡಿದ ನಾನೆಂದಂತೆ ಫಣಿಪನ । ಮಡದಿ ಪೇಳ್ದರೆ ಸಮವೆನುತ

ಸಖಿ । ಗಡಣ ಸಹ ಬಿಟ್ಟಲ್ಲ ಧರ್ಮವೆನುತ ಪೇಳಿನಲೂ ॥ ಜಡಜ ಲೋಚನೆ ಶಿರಕೆ ಕರವನು । ಹೊಡದು ಧರೆಗುರುಳುತ್ತಲೀತೆರ । ಕಡು ಮಹಾತ್ಮರು ಪೀಡಿಸುವರೇಕೆಂದು ಮರುಗಿದಳೂ ॥ ೧ ॥

॥ ರಾಗ ನೀಲಾಂಬರಿ ಯೇಕತಾಳ ॥

ಕಾಣದೆ ಪೋದೆಯ ಯನ್ನಾ । ಗೀ । ರ್ವಾಣರು ಬಳಲಿಸು ವದನಾ ॥ ಪ್ರಾಣೇಶನೆ ಹಿತವೇನೈ । ಮಮ । ಮಾನವ ನೀ ಕಾಪಾಡೈ ॥ ೧ ॥ ಸುರಪತಿ ಛಲದಿಂದೆನ್ನಾ । ಪರಿ । ಪರಿ ಪೀಡಿಪ ಕಾರ್ಯವನಾ ॥ ಅರಿಯೆಯ ಕೃತ್ರಿಮವೆಂದು । ಭೂ । ಸುರನೊರದಿಹ ನುಡಿ ಯುಂದೂ ॥ ೨ ॥ ಹರನೇ ಮೃತ್ಯುಂಜಯನೇ । ಶಂ । ಕರ ಪಾಲಿಸು ಶುಭಕರನೇ ॥ ಧರೆಯೊಳು ಬಾಳಿರಲಾರೇ । ಎಂ । ದೊರೆದಳುರಗನಿಗೆ ಬಾಲೇ ॥ ೩ ॥

॥ ವಾರ್ಧಿಕ್ಯ ॥

ನಾನಾ ಪರೀಕ್ಷೆಯಲಿ ಜೈಸಿದರು ಬರಿದೆನ್ನ । ಮಾನವಂ ಕಳೆಯ ಲೋಸುಗ ದಂಡಿಪುದರಿಂದ । ನೀನು ಕನಿಕರವಿರಿಸದೆನ್ನ ಕೈಯುಂಗುಟಕೆ ಕಚ್ಚಿ ಸಂಹರಿಸೆನ್ನಲಾ ॥ ಮಾನಿನಿಗೆ ಕೃಷ್ಣಸರ್ಪವು ಕಡಿಯಲಾಗಲಾ । ಪ್ರಾಣವಂ ತೊರೆಯಲದನರಿತು ವಿಪ್ರನು ಸಭೆಯೊ । ಳಾನಿರುವದನುಚಿತವಿದೆನ್ನುತ್ತ ತೆರಳೆ ಸುರವರ ನಾಗರಾಜಗೆಂದಾ ॥ ೧ ॥

॥ ರಾಗ ಭೈರವಿ ಏಕತಾಳ ॥

ಕಂಡೆಯ ನೀ ಸತಿ ಗುಣವಾ । ತೆಗೆ । ಹೆಂಡತಿಯುಳ ಘನ ಹೆಣವಾ ॥ ಮಂಡೆಯ ತಗ್ಗಿಸಲೇಕೇ । ಬಲು । ಭಂಡ ನೀನಹೆ ತಡ ವೇಕೇ ॥ ೧ ॥ ಎಂದುದ ಕೇಳಿ ಜಯಂತಾ । ಖತಿ । ಯಿಂದೊರದನು ಸತಿಗಿಂಥಾ ॥ ಬಂಧನಗೊಳಿಸಿದುದೇನೈ । ಸೊಗ । ಸಿಂದವಳ ಕೊಂಡು ಪೋಗೈ ॥ ೨ ॥ ವರುಣನು ಕನಲುತ್ತೆಂದಾ । ನಿ । ಸ್ಸರಸಿ ಪರೀಕ್ಷೆಗಳಿಂದಾ ॥ ಮರಣವ ಹೊಂದಿದ ಮೇಲೇ । ಕು । ಳ್ಳಿರಲ್ಯಾತಕೊ ಯಿವಾವೇಳೇ ॥ ೩ ॥ ಸುಡಿದನು ಪಾವಕ ಜಗದೀ । ಯಿಂಥ । ಮಡದಿಯಿರದ್ದರೆ ಮುದದೀ ॥ ಪೊಡವಿಯೊಳಿದೆ ಯಶ ಪತಿಗೇ । ಮತಿ । ಗೆಡುಕನೆ

ತೊಲಗೈ ಮನೆಗೇ ॥ ೪ ॥

॥ ಕಂದ ಪದ್ಯ ॥

ಶಿರದೋಳ್ ಸತಿ ಹೆಣವಿರಿಸುತ । ತೆರಳೈ ನೀನೆನ್ನಲಾಗ ಖತಿ ತಾಳ್ದಾಗಂ ॥ ಹರಿ ಕಪಟವಿದೆಂದರಿತಾ । ಸುರವರನೊಳೆಂದನು ನಾಗರಾಜಂ ಭರದೊಳ್ ॥ ೧ ॥

॥ ರಾಗ ಸೌರಾಷ್ಟ್ರ ತ್ರಿಪುಟತಾಳ ॥

ಲೇಸು ಕಾರ್ಯವ ಮಾಡಿದಿರಿ ಹರಿ । ವಾಸವಾದ್ಯರು ಸಭೆಯೊಳಿಂದಿಗೆ । ಭೂಸುರನ ಸೇವನದಲಿ ಮಮಸತಿ । ದ್ವೇಷದಿಂದಾ ॥ ೧ ॥ ಸಲ್ಲದಿರುವಪವಾದ ಹೊರಿಸುತ । ಫುಲ್ಲನೇತ್ರೆಯ ತರಿದಿರಲ್ಲವೆ । ಚೆಲ್ಲಬಡಿವೆನು ನಿಮ್ಮನೆನೆ ಶಚಿ । ನಲ್ಲನೆಂದಾ ॥ ೨ ॥ ವಿಧಿಮುಗಳ ಮರಿಸೀರ್ದಡೆನ್ನಾ । ತೊದಗಲವರೀ ಕದನ ಕೀಕ್ಷಣ । ಹದಗೆಡಿಪೆನೋಡೆಂದು ಪೇಳಿದ । ತ್ರಿದಶರೊಡನೇ ॥ ೩ ॥ ಚಿತ್ತವಿಸಿ ಸುಮನಸರು ಧುರದಲಿ । ಸತ್ವದಿಂದಹಿಪತಿಯ ಬಂಧಿಸಿ । ಇತ್ತ ಸೆರೆಗಿರಿಸೆಂದು ನಿರ್ಜರ । ವೊತ್ತ ಕಳುಹೇ ॥ ೪ ॥ ಫಣಿಪನೊಡನಿದಿರಾಗುವದ ಕಂ । ಡನುಜ ಪಂಕಜರಾಯ ಶಕ್ರನ । ತನುಜನನು ತಡವುತ್ತ ಪೇಳಿದ । ಕಿನಿಸಿನಿಂದಾ ॥ ೫ ॥

॥ ರಾಗ ಶಂಕರಾಭರಣ ಮಟ್ಟೆತಾಳ ॥

ಧುರಕೆ ನಿಲ್ಲು ಪೋಪುದೆಲ್ಲಿ ಸುರಪನಂದನಾ । ಭರಿತ ಗರುವ ವಿರಲು ಮುರಿವೆ । ನೋಡು ಛಲವನಾ ॥ ಒರಿಯುನರಸಿಯುಳನು ತರಿಸಿ ತರಿದ ನಿಮ್ಮನೂ । ಸ್ವರದೊಳಿರಿಸಗೊಡೆನೆನುತ್ತ ಶರವ ಸುರಿದನೂ ॥ ೧ ॥ ತರಿವುತವನ ಮಾರ್ಗಣಗಳ ನೊರದನಾತಗೇ । ಧರಣಿಪಾಲರುಗಳ ಗೆಲಿದ ಬಲುಹನೊಮ್ಮೆಗೇ ॥ ಧುರದಿ ತೋರಿಸೀಗ ನಿನ್ನ ಹರಣಗೊಂಬೆನೂ । ಪೊರೆವದಾತರಿರಲು ಕರಸಿ ತೊಡಗು ರಣವನೂ ॥ ೨ ॥ ಹಿಂದೆ ಬಗುಳ ಬೇಡ ಶಕ್ರ ಕಂದ ನಿನ್ನನೂ । ಹಿಂದೆ ಭಾನುಕೋಪಕರವ ಬಿಗಿದು ಸೆರೆಯನೂ ॥ ಹೊಂದಿಸೀರ್ಪ ಬಗೆಯ ಮರತು ನಿಂದೆ ಯಾತಕೇ । ತಂದೆಯನ್ನು ಕರಸು ನೀನೆನ್ನೊಡನೆ ಸಮರಕೇ ॥ ೩ ॥

ಜಾತನನ್ನು ಗೆಲಿದ ಮೇಲೆ ತಾತ ಬಪ್ಪನೂ । ಕೀರ್ತಿ ಮೂರು ಜಗದಿ ಮೆರೆವ ದಾತನಾತನೂ ॥ ಮಾತಿನಲ್ಲಿ ಫಲಗಳಿಲ್ಲ ಸಾತಿಶಯಗಳಾ । ಧೂರ್ತತೋರೆನುತ್ತ ಸುರಿದನೇಕ ಶರಗಳಾ ॥ ೪ ॥

॥ ಕಂದ ಪದ್ಯ ॥

ಬರುವ ಶರಂಗಳ ತರಿದಾ । ಸರಸಿಜರಾಯು ಕನಲುತ್ತ ಶಿಲೆಮಳೆ ಸುರಿಯಲ್ ॥ ಸುರಪ ಕುಮಾರನು ಪಿಂದಕೆ । ಸರಿವುದನಂತಾ ಕೃಶಾನು ತಡವುತ್ತೆಂದಂ ॥ ೧ ॥

॥ ರಾಗ ಭೈರವಿ ಅಟತಾಳ ॥

ಮುಂದ್ವರಿಯುವದೆಲ್ಲಿಗೇ । ವಿಕ್ರಮಿಯೆಂಬ । ಮಂದತನವ ನಿಲ್ಲಿಗೇ ॥ ಚಂದದಿ ನಿಲಿಸುವೆನೆಂದು ಶರಂಗಳ । ವೃಂದವೆಚ್ಚನು ಕ್ರೋಧದೀ ॥ ೧ ॥ ಸರ್ವ ಭಕ್ಷಕನೆ ನೀನೂ । ಮೊದಲು ಮದ । ಗರ್ವದಿ ಶಾಪವನೂ ॥ ಊರ್ವಿಗೆ ತೆರಳಿ ಗೌತಮನಿಂದ ಪಡೆದುದ । ಸರ್ವನರಿತಿಹೆನೂ ॥ ೨ ॥ ಗಳಹೆದಿರೆಲವೊ ಧೂರ್ತಾ । ಬಲ್ಲೆನು ನಿನ್ನ । ಕುಲವ ನೀನುಳಿದು ಮತ್ತಾ ॥ ತಳುವದೆ ಮನುಜರಂದದಲಿ ಬಾಳಿದರೆ ನೀ । ನಿಳೆಯೊಳುತ್ತಮನಪ್ಪೆಯಾ ॥ ೩ ॥ ಮಾತಾಡಿ ಫಲಗಳೇನೂ । ಎಂದೆನುತಸ್ತ್ರ । ವ್ರಾತವ ತೆಗದೆಚ್ಚನೂ ॥ ಸೋತು ಪಿಂದಿರುಗಲು ಖಾತಿಯೊಳಾ ಜಲ । ನಾಥನು ತಡದೆಂದನೂ ॥ ೪ ॥

॥ ರಾಗ ಭೈರವಿ ಝಂಪೆತಾಳ ॥

ಭಳಿರೆ ನೀ ನಮ್ಮ ಸುರ । ಬಳಗಗೆಲಿದಿಹೆ ಬಲುಹ ॥ ಕಲಹೆದಲಿ ತೋರೆಂದು । ಬಲು ಶರವ ಸುರಿದಾ ॥ ೧ ॥ ತರಿವುತೆಂದನು ನಿಮ್ಮ । ವರ ಛಲವ ನಿಲಿಸಿ ನಾ । ಮೆರೆವ ಬಗೆ ನೋಡೆಂದು । ಸುರಿದ ಶಿಲೆಮಳೆಯಾ ॥ ೨ ॥ ಮಧ್ಯ ಮಾರ್ಗದಿ ಗೆಲಿದು । ಅಬ್ಧಿ ಪತಿ ನುಡಿದ ಶರ । ಬಿದ್ದರದ ತೋರೆಂದು । ಹೊಯ್ದಾಡುತಿರಲೂ ॥ ೩ ॥ ಇತ್ತಲುರಗೇಂದ್ರ ಸುರ । ಮೊತ್ತವಂ ಗೆಲಿದು ಮುಂ । ದೊತ್ತಿ ಬರೆ ಸುರಪಾಲ । ಮತ್ತೆ ತಡದೆಂದಾ ॥ ೪ ॥

|| ರಾಗ ಶಂಕರಾಭರಣ ಅಟತಾಳ ||

ಗೆಲಿದೆಯಾ ನೀ ಸಕಲ ಸುರರ | ಬಲುಸಮರ್ಥನಾದಡೆನ್ನೊ || ಛಳವಿಗೊಟ್ಟು ಸತಿಯ ಜೀವ | ಗೊಳಿಸಿ ಪೋಗೆಲಾ ||೧|| ನೀತಿ ವಂತರೆಂದು ಬುಧನ | ಮಾತಿಗಾಗಿ ತಂದೆ ಸತಿಯ || ಘಾತಿಸಿದೆ ದುಷ್ಕೃತ್ಯದಿಂದ | ಪಾತಕಿ ನೀನೂ ||೨|| ಹಿಂದೆ ನಮ್ಮ ಮಾನ ಗೊಂಡ | ಮಂದಗಮನೆಗಿಂದು ಕರ್ಮ || ಬಂಧನವು ತಪ್ಪಿತೈಸೆ | ನೊಂದುಕೊಳದಿರೂ ||೩|| ತೋರಿಪೆ ನಿನ್ನಯ ಧರ್ಮ | ಸಾರವೆಂದು ಗರಳ ಶರದಿ || ದೂರ ತೊಲಗಿಸಲ್ಕೆ ನುಡಿವ | ಮಾರಜನಕನೂ ||೪||

|| ರಾಗ ಸೌರಾಷ್ಟ್ರ ತ್ರಿಪುಟತಾಳ ||

ಬುಧನ ನುಡಿಯಿಂ ಸತಿಯು ಮಡಿದರೆ | ತ್ರಿದಶರಲಿ ಸಂಗರವು ನೀತಿಯೆ | ವಿಧಿಯೊಳಿದರಿತ್ಯರ್ಥಗೊಳಿಸೈ | ಮುದದಿ ನೀನೂ ||೧|| ಬಲ್ಲೆ ನಿನ್ನಯ ಕುಟಿಲತನಗಳ | ಇಲ್ಲಿಗೆನ್ನನು ಬರಲರುಹಿ ಸತಿ | ಯಲ್ಲಿ ನೀನಪವಾದ ಹೊರಿಸಿದೆ | ಖುಲ್ಲತನದೀ ||೨|| ಶ್ವಾನ ಬಾಲದ ತ್ರಾಣವಿಳಿಸಲು | ಕೋಣನನು ಬಲಿಕೊಟ್ಟ ತೆರವಿಂ | ದೇನು ಹಗೆ ತನವೆನ್ನೊಡನೆ ಗೀ | ರ್ವಾಣರುಳಿದೂ ||೩|| ಇಂದು ಸುರಪನ ಹೊಂದಿ ಸಮರಕೆ | ನಿಂದೆ ಎನ್ನೊಡ ನೀತಿಯೋ ಪೇ | ಳೆಂದು ತೆಗದೆಸೆ ಯಲ್ಕೆ ಶರಗಳ | ವೃಂದ ಕನಲೀ ||೪||

|| ಭಾಮಿನಿ ||

ಚಕ್ರವನು ತಿರುಹುತ್ತ ಹರಿ ಮುಂ | ದಕ್ಕೆ ಬರೆ ಸುರರೊಡಗಿ ಸಮರಕೆ | ಶಕ್ತಿಯಿಂದನುಜಾಗ್ರಜರು ಹೊಯ್ದಾಡುತಿರೆ ಕಣದೀ || ಘಕ್ಕನೈತಂದಾಗ ವಿಧಿ ಹರ | ರಕ್ಕರೆಯೊಳಾ ತಡದು ಸಕಲರ | ನಿಕ್ಕೆಲದಿ ನಿಲ್ಲಿಸುತ ನುಡಿದರು ವಿನಯ ಭಾವದಲೀ ||೧||

|| ರಾಗ ರೇಗುಪ್ತಿ ತ್ರಿಪುಟತಾಳ ||

ಏನಿದು ಸಮರವಯ್ಯಾ | ಗೋಕುಲದೆರೆಯಾ || ಏನಿದು ಸಮರ ವಯ್ಯಾ || ಏನು ಸಮರ ವಿಧಾನ ವೀ ಗೀ | ರ್ವಾಣರಿಗೆ ಸುರ ತಾಣ

ದಲಿ ಬಂ। ದೀ ನಿರೋಧವು ಪನ್ನಗರೊಳಿಂ। ಪೇಸದರ ಪರಿಪೂರ್ಣ ವರುಹೈ ॥ ೧ ॥ ನೀತಿ ವಿಶಾರದನೂ। ನಿಗಮಾಗಮಂಗಳ। ನೀ ತಿಳಿದಿಹ ಪ್ರಾಜ್ಞನೂ ॥ ಖ್ಯಾತಿಯಾಂತಿಹ ರೀತಿ ಯಾವುದು। ಈ ತೆರಜ ಧುರವೇತಕಾದುದು। ಧಾತ್ರಿತ್ರಯ ಪೊರೆವಾತ ನೀ ಲಯ। ಕರ್ತನಾದೆಯು ಮೃತ್ಯುಹರ ಪ್ರಿಯು ॥ ೨ ॥

॥ ವಾರ್ಧಿಕ್ಯ ॥

ಪದುಮನಾಭನು ನುಡಿದ ವಿಧಿ ಪುತ್ರಿ ರಜಕನೊಡ। ಮುದದಿ ಸುಖವಂ ಪಡೆದನು ಪೇಳೆ ಬುಧನೋರ್ವ। ನದರಿಂದಲವಳನು ಪರೀಕ್ಷಿಸುತ ಮೃತವಾಗೆ ಕದನ ಕಾರಣವಾಯಿತೂ ॥ ಇದಕೆ ನೀವೆಲ್ಲ ಶುಭ ಹದನ ಪೇಳ್ದರೆ ಮುಂದೆ। ಮುದದೊಳದರಂತೆ ನಾನಡವೆನೆಂದರುಹೆ ವಿಧಿ। ಮದನಾರಿಯುರು ಹರಿಯು ಕೃತಕವೆಂದರಿತು ಸಂತಸವಾಂತು ಮುಗುಳಿಂದರೂ ॥ ೧ ॥

॥ ರಾಗ ಸಾಂಗತ್ಯ ರೂಪಕತಾಳ ॥

ಮಡಿದ ನಾರಿಯುಳ ನಾವೊಡನೆ ಜೀವಿಸಿ ಫಣಿ। ಯೊಡೆಯ ಗಿತ್ತವಳ ಸಂತೈಸೀ ॥ ಪೊಡವಿಗೆ ಕಳುಹುವ ತಡವೇತಕೆನಲಾಗ। ಜಡಜನಾಭನು ಪೇಳ್ದನಾಗಾ ॥ ೧ ॥ ಇಂದ್ರನ ದುರಿಗೋಸ್ಕರ ಸತಿ ಧರ್ಮವ। ನಿಂದು ಸುಮ್ಮನೆ ಪರೀಕ್ಷಿಸಿದೇ ॥ ಮುಂದಗಮನೆಯಲ್ಲಿ ಕುಂದಕವೇನಿಲ್ಲ। ವೆಂದಾಗ ವಿಧಿ ಹರಿ ಹರರೂ ॥ ೨ ॥ ಅಮೃತ ಹಸ್ತದಿ ತಡವರಿಸಿ ಜೀವಿಸಲಾಗ। ಕಮಲ ಸಂಭವ ಹರರುಗಳಾ ॥ ಸುಮಗಂಧಿ ಕಾಣುತ್ತ ಮರುಗುತಿಂತೆಂದಳು। ಸುಮನಸರಿಂದಾದ ಬಗೆಗೇ ॥ ೩ ॥ ಯಾತಕೆನ್ನನು ಜೀವಿಸಿದಿರಿ ಸುಮ್ಮನೆ ನಾನು। ಧಾತ್ರಿ ಬಾಧಕಿಯು ದುಷ್ಕರ್ಮಿ ॥ ಪ್ರೀತಗೆನ್ನಲಿ ಲೇಶ ಪ್ರೀತಿಯಿಲ್ಲದ ಮೇಲೆ। ಯಾತಕಿರಲಿ ಮಾನ ಕಳೆದೂ ॥ ೪ ॥

॥ ರಾಗ ಸೌರಾಷ್ಟ್ರ ತ್ರಿಪುಟತಾಳ ॥

ಎಂದ ಮಾತಿಗೆ ನುಡಿದ ಹರಿ ಕೇಳ್। ಮಂದಗಾಮಿನಿ ನಿನ್ನೊಡನೆ ತಿಲ। ಕುಂದಕವು ಧಿಟವಿಲ್ಲ ಪೋಗೆಲೆ। ಮಂದಿರಕ್ಕೆ ॥ ೧ ॥

ಮೂರು ಲೋಕದಿ ನಿನ್ನ ಪೋಲುವ । ನಾರಿ ಪತಿವ್ರತೆಯುಳನರಿಯೆ ನೆಂ । ದಾ ರಮಾಧವ ನಾಗರಾಜನ ಕರೆದು ನುಡಿದಾ ॥ ೨ ॥ ಕೋಪಿ ಸದಿರೈ ಭುಜಗ ಪತಿಯೆ ಪ್ರತಾಪಿ ನೀನಹುದೈ ಜಗದಿ ಮ । ತ್ತೀ ಪತಿವ್ರತೆಯುಹುದು ತವ ಸತಿ । ತಾಪವೇಕೇ ॥ ೩ ॥ ಸುರಪನೆಂದುದ ಕಾಗಿ ನಿನ್ನಯ । ಅರಸಿಯೊಳಗಪವಾದ ಹೊರಿಸಿದೆ । ಬಂದೆ ನಾನೇ ವಿಪ್ರನಾಗುತ । ಸುರಸಭೆಯೊಳೂ ॥ ೪ ॥ ಇದಕೆ ಚಿಂತಿಸಬೇಡೆನುತ ಲಾ । ಸುದತಿಯುಳ ಫಣಿಪತಿಗೆ ಪಾಲಿಸಿ । ಸದನಕಟ್ಟಲು ಸಂತಸದಿ ತೆರ । ಳಿದರು ಬಳಿಕಾ ॥ ೫ ॥ ಸುರಪಗೆಂದನು ಹರಿಯು ನಿನ್ನಯು । ಹರಕೆ ತೀರ್ಮದೆ ಚಿಂತಿಸದಿರೆಂ । ದೊರದು ನಾಕವ ಪಾಲಿಸೆನುತಲಿ । ಹರಿಯು ನುಡಿದಾ ॥ ೬ ॥

॥ ಕಂದ ಪದ್ಯ ॥

ವಿಧಿಹರಿಹರರಿಸಗಿದ ಬಗೆ । ತ್ರಿದಶೇಂದ್ರಂ ಮುದವ ತಾಳಿ ಮನ್ನಿಸಿ ಮತ್ತಾ ॥ ಮುದಗಜಗಮನೆಯರಿಂದಲಿ । ವಿಧವಿಧದಾರತಿಯ ನೆತ್ತಿಸಿದ ಸಭೆಗೈದುಂ ॥ ೧ ॥

॥ ರಾಗ ಅರಭಿ ತ್ರಿಪುಟತಾಳ ॥

ಮೂರು ಜಗಕೆ ಹಿತ ದೋರಿ ಪಾಲಿಪ ತ್ರಯು । ಮೂರುತಿಗಳಿಗೆ ಶೃಂಗಾರದಿ ಸುರವರ ॥ ವಾರಸಹಿತವಿತ್ತ ಭಾರಿ ಮನ್ನಣೆಗಾಗಿ । ನಾರಿ ಯರಾರತಿಯ ॥ ಬೆಳಗೀರೇ ॥ ಶೋಭಾನಂ ॥ ೧ ॥

॥ ಭಾಮಿನಿ ॥

ಈ ತೆರದೊಳಾರತಿಯ ಸ್ವೀಕರಿಸಿ । ಸುತ್ತಲೆಂದರು ಕಷ್ಟಕಾಲಕೆ । ನೀ ತಿಳುಹೆ ಶುಭವೀವೆವಾವೆಂದೆನುತ ತೆರಳಿದರೂ ॥ ಸೋತ ಸುರಪತಿ ಮರುಕ ತೊರೆದಾ । ಖ್ಯಾತಿಯಿಂ ಸುರವ್ರಾತದೊಡನಹಿ । ನಾಥ ಸಹೆ ಸಂಪ್ರೀತಿಯಿಂದಿರಲಾಗೆ ಮಂಗಲವೂ ॥ ೧ ॥

॥ ರಾಗ ಮೋಹನ ಆದಿತಾಳ ॥

ಶೇಷಶಯನ ಶ್ರೀಯರಸಗೆ । ಜಯಮಂಗಲಂ ॥ ಕ್ಲೇಶ ನಾಶ ದೋಷಹರಗೆ । ಶುಭಮಂಗಲಂ ॥ ೧ ॥ ದೈತ್ಯಕುಲಕುಠಾರನಿಂಗೆ ।

ಜಯ ಮಂಗಲಂ ॥ ಪೃಥ್ವಿಯೊಳುತ್ತಮ ಹರಿಗೆ । ಶುಭಮಂಗಲಂ ॥ ೨ ॥ ಮೌನಿಕುಲಸನ್ನುತನಿಂಗೆ । ಜಯ ಮಂಗಲಂ ॥ ಕಣ್ವಪುರ ಗೋಪಾಲಕೃಷ್ಣಗೆ । ಶುಭಮಂಗಲಂ ॥ ೩ ॥

॥ ವಾರ್ಧಿಕ್ಯ ॥

ಸ್ಕಾಂದ ಪೌರಾಣದೊಳಗಿಹ ನಾಗವಿಜಯವಿದ । ನಂದದಿಂ ನಾನ್ನೂರನಲ್ವತ್ತಮೂರು ಪದ । ದಿಂದ ವಿರಚಿಸಿದೆ ನಾ ಯಕ್ಷಗಾನದಿ ವಾಣಿ ಪೇಳಿಸಿದ ತೆರದಿಂದಲೀ ॥ ಛಂದಸ್ಸು ಪ್ರಾಸಯತಿ ಮಾತ್ರಾ ಗಣಂಗಳಂ । ಸ್ನೊಂದರಿಯೆ ನಿದರೊಳೊಪ್ಪಿಹ ತಪ್ಪುಗಳ ಸುಜನ । ವೃಂದ ಶೋಧಿಸಿ ತಿದ್ದಿ ಹರಸುತೆನ್ನೇಳಿಗೆಗೆ ಬಯಸುತಿಹರಿಂಗೆರಗುವೇ ॥ ೧ ॥ ಇದರನನುದಿನ ವಾಚಿಸುತ ಪೇಳಿ ಕೇಳುವಗೆ । ಮುದದೊಳಾ ಕಣ್ವಪುರದೊಡೆಯ ಸೌಭಾಗ್ಯ ಬಲು । ವಿಧದ ಸಂಪತ್ತು ಸಂಸಾರದಿಂ ಪೊರವ ಧಿಟವೆಂದೆನುತ ನಾಂ ಪೇಳ್ವೆನೂ ॥ ಇದ ಬಲಿಪ ಭಾಗವತನನುಜ ಸುತ ಮಾಧವಂ । ಗುದಿಸೀರ್ಪ ನಾರಾಯಣಂ ತಿಳಿದ ತೆರದಿ ಮಾ । ಡಿದ ಕೃತಿಯು ಧರೆಯೊಳೆಲ್ಲರಿಗರ್ಪಿತವು ನಿರತ ಹಾರೈಪುದೆನ್ನೇಳ್ಗೆಯಾ ॥ ೨ ॥

ಸ್ಕಾಂದಪುರಾಣದೊಳಗಣ ನಾಗವಿಜಯ ಪ್ರಸಂಗವು ೪೪೫ ಪದ್ಯಕ್ಕೆ ಸಮಾಪ್ತಿ.

— ಶುಭಂ —

ಇದೇ ಲೇಖಕರ ಇತರ ಕೃತಿಗಳು :

1. ಯಕ್ಷಗಾನ ನಟ ಚರಿತ್ರೆ (ಆಟದೊಳಗಣ ಆಟ) 0-50
2. ಚಂದ್ರಸೇನ ಚರಿತ್ರೆ
3. ಇಂದ್ರ ಚಂದ್ರರ ಕಾಳಗ
4. ಕೇತಕೀ ಶಾಪ
5. ವೃತ್ರಾಸುರ ವಧೆ
6. ರುಕ್ಮಾಂಗದ ಚರಿತ್ರೆ

ಅಚ್ಚಿನಲ್ಲಿವೆ.